ವೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 28 ಮಂಗಳವಾರ 2022

ಸಂಪುಟ: 43 | ಸಂಚಿಕೆ: 73 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗಳ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಅಗ್ನಿಪಥ್: 4 ದಿನಕ್ಕೆ 94 ಸಾವಿರ ಅರ್ಜಿ

ನವದೆಹಲಿ: ಭಾರತೀಯ ವಾಯು ಪಡೆ(ಐಎಎಫ್) ಅಗ್ನಿಪಥ್ ನೇಮಕಾತಿ ಯೋಜನೆಯಡಿ ಶುಕ್ರವಾರ ನೋಂದಣಿ ಪ್ರಕ್ರಿಯೆಗೆ ಚಾಲನೆ ನೀಡಿತ್ತು. ಕೇವಲ 4 ದಿನಗಳಲ್ಲಿ 94,000 ಅಗ್ನಿವೀರ್ ಆಕಾಂಕ್ಷಿಗಳು ಇದಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಜೂನ್ 14ರಂದು ಅಗ್ನಿಪಥ್ ▶ 6ನೇ ಪುಟಕ್ಕೆ

ಸಾಹಿತಿಗಳು, ಮಠಾಧೀಶರು, ಸಮುದಾಯಗಳ ಆಕ್ರೋಶಕ್ಕೆ ಮಣಿದ ಸರ್ಕಾರ

ಪಠ್ಯ ಪುಸ್ತಕ ಲೋಪ ಸರಿಪಡಿಸಿ ಆದೇಶ

ಬೆಂಗಳೂರು, ಜೂ.27(ಕೆಎಂಶಿ)– ಮಠಾಧೀಶರು, ಸಾಹಿತಿಗಳ ಆಕ್ರೋಶಕ್ಕೆ ಮಣಿದ ರಾಜ್ಯ ಸರ್ಕಾರ ಪಠ್ಯ ಪುಸ್ತಕಗಳ ಲೋಪಗಳನ್ನು ಸರಿಪಡಿಸಿ, ಆದೇಶ ಹೊರಡಿಸಿದೆ.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಪಠ್ಯ ಪುಸ್ತಕ ಲೋಪಗಳಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ನೀಡಿದ ಎಚ್ಚರಿಕೆ ಬೆನ್ನಲ್ಲೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉನ್ನತ ಮಟ್ಟದ ಸಭೆ ನಡೆಸಿ, ಪರಿಷ್ಕರಣೆ ನಿರ್ಧಾರ ಕೈಗೊಂಡಿದ್ದಲ್ಲದೆ, ಸರ್ಕಾರಿ ಆದೇಶ ಹೊರಡಿಸಿದ್ದಾರೆ. ಈಗಾಗಲೇ ಪಠ್ಯ ಪುಸ್ತಕಗಳು ಮಕ್ಕಳ ಕೈ ಸೇರಿರುವುದರಿಂದ ಪರಿಷ್ಕರಣೆಗೆ ಒಳಪಟ್ಟಿರುವ ತಿದ್ದುಪಡಿಗಳನ್ನು ತಿದ್ದೋಲೆ ರೂಪದಲ್ಲಿ ನೀಡಲು ತೀರ್ಮಾನಿಸಲಾಗಿದೆ. ಸಾಮಾನ್ಯವಾಗಿ ಈ ಹಿಂದೆ ಪಠ್ಯಪುಸ್ತಕಗಳ ರಚನೆ ಪರಷ್ಕರಣೆಗೆ ಒಳಗಾದಾಗ ಅನುಸರಿಸಿದ ಮಾನದಂಡವನ್ನೇ ಈಗಲೂ ಅನುಸರಿಸಿ, ವಿದ್ಯಾರ್ಥಿಗಳಿಗೆ ಹೆಚ್ಚುವರಿಯಾಗಿ ತಿದ್ದುಪಡಿಯ ಪ್ರತಿಗಳನ್ನು ನೀಡಲು ತೀರ್ಮಾನಿಸಲಾಗಿದೆ.

ಈಗಾಗಲೇ ಮಕ್ಕಳ ಕೈಸೇರಿರುವ ಪಠ್ಯಗಳಿಗೆ ತಿದ್ದೋಲೆ ಮೂಲಕ ಸೇರ್ಪಡೆ

9ನೇ ತರಗತಿಯಲ್ಲಿ 'ಸಂವಿಧಾನ ಶಿಲ್ಪಿ' ಪದ ಕೈಬಿಡಲಾಗಿತ್ತು ಇದೀಗ ಸಂವಿಧಾನ ಶಿಲ್ಪಿ ಪದವನ್ನು ಸೇರಿಸುವಂತೆ ಆದೇಶ ಹೊರಡಿಸಲಾಗಿದೆ. 7ನೇ ತರಗತಿಯ ಸಮಾಜ ವಿಜ್ಞಾನ ಪಠ್ಯದಲ್ಲಿ 'ಭಕ್ತಿಪಂಥ' ಕೈಬಿಡಲಾಗಿತ್ತು, ಪುರಂದರದಾಸರು, ಕನಕದಾಸರು ಪಾಠಕ್ಕೆ ಕತ್ತರಿ ಹಾಕಲಾಗಿತ್ತು, ಭಕ್ತಿ ಪಂಥ ಮತ್ತು ಸೂಫಿ ಪಂಥ ಪಾಠ ಸಂಪೂರ್ಣ ಸೇರ್ಪಡೆಗೊಂಡಿದೆ. 7ನೇ ತರಗತಿಯ ಪ್ರಥಮ ಭಾಷೆಯಲ್ಲಿ ಗೊಂದಲ, ಮೂಲ ಕೃತಿಕಾರರ ▶ 8ನೇ ಪುಟಕ್ಕೆ

> “ಪಠ್ಯ ಪರಿಷ್ಕರಣೆಗೆ ಸಂಬಂಧಿಸಿದಂತೆ ಕೆಲ ಮಾರ್ಪಾಡುಗಳನ್ನು ಮಾಡಲಾಗಿದೆ. ಕೆಲವು ಕಡೆ ಹಳೆಯದನ್ನೇ ಉಳಿಸಿಕೊಳ್ಳಲಾಗಿದೆ ಎಂದರು. ಪಠ್ಯಪುಸ್ತಕ ಪರಿಷ್ಕರಣೆ ಸಂಬಂಧ ಮಾಜಿ ಪ್ರಧಾನಿ ದೇವೇಗೌಡರಿಗೆ ಎಲ್ಲ ಪ್ರತಿಗಳೊಂದಿಗೆ ಇಂದು ಉತ್ತರ ಕಳುಹಿಸಿಕೊಡಲಾಗುವುದು.
>
> –ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ವಿಲಕ್ಷಣ ವ್ಯಕ್ತಿತ್ವದವರಿಗೆ ಪಠ್ಯ ಪುಸ್ತಕ ಪರಿಷ್ಕರಣೆ ಜವಾಬ್ದಾರಿ ನೀಡಬಾರದು

ಬೆಂಗಳೂರು: ಶಾಲಾ ಪಠ್ಯಪುಸ್ತಕ ಪರಿಷ್ಕರಣೆ ಸಮಿತಿಗಳಿಗೆ ವಿಲಕ್ಷಣ ವ್ಯಕ್ತಿತ್ವದವರನ್ನು ನೇಮಿಸಬಾರದು. ಅಂತಹ ಸಮಿತಿಗಳಿಗೆ ನೇಮಕ ಮಾಡುವ ಮುನ್ನ ಸರ್ಕಾರ ಎಚ್ಚರಿಕೆ ವಹಿಸಬೇಕು ಎಂದು ಪಟ್ಟನಾಯಕನಹಳ್ಳಿ ಗುರುಗುಂಡ ಬ್ರಹ್ಮೇಶ್ವರ ಮಠದ ನಂಜಾವಧೂತ ಸ್ವಾಮೀಜಿ ಹೇಳಿದರು.



ಪಠ್ಯಮಸ್ತಕ ಪರಿಷ್ಕರಣೆ ಕುರಿತು ಆಕ್ಷೇಪ ವ್ಯಕ್ತಪಡಿಸಿದ ಸ್ವಾಮೀಜಿ, ರೋಹಿತ್ ಚಕ್ರತೀರ್ಥ ಅವರನ್ನು ಪಠ್ಯಪುಸ್ತಕ ಪರಿಶೀಲನಾ ಸಮಿತಿ ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದನ್ನು ವಿರೋಧಿಸಿದರು. ಸರ್ಕಾರಿ ಶಾಲೆ, ಕಾಲೇಜುಗಳಲ್ಲಿ ಸರ್ಕಾರ ರೂಪಿಸಿದ ಪಠ್ಯವನ್ನು ಓದಿ, ಕಲಿತು, ಪರೀಕ್ಷೆ ಬರೆಯಬೇಕು. ಅಂತಹ ಪಠ್ಯ ರೂಪಿಸುವವರು ಎಡ, ಬಲ ಅಥವಾ ಇನ್ನಿತರ ಸಿದ್ಧಾಂತದ ಹಿಂಬಾಲಕರು ಆಗಿರಬಾರದು. ಸಮಚಿತ್ತದಿಂದ ಎಲ್ಲವನ್ನೂ ನೋಡುವ ಪ್ರಾಜ್ಞರಾಗಿರಬೇಕು. ಆಳವಾದ ಅಧ್ಯಯನಶೀಲತೆ ಹೊಂದಿದ ವ್ಯಕ್ತಿಗಳನ್ನು ಪಠ್ಯಕ್ರಮ ರೂಪಿಸಲು ನೇಮಿಸಬೇಕು. ಪವಿತ್ರವಾದ ನಾಡ ಬಾವುಟವನ್ನು ಯಾವುದೋ ಒಂದು ವಸ್ತುವಿಗೆ (ಚಡ್ಡಿ) ಹೋಲಿಸಿದ ವ್ಯಕ್ತಿಯನ್ನು ಪಠ್ಯಪುಸ್ತಕ ಪರಿಷ್ಕರಣೆಗೆ ನೇಮಿಸಿದ್ದು ಸರಿಯಲ್ಲ ಎಂದು ಹೇಳಿದರು.


ಬಸವಣ್ಣ, ಡಾ.ಬಿ.ಆರ್. ಅಂಬೇಡ್ಕರ್ ಮುಂತಾದ ಮಹನೀಯರಿಗೆ ಅವಮಾನ ಹೊಸದೇನೂ ಅಲ್ಲ. ಈಗ ಶಾಲಾ ಪಠ್ಯಪುಸ್ತಕಗಳಲ್ಲಿ ಅವಮಾನ ಆಗಿರುವುದಕ್ಕೆ ಹೆಚ್ಚು ವಿರೋಧ ವ್ಯಕ್ತವಾಗಿದೆ. ಲೋಪವನ್ನು ಸರಿಪಡಿಸಿ ಮಹನೀಯರನ್ನು ಗೌರವಿಸುವ ಕೆಲಸವನ್ನು ಸರ್ಕಾರ ಮಾಡಬೇಕು ಎಂದು ಆಗ್ರಹಿಸಿದರು.

ಎಸ್.ಎಂ.ಕೃಷ್ಣ, ಡಾ.ಸುಧಾಮೂರ್ತಿ, ಪ್ರಕಾಶ್ ಪಡುಕೋಣೆಗೆ

ನಾಡಪ್ರಭು ಕೆಂಪೇಗೌಡ ಅಂತಾರಾಷ್ಟ್ರೀಯ ಪ್ರಶಸ್ತಿ ಪ್ರದಾನ

ಜಗತ್ ಪ್ರಸಿದ್ಧ ಬೆಂಗಳೂರು ಮತ್ತಷ್ಟು ಬೆಳೆಯಲಿ

ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಆಶಯ



ಬೆಂಗಳೂರು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಸೋಮವಾರ ನಾಡಪ್ರಭು ಕೆಂಪೇಗೌಡರ 513ನೇ ಜಯಂತ್ಯುತ್ಸವ ಸಮಾರಂಭದಲ್ಲಿ ಡಾ.ಸುಧಾಮೂರ್ತಿ (ಪತಿ ಎನ್.ಆರ್.ನಾರಾಯಣಮೂರ್ತಿ ಪರವಾಗಿ), ಮಾಜಿ ಸಿಎಂ ಎಸ್.ಎಂ.ಕೃಷ್ಣ, ಪ್ರಕಾಶ್ ಪಡುಕೋಣೆ ಅವರಿಗೆ ನಾಡಪ್ರಭು ಕೆಂಪೇಗೌಡ ಅಂತರರಾಷ್ಟ್ರೀಯ ಪ್ರಶಸ್ತಿ ಪ್ರದಾನ ಮಾಡಲಾಯಿತು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವರಾದ ಡಾ.ಅಶ್ವತ್ಥ್ ನಾರಾಯಣ, ಆರ್.ಅಶೋಕ್ ಇನ್ನಿತರರಿದ್ದಾರೆ.

ಬೆಂಗಳೂರು,ಜೂ.27(ಕೆಎಂಶಿ)–ಜಗತ್ತಿನ ಗಮನ ಸೆಳೆಯುತ್ತಿರುವ ಬೆಂಗಳೂರು ನಗರ ಇನ್ನಷ್ಟು ಬೆಳೆಯಬೇಕು. ಆ ದಿಸೆಯಲ್ಲಿ ರಾಜ್ಯ ಸರ್ಕಾರ ದೃಢವಾದ ಹೆಜ್ಜೆಗಳನ್ನು ಇಡಬೇಕು ಎಂದು ಮಾಜಿ ಮುಖ್ಯಮಂತ್ರಿ, ಬಿಜೆಪಿ ನಾಯಕ ಎಸ್.ಎಂ.ಕೃಷ್ಣ ಹೇಳಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಕೆಂಪೇಗೌಡರ 513ನೇ ಜಯಂತ್ಯುತ್ಸವದಲ್ಲಿ 'ನಾಡಪ್ರಭು ಕೆಂಪೇಗೌಡ ಅಂತರ ರಾಷ್ಟ್ರೀಯ ಪ್ರಶಸ್ತಿ' ಸ್ವೀಕರಿಸಿ ಅವರು ಮಾತನಾಡಿದರು.

1998–99ರಲ್ಲಿ ರಾಷ್ಟ್ರದ ಸಿಲಿಕಾನ್ ಕೇಂದ್ರ ಯಾವ ನಗರ ಆಗಬೇಕು ಎಂಬ ವಿಷಯದಲ್ಲಿ ಬೆಂಗಳೂರು ಮತ್ತು ಹೈದರಾಬಾದ್ ನಡುವೆ ತೀವ್ರ ಪೈಪೋಟಿ ಇತ್ತು. ಅಂತಿಮವಾಗಿ ಬೆಂಗಳೂರು ಯಶಸ್ಸು ಪಡೆಯಿತು. ಅದನ್ನು ಉಳಿಸಿಕೊಂಡು ಹೋಗಬೇಕಿದೆ ಎಂದರು. ಹುಬ್ಬಳ್ಳಿ– ಧಾರವಾಡ, ಶಿವಮೊಗ್ಗ, ಮೈಸೂರು, ಕಲಬುರ್ಗಿ ಸೇರಿದಂತೆ ಎರಡನೇ ಹಂತದ ನಗರಗಳೂ ಅಭಿವೃದ್ಧಿ ಹೊಂದಬೇಕು. ಅಭಿವೃದ್ಧಿಯನ್ನು ವಿಸ್ತರಿಸುವ ಕೆಲಸ ಆಗಬೇಕು. ಬೆಂಗಳೂರು ನಗರವನ್ನು ನಿರ್ಮಿಸಿದ ಕೆಂಪೇಗೌಡರ ಆಶಯಕ್ಕೆ ಪೂರಕವಾಗಿ ಈಗ ವಿಸ್ತಾರವಾಗಿ ಬೆಳೆದಿದೆ. ▶ 8ನೇ ಪುಟಕ್ಕೆ

ವಿಧಾನಸೌಧ ಆವರಣದಲ್ಲಿ ಕೆಂಪೇಗೌಡರ ಪ್ರತಿಮೆ: ಸಿಎಂ

ಬೆಂಗಳೂರು: ರಾಜ್ಯ ರಾಜಧಾನಿಯ ನಿರ್ಮಾತೃ ಕೆಂಪೇಗೌಡರ ಪ್ರತಿಮೆಯನ್ನು ವಿಧಾನಸೌಧದ ಆವರಣದಲ್ಲಿ ಸ್ಥಾಪಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು. ಕೆಂಪೇಗೌಡರ ಪ್ರತಿಮೆಯನ್ನು ವಿಧಾನಸೌಧದ ಆವರಣದಲ್ಲಿ ಸ್ಥಾಪಿಸಲು ಬಿಬಿಎಂಪಿ ಆಡಳಿತ 2017ರಲ್ಲೇ ನಿರ್ಣಯ ಕೈಗೊಂಡಿತ್ತು. 12 ಲಕ್ಷ ಅನುದಾನ ಮೀಸಲಿಟ್ಟಿತ್ತು. ಆದರೆ, ಪ್ರತಿಮೆ ಸ್ಥಾಪನೆ ಆಗಿಲ್ಲ. ಮುಂದಿನ ವರ್ಷದ ಕೆಂಪೇಗೌಡರ ಜಯಂತಿ ಒಳಗಾಗಿ ವಿಧಾನಸೌಧದ ಆವರಣದಲ್ಲಿ ಪ್ರತಿಮೆ ಸ್ಥಾಪಿಸಲಾಗುವುದು. ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ 108 ಅಡಿ ಎತ್ತರದ ಕೆಂಪೇಗೌಡರ ಪ್ರತಿಮೆ ಸ್ಥಾಪನೆ ಕಾಮಗಾರಿ ಅಂತಿಮ ಹಂತದಲ್ಲಿದೆ. ಪ್ರಧಾನಿ ಮೋದಿ ಅವರಿಂದ ಉದ್ಘಾಟಿಸುವ ಯೋಚನೆ ಇದೆ ಎಂದರು.

[ಮೈಸೂರಲ್ಲಿ ಕೆಂಪೇಗೌಡರ ಜಯಂತಿ ಪುಟ–3]

ಬಿಜೆಪಿ ಅರ್ಧ ಶಾಸಕರಿಗೆ ಟಿಕೆಟ್ ಕೈತಪ್ಪುವ ಸಾಧ್ಯತೆ

ಬೆಂಗಳೂರು, ಜೂ.27(ಕೆಎಂಶಿ)– ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಸೇರಿದಂತೆ ಹಾಲಿ ವಿಧಾನಸಭೆಯ ಶೇ.50ಕ್ಕೂ ಹೆಚ್ಚು ಸದಸ್ಯರಿಗೆ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಟಿಕೆಟ್ ಕೈ ತಪ್ಪಲಿದೆ.

ಕರ್ನಾಟಕದಲ್ಲಿ ಮತ್ತೆ ಅಧಿಕಾರದ ಚುಕ್ಕಾಣಿ ಹಿಡಿಯಲು ಶತ ಪ್ರಯತ್ನ ಮಾಡುತ್ತಿರುವ ಬಿಜೆಪಿ, ಉತ್ತರ ಪ್ರದೇಶ ವಿಧಾನ ಸಭಾ ಚುನಾವಣೆಯಲ್ಲಿ ಅನುಸರಿಸಿದ ಮಾನದಂಡಗಳನ್ನೇ ಅನುಷ್ಠಾನಗೊಳಿಸಲು ಮುಂದಾಗಿದೆ.

ಸಮೀಕ್ಷೆಗಳು, ನಂಬಲರ್ಹ ಮಾಹಿತಿ ಆಧರಿಸಿ ಬಿಜೆಪಿ ವರಿಷ್ಠರ ನಿರ್ಧಾರ

ಪಕ್ಷದ ಈ ನಿರ್ಧಾರದಿಂದ ಘಟಾನುಘಟ್ಟಿಗಳಿಗೆ ಮುಂಬರುವ ಚುನಾವಣೆಯಲ್ಲಿ ಕಮಲದ ಚಿನ್ಹೆಯಡಿ ಸ್ಪರ್ಧಿಸಲು ಅವಕಾಶ ಇರುವುದಿಲ್ಲ. ಖಾಸಗಿ ಚುನಾವಣಾ ಸಮೀಕ್ಷೆ, ಕೇಂದ್ರ ಸರ್ಕಾರ ತನ್ನದೇ ಮೂಲಗಳಿಂದ ಪಡೆದಿರುವ ಮಾಹಿತಿ ಇದೆಲ್ಲವನ್ನೂ ಗಣನೆಗೆ ತೆಗೆದುಕೊಂಡು ಪಕ್ಷ ಇಂತಹ ಕಠಿಣ ತೀರ್ಮಾನಕ್ಕೆ ಬಂದಿದೆ. ರಾಜ್ಯ ವಿಧಾನಸಭೆ ಚುನಾವಣೆಗೆ 9 ತಿಂಗಳು ಬಾಕಿ ಇರುವ ಮುನ್ನವೇ ಬಿಜೆಪಿ ಚುನಾವಣಾ ಸಿದ್ಧತೆ ನಡೆಸಿದೆ. ಯಡಿಯೂರಪ್ಪ, ಸಚಿವರಾದ ▶ 8ನೇ ಪುಟಕ್ಕೆ

ಸಿಎಂ ಅಭ್ಯರ್ಥಿ ನಿಷ್ಕರ್ಷೆಗೆ ಸಿದ್ದರಾಮಯ್ಯ ಬಣ ಪಟ್ಟು

- ಮಹತ್ವದ ವಿಚಾರಗಳ ಬಗ್ಗೆ ಚರ್ಚಿಸಲು ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್‌ಗೆ ಹೈಕಮಾಂಡ್ ಬುಲಾವ್
- ಸಿಎಂ ಅಭ್ಯರ್ಥಿ ಘೋಷಿಸಿದರಷ್ಟೇ ಸಿದ್ದರಾಮಯ್ಯ ಸ್ಪರ್ಧೆ: ಬೆಂಬಲಿಗರ ಪಟ್ಟು
- ಈಗಲೇ ಸಿಎಂ ಅಭ್ಯರ್ಥಿ ಘೋಷಿಸಿದರೆ ಲಿಂಗಾಯತರು, ಒಕ್ಕಲಿಗರು ಪರಿಶಿಷ್ಟರ ಮತ ಬರಲ್ಲ: ಡಿಕೆಶಿ ಬಣ ವಾದ

ಬೆಂಗಳೂರು, ಜೂ.27– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ಹೈಕಮಾಂಡ್ ಬುಲಾವ್ ನೀಡಿದೆ. ಹೀಗಾಗಿ ಇಬ್ಬರು ನಾಯಕರು ನಾಳೆ (ಮಂಗಳವಾರ) ದೆಹಲಿಗೆ ಹಾರಲಿದ್ದು, ಮಧ್ಯಾಹ್ನ 3 ಗಂಟೆಗೆ ರಾಹುಲ್ ಗಾಂಧಿ ಜೊತೆ ಚರ್ಚೆ ನಡೆಸಲಿದ್ದಾರೆ.






ಭಾರತ್ ಜೋಡೋ ಯಾತ್ರೆ ಹೊರತಾಗಿ ರಾಜ್ಯ ರಾಜಕಾರಣ, ರಾಜ್ಯ ಕಾಂಗ್ರೆಸ್ ನಾಯಕತ್ವದ ಬಗ್ಗೆ ರಾಹುಲ್ ಗಾಂಧಿ ಮಾತುಕತೆ ನಡೆಸಲಿದ್ದಾರೆ. ಈಗಾಗಲೇ ಹೈಕಮಾಂಡ್ ಮುಂದೆ ಸಿಎಂ ಅಭ್ಯರ್ಥಿ ಘೋಷಣೆ ಮಾಡುವಂತೆ ಸಿದ್ದರಾಮಯ್ಯ ಬಣ ವಾದ ಮಂಡಿಸಿದೆ. ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಘೋಷಣೆ ಮಾಡದಿದ್ದರೆ ಸಿದ್ದರಾಮಯ್ಯ ಚುನಾವಣೆಗೆ ಸ್ಪರ್ಧಿಸುವುದಿಲ್ಲ ಎಂದು ಪಟ್ಟು ಹಿಡಿದಿದ್ದಾರೆ. ಮುಖ್ಯಮಂತ್ರಿ ಅಭ್ಯರ್ಥಿ ಅಲ್ಲದೇ ಹೋದರೆ ಕೇವಲ ಶಾಸಕರಾಗಿ ಇನ್ನೇನು ಮಾಡುವುದಿದೆ ಎಂದು ಸಿದ್ದರಾಮಯ್ಯ ಬೆಂಬಲಿಗರು ವರಿಷ್ಠರ ಬಳಿ ವಾದ ಮಾಡಿದ್ದಾರೆ. ಇನ್ನು ತಾನು ಕೂಡ ಪಕ್ಷಕ್ಕಾಗಿ, ಗಾಂಧಿ ಪರಿವಾರಕ್ಕಾಗಿ ಸಾಕಷ್ಟು ಕೆಲಸ ಮಾಡಿದ್ದೀನಿ ಎಂದು ▶ 8ನೇ ಪುಟಕ್ಕೆ

ಕೆ.ಆರ್.ಪೇಟೆ ಈಶ್ವರ ದೇವಾಲಯದಲ್ಲಿ ರೌಡಿಶೀಟರ್ ಬರ್ಬರ ಹತ್ಯೆ

- ಹಳೇ ವೈಷಮ್ಯದಿಂದ ಕೊಲೆ ನಡೆದಿರುವ ಶಂಕೆ
- ಹತ್ಯೆಗೀಡಾದ ಅರುಣನ ವಿರುದ್ಧ ಕೇಸ್‌ಗಳಿದ್ದವು

ಕೆ.ಆರ್.ಪೇಟೆ,ಜೂ.27–ಹಾಡಹಗಲೇ ದೇವಸ್ಥಾನದ ಆವರಣದಲ್ಲೇ ರೌಡಿಶೀಟರ್‌ವೊಬ್ಬನನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಬರ್ಬರವಾಗಿ ಹತ್ಯೆ ಮಾಡಿದ ಘಟನೆ ಕೆ.ಆರ್.ಪೇಟೆ ಪಟ್ಟಣದಲ್ಲಿ ಸೋಮವಾರ ಬೆಳಗ್ಗೆ ನಡೆದಿದೆ.



ಅಲ್ಲೂ ಅರುಣ

ಕೊಲೆ, ಅಪಹರಣ, ಹಫ್ತಾ ವಸೂಲಿ ಸೇರಿದಂತೆ ಹಲವಾರು ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿ ಕೆ.ಆರ್.ಪೇಟೆಯಿಂದ ಗಡಿಪಾರು ಮಾಡಲಾಗಿದ್ದ ರೌಡಿಶೀಟರ್ ಅರುಣ ಅಲಿಯಾಸ್ ಅಲ್ಲೂ ಅರುಣ(38) ಹತ್ಯೆಗೀಡಾದವನು.

ಮೈಸೂರಲ್ಲಿ ವಾಸವಿದ್ದ ಅರುಣ, ಸೋಮವಾರ ಬೆಳಗ್ಗೆ 9.30ರ ವೇಳೆಯಲ್ಲಿ ತನ್ನ ಸಂಬಂಧಿಕ ಪ್ರವೀಣ್‌ನ ಬೈಕ್‌ನಲ್ಲಿ ಕೆ.ಆರ್.ಪೇಟೆ ಶ್ರವಣಬೆಳಗೊಳ ರಸ್ತೆಯಲ್ಲಿರುವ ಈಶ್ವರ ದೇವಾಲಯವನ್ನು ಪ್ರವೇಶಿಸುತ್ತಿದ್ದಂತೆಯೇ ಐದಾರು ಜನರಿದ್ದ ತಂಡ ಆತನ ಮೇಲೆ ಮುಗಿ ಬಿದ್ದು ದೇವಸ್ಥಾನದ ಆವರಣದಲ್ಲೇ ಮಾರಕಾಸ್ತ್ರಗಳಿಂದ ಮನಸೋ ಇಚ್ಛೆ ಕೊಚ್ಚಿ ಬರ್ಬರವಾಗಿ ಹತ್ಯೆ ಮಾಡಿ ಪರಾರಿಯಾಗಿದೆ.

ವಿವರ: ಹತ್ಯೆಗೀಡಾದ ಅಲ್ಲೂ ಅರುಣ ಕುಖ್ಯಾತ ರೌಡಿಶೀಟರ್ ಆಗಿದ್ದು, ಎರಡು ಕೊಲೆ ಪ್ರಕರಣಗಳಲ್ಲಿ ಜೈಲು ಪಾಲಾಗಿದ್ದ. ರಾಜಕಾರಣಿಗಳೂ ಸೇರಿದಂತೆ ಉದ್ಯಮಿಗಳನ್ನು ಬೆದರಿಸಿ ಹಫ್ತಾ ವಸೂಲಿ ಮಾಡುತ್ತಿದ್ದ. ತನಗೆ ಹಫ್ತಾ ▶ 6ನೇ ಪುಟಕ್ಕೆ

ಚಾಮುಂಡಿಬೆಟ್ಟದಲ್ಲಿ ಆಷಾಢ ಪೂಜಾ, ವರ್ಧಂತ್ಯೋತ್ಸವಕ್ಕೆ ಸಿದ್ಧತೆ

- ಬೆಟ್ಟಕ್ಕೆ ಖಾಸಗಿ ವಾಹನಗಳ ನಿಷೇಧ
- ಉಚಿತ ಬಸ್ ವ್ಯವಸ್ಥೆ
- ಎರಡು ಡೋಸ್ ಲಸಿಕೆ ಇಲ್ಲವೇ ನೆಗೆಟಿವ್ ರಿಪೋರ್ಟ್ ಕಡ್ಡಾಯ
- ಪ್ರಸಾದ ವಿನಿಯೋಗಕ್ಕೂ ಅವಕಾಶ

ಮೈಸೂರು,ಜೂ.27(ಎಸ್‌ಬಿಡಿ)–ಎರಡು ವರ್ಷಗಳ ನಂತರ ಆಷಾಢ ಮಾಸದ ಶುಕ್ರವಾರಗಳು ಹಾಗೂ ವರ್ಧಂತ್ಯೋತ್ಸವ ದಿನದಂದು ಶ್ರೀ ಚಾಮುಂಡೇಶ್ವರಿ ದರ್ಶನಕ್ಕೆ ಮುಕ್ತ ಅವಕಾಶ ಕಲ್ಪಿಸಲಾಗಿದ್ದು, ಎಲ್ಲಾ ರೀತಿಯ ಅಗತ್ಯ ಸಿದ್ಧತೆಗೆ ಜಿಲ್ಲಾಡಳಿತ ಮುಂದಾಗಿದೆ. ಮೈಸೂರಿನ ಚಾಮುಂಡಿ ಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಾಲಯದಲ್ಲಿ ಆಷಾಢ ಮಾಸದಲ್ಲಿ ವಿಶೇಷ ಪೂಜಾ ಕೈಂಕರ್ಯಗಳು ನೆರವೇರಿದರೂ ಕಳೆದ 2 ವರ್ಷ ಕೊರೊನಾ ಕಾರಣದಿಂದ ತಾಯಿಯ ದರ್ಶನಕ್ಕೆ ಭಕ್ತರಿಗೆ ಅವಕಾಶ ನೀಡಿರಲಿಲ್ಲ. ಆದರೆ ಈ ವರ್ಷ ಕೊರೊನಾ ಪೂರ್ವದಲ್ಲಿದ್ದ ರೀತಿಯಲ್ಲಿ ದರ್ಶನಕ್ಕೆ ಅವಕಾಶ ಹಾಗೂ ಭಕ್ತರಿಗೆ ಅಗತ್ಯ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ನೇತೃತ್ವದಲ್ಲಿ ಸೋಮವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ನಡೆಸಿ, ಹಲವು ತೀರ್ಮಾನವನ್ನು ಕೈಗೊಳ್ಳಲಾಯಿತು.



ಉಚಿತ ಬಸ್ ವ್ಯವಸ್ಥೆ: ಚಾಮುಂಡಿಬೆಟ್ಟಕ್ಕೆ ಆಷಾಢ ಶುಕ್ರವಾರಗಳು ಹಾಗೂ ವರ್ಧಂತ್ಯೋತ್ಸವದಂದು ಶಿಷ್ಟಾಚಾರದನ್ವಯ ಅತೀಗಣ್ಯ ವ್ಯಕ್ತಿಗಳು(ವಿಐಪಿ), ಸ್ಥಳೀಯ ನಿವಾಸಿಗಳು, ದೇವಾಲಯಕ್ಕೆ ಸಂಬಂಧಿಸಿದವರು, ಕರ್ತವ್ಯನಿರತ ಅಧಿಕಾರಿಗಳು ಸೇರಿದಂತೆ ಅಗತ್ಯವಿದ್ದವರ ವಾಹನಗಳನ್ನು ಹೊರತುಪಡಿಸಿ ಎಲ್ಲಾ ರೀತಿಯ ಖಾಸಗಿ ವಾಹನಗಳ ಪ್ರವೇಶವನ್ನು ನಿರ್ಬಂಧಿಸಲಾಗುವುದು. ಲಲಿತಮಹಲ್ ಹೋಟೆಲ್ ಸಮೀಪ ಒಂದು ಭಾಗದಲ್ಲಿ 8 ಹಾಗೂ ಮತ್ತೊಂದು ಭಾಗದಲ್ಲಿ 10 ಒಟ್ಟು 18 ಎಕರೆ ಪ್ರವಾಸೋದ್ಯಮ ಇಲಾಖೆಯ ಸ್ಥಳದಲ್ಲಿ ಸಾರ್ವಜನಿಕರ ವಾಹನಗಳ ಪಾರ್ಕಿಂಗ್‌ಗೆ ವ್ಯವಸ್ಥೆ ಮಾಡಿ, ಅಲ್ಲಿಂದ ಅವರನ್ನು ಕೆಎಸ್‌ಆರ್‌ಟಿಸಿ ಬಸ್‌ಗಳ ಮೂಲಕ ಚಾಮುಂಡಿಬೆಟ್ಟಕ್ಕೆ ಉಚಿತವಾಗಿ ಕರೆದೊಯ್ಯಲಾಗುವುದು. ಇದಕ್ಕಾಗಿ 50 ಬಸ್‌ಗಳ ವ್ಯವಸ್ಥೆ ಮಾಡಲಾಗುತ್ತಿದ್ದು, ಅದರ ವೆಚ್ಚವನ್ನು ▶ 8ನೇ ಪುಟಕ್ಕೆ



ಮೈಸೂರು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ನೇತೃತ್ವದಲ್ಲಿ ಸೋಮವಾರ ಆಷಾಢ ಶುಕ್ರವಾರ ಹಾಗೂ ವರ್ಧಂತ್ಯೋತ್ಸವ ಸಂಬಂಧ ಪೂರ್ವಭಾವಿ ಸಭೆ ನಡೆಸಿ, ಹಲವು ತೀರ್ಮಾನ ಕೈಗೊಳ್ಳಲಾಯಿತು.

ಒಂದು ದಿನದಲ್ಲಿ ವರದಿ ನೀಡಿ

ಪ್ರಧಾನಿ ಮೋದಿ ಆಗಮನದ ಹಿನ್ನೆಲೆಯಲ್ಲಿ ಚಾಮುಂಡಿಬೆಟ್ಟ ರಸ್ತೆಗೆ ಅಳವಡಿಸಿರುವ ವಿದ್ಯುತ್ ಕಂಬಗಳನ್ನು ಪುನಃ ಪರಿಶೀಲಿಸುವಂತೆ ಸಂಸದ ಪ್ರತಾಪ್ ಸಿಂಹ ಸಭೆಯಲ್ಲಿ ಹೇಳಿದರು. ನಂತರ ಈ ಬಗ್ಗೆ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಮಾತನಾಡಿ, ಅತ್ಯಂತ ವೇಗವಾಗಿ ಕಂಬಗಳನ್ನು ಅಳವಡಿಸಿರುವುದರಿಂದ ಸಣ್ಣ ವ್ಯತ್ಯಾಸಗಳಾಗಿರಬಹುದು. ಯಾವುದಕ್ಕೂ ಪ್ರತಿ ಕಂಬವನ್ನೂ ಪರಿಶೀಲಿಸಿ, ನಾಳೆ(ಜು.28) ಸಂಜೆಯೊಳಗೆ ವರದಿ ನೀಡುವಂತೆ ಸೆಸ್ಕ್ ಅಧಿಕಾರಿಗಳಿಗೆ ಸೂಚನೆ ನೀಡಿದರು. 'ಮೈಸೂರು ಮಿತ್ರ'ನ ಜೂ.23ರ ಸಂಚಿಕೆಯಲ್ಲಿ '**ಚಾಮುಂಡಿಬೆಟ್ಟದಲ್ಲಿ ಬೇಕಾಬಿಟ್ಟಿ ವಿದ್ಯುತ್ ಕಂಬ ಅಳವಡಿಕೆ: ಅನಾಹುತಕ್ಕೆ ಆಹ್ವಾನ**' ಶೀರ್ಷಿಕೆಯಡಿ ಸಚಿತ್ರ ವರದಿ ಪ್ರಕಟವಾಗಿತ್ತು.

ವಿಐಪಿ ಗೊಂದಲ

ವಿಐಪಿಗಳ ವಾಹನಗಳಿಗೆ ಪಾಸ್ ವಿತರಿಸುವ ಬಗ್ಗೆ ಚರ್ಚೆ ನಡೆದ ವೇಳೆ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ, ವಿಐಪಿಗಳ ಬಗ್ಗೆ ಸ್ಪಷ್ಟವಾಗಬೇಕು, ಇಲ್ಲವಾದರೆ ಗೊಂದಲವಾಗುವ ಸಾಧ್ಯತೆ ಇದೆ ಎಂದರು. ಈ ವೇಳೆ ಶಾಸಕ ಎಲ್.ನಾಗೇಂದ್ರ, ಪೊಲೀಸರು ಸಾಮಾನ್ಯರಲ್ಲ, ಅವರ ನೆಂಟರಿಷ್ಟರನ್ನು ದೇವಾಲಯದೊಳಗೆ ಕಳುಹಿಸುತ್ತಾರೆ. ಹೀಗೆ ನಾವು(ಜನಪ್ರತಿನಿಧಿಗಳು) 1 ಪರ್ಸೆಂಟ್ ಮಾಡಿದರೆ ನೀವು 100 ಪರ್ಸೆಂಟ್ ಮಾಡ್ತೀರಿ ಎಂದರು. ಇದಕ್ಕೆ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡರೂ ಧ್ವನಿಗೂಡಿಸಿದರು.

ಜು.1ರಿಂದ	ಆಷಾಢ ಶುಕ್ರವಾರ ಆರಂಭ
ಜು.1	ಮೊದಲ ಆಷಾಢ ಶುಕ್ರವಾರ
ಜು.8	ಎರಡನೇ ಆಷಾಢ ಶುಕ್ರವಾರ
ಜು.15	ಮೂರನೇ ಆಷಾಢ ಶುಕ್ರವಾರ
ಜು.20	ಚಾಮುಂಡೇಶ್ವರಿ ವರ್ಧಂತ್ಯೋತ್ಸವ
ಜು.22	ನಾಲ್ಕನೇ ಆಷಾಢ ಶುಕ್ರವಾರ

ನಾಡಿನ ಅಧಿದೇವತೆ ದರ್ಶನದ ವೇಳೆ

ಶುಕ್ರವಾರಗಳಂದು ಬೆಳಗ್ಗೆ 5.30ರಿಂದ ದರ್ಶನಕ್ಕೆ ಅವಕಾಶವಿದ್ದು, ಲಲಿತಮಹಲ್ ಹೋಟೆಲ್ ಬಳಿಯಿಂದ ಮುಂಜಾನೆ 3 ಗಂಟೆಯಿಂದಲೇ ಬಸ್ ಸಂಚಾರ ಆರಂಭಿಸಲಿವೆ. ವರ್ಧಂತಿ ದಿನದಂದು ಮಾತ್ರ ವಿಶೇಷ ಪೂಜೆ ಹಿನ್ನೆಲೆಯಲ್ಲೂ ದರ್ಶನ ತಡವಾಗುವುದರಿಂದ ಬೆಳಗ್ಗೆ 7ಕ್ಕೆ ಬಸ್ ಹೊರಡಲಿವೆ. 50 ಹಾಗೂ 300 ರೂ. ವಿಶೇಷ ದರ್ಶನ ವ್ಯವಸ್ಥೆಯೂ ಇರಲಿದೆ.

ಚಾಮುಂಡಿಬೆಟ್ಟ ಪ್ರಾಧಿಕಾರಕ್ಕೆ ಜಿಟಿಡಿ ಆಗ್ರಹ

ಮೈಸೂರು: ಚಾಮುಂಡಿಬೆಟ್ಟ ಪ್ರಾಧಿಕಾರ ರಚನೆಗೆ ಶಾಸಕ ಜಿ.ಟಿ.ದೇವೇಗೌಡರು ಆಗ್ರಹಿಸಿದರು. ಸಭೆಯಲ್ಲಿ ಮಾತನಾಡಿದ ಅವರು, ನಾಡಹಬ್ಬ ದಸರಾ ಮಹೋತ್ಸವವನ್ನು ಮತ್ತಷ್ಟು ವೈಭವಯುತ ಹಾಗೂ ಅಚ್ಚುಕಟ್ಟಾಗಿ ಆಚರಿಸುವ ಉದ್ದೇಶದಿಂದ ಶಾಶ್ವತ ದಸರಾ ಪ್ರಾಧಿಕಾರ ರಚನೆ ಮಾಡುವಂತೆ ನಿರಂತರವಾಗಿ ಮನವಿ ಮಾಡುತ್ತಿದ್ದೇವೆ. ಆದರೆ ಈವರೆಗೂ ಯಾವುದೇ ಕ್ರಮವಾಗಿಲ್ಲ. ದಸರಾ ಪ್ರಾಧಿಕಾರದ ಜೊತೆಗೆ ಲಕ್ಷಾಂತರ ಭಕ್ತರು ಭೇಟಿ ನೀಡುವ ಚಾಮುಂಡಿಬೆಟ್ಟದ ಅಭಿವೃದ್ಧಿ ಹಾಗೂ ಉತ್ತಮ ನಿರ್ವಹಣೆಗಾಗಿ 'ಚಾಮುಂಡಿ ಬೆಟ್ಟ ಪ್ರಾಧಿಕಾರ' ಅಗತ್ಯವಾಗಿದೆ ಎಂದು ಸಚಿವ ಎಸ್.ಟಿ. ಸೋಮಶೇಖರ್ ಅವರನ್ನು ಒತ್ತಾಯಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ಪ್ರಾಧಿಕಾರ ರಚನೆ ಸಂಬಂಧ ಸರ್ಕಾರದ ಗಮನಕ್ಕೆ ತರುವುದಾಗಿ ಭರವಸೆ ನೀಡಿದರು.

ಜು.2ರಂದು 'ಮಿಸ್ಟರ್ ಮೋದಿ ಕಪ್ 2.0' ಅಂತರ ಜಿಲ್ಲಾ ಮಟ್ಟದ ದೇಹದಾರ್ಢ್ಯ ಸ್ಪರ್ಧೆ

ಮೈಸೂರು,ಜೂ.27(ಪಿಎಂ)– ಮೈಸೂರು ನಗರ ಬಿಜೆಪಿ ಯುವ ಮೋರ್ಚಾ ವತಿಯಿಂದ ಜು.2ರಂದು 'ಮಿಸ್ಟರ್ ಮೋದಿ ಕಪ್ 2.0' ಶೀರ್ಷಿಕೆಯಡಿ ಅಂತರ ಜಿಲ್ಲಾ ಮಟ್ಟದ ದೇಹದಾರ್ಢ್ಯ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಮೋರ್ಚಾದ ಪ್ರಧಾನ ಕಾರ್ಯದರ್ಶಿ ಎಸ್.ಭರತ್ ತಿಳಿಸಿದರು.

ಮೈಸೂರು, ಮಂಡ್ಯ, ಹಾಸನ, ಮಡಿಕೇರಿ, ಚಾಮರಾಜ ನಗರ ಜಿಲ್ಲೆಗಳಿಗೆ ಸೀಮಿತ ವಾಗಿ ಈ ಅಂತರ ಜಿಲ್ಲಾ ಮಟ್ಟದ ಸ್ಪರ್ಧೆ ನಡೆಯಲಿದೆ. ಪ್ರವೇಶ ಶುಲ್ಕ ತಲಾ 250 ರೂ. ನಿಗದಿ ಮಾಡಲಾಗಿದೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿಯವರ ಸದೃಢ ಭಾರತದ ಜೊತೆಗೆ ಸದೃಢ ವ್ಯಕ್ತಿ ನಿರ್ಮಾಣದ ಆಶಯದಂತೆ ನಗರ ಬಿಜೆಪಿ ಯುವ ಮೋರ್ಚಾದಿಂದ ಕ್ರೀಡಾ ಚಟುವಟಿಕೆಗಳಿಗೆ ಉತ್ತೇಜನ ನೀಡಲು ಹಲವು ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬರಲಾಗುತ್ತಿದೆ. ಅದರಂತೆ ಮೋದಿ ಕಪ್ ದೇಹದಾರ್ಢ್ಯ ಸ್ಪರ್ಧೆ ಆಯೋಜಿಸಿದ್ದು, ಹೆಬ್ಬಾಳಿನ ಲಕ್ಷ್ಮೀಕಾಂತನಗರದ ಯಜಮಾನ್ ವೃತ್ತದ ಬಳಿ ಸ್ಪರ್ಧೆ ನಡೆಯಲಿದೆ ಎಂದು ಹೇಳಿದರು.

ಮೈಸೂರು ಡಿಸ್ಟ್ರಿಕ್ ಅಮೆಚೂರ್ ಬಾಡಿಬಿಲ್ಡಿಂಗ್ ಅಸೋಷಿಯೇಷನ್‌ನ ಕಾರ್ಯದರ್ಶಿ ನವೀನ್ ಚಂದ್ರ ಮಾತನಾಡಿ, ಎತ್ತರದ ಆಧಾರದಲ್ಲಿ ನಾಲ್ಕು ಗುಂಪುಗಳಲ್ಲಿ ಸ್ಪರ್ಧೆಗಳು ನಡೆಯಲಿವೆ. ಈ ಎಲ್ಲಾ ಗುಂಪುಗಳಲ್ಲಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದವರಿಗೆ ನಗದು ಬಹುಮಾನ ನೀಡಲಾಗುವುದು. ಸ್ಪರ್ಧೆಗೂ ಮುನ್ನ ಅಂದು ಮಧ್ಯಾಹ್ನ 3ರಿಂದ ಸಂಜೆ 6ರವರೆಗೆ ಎತ್ತರ ಪರಿಶೀಲನೆ ನಡೆಯಲಿದೆ. 'ಮಿಸ್ಟರ್ ಮೋದಿ ಕಪ್ 2.0' ಟೈಟಲ್‌ಗೆ ಭಾಜನರಾದವರಿಗೆ 15 ಸಾವಿರ ರೂ. ನಗದು ಬಹುಮಾನ ನೀಡಲಾಗುವುದು ಎಂದು ತಿಳಿಸಿದರು. ಆಸಕ್ತರು ಹೆಚ್ಚಿನ ಮಾಹಿತಿಗೆ ಮೊ.ಸಂ. 89515 12028 (ನವೀನ್ ಚಂದ್ರ) ಅನ್ನು ಸಂಪರ್ಕಿಸಬಹುದು ಎಂದರು. ಮುಖಂಡರಾದ ಸಂತೋಷ್‌ಕುಮಾರ್, ಶ್ರೀಧರ್ ಮತ್ತಿತರರು ಗೋಷ್ಠಿಯಲ್ಲಿದ್ದರು.



ಸೋಮವಾರ ಹುಟ್ಟುಹಬ್ಬ ಆಚರಿಸಿಕೊಂಡ ವರುಣ ಕ್ಷೇತ್ರದ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಅವರಿಗೆ ಹುಯಿಲಾಳು ಗ್ರಾಪಂ ಸದಸ್ಯ ರಮೇಶ್ ಹುಯಿಲಾಳು, ಹುಯಿಲಾಳು ಕುಮಾರ್, ಮನು ಹಿನಕಲ್ ಅಭಿನಂದಿಸಿ, ಶುಭಾಶಯ ಕೋರಿದರು.

ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆ ಆರಂಭ

ಮೈಸೂರು,ಜೂ.27(ಆರ್‌ಕೆ)–2021–22ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆಗಳು ರಾಜ್ಯಾದ್ಯಂತ ಇಂದಿನಿಂದ ಆರಂಭವಾದವು. ಮೈಸೂರು ನಗರದ 7



ಸೇರಿ ಜಿಲ್ಲೆಯಾದ್ಯಂತ 13 ಕೇಂದ್ರಗಳಲ್ಲಿ ನಡೆದ ಪರೀಕ್ಷೆಗೆ 2,300 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದರು. ಬೆಳಗ್ಗೆ 10.30ರಿಂದ ಮಧ್ಯಾಹ್ನ 1.30ರವರೆಗೆ ಇಂದು ಮೊದಲ ದಿನ ವಿಜ್ಞಾನ, ರಾಜ್ಯಶಾಸ್ತ್ರ ಮತ್ತು ಕರ್ನಾಟಕ ಸಂಗೀತ, ಹಿಂದೂಸ್ಥಾನಿ ಸಂಗೀತ ವಿಷಯಗಳ ಪರೀಕ್ಷೆಗಳು ನಡೆದವು. ಪರೀಕ್ಷಾ ಕೇಂದ್ರಗಳಲ್ಲಿ ಅಗತ್ಯ ಎಲ್ಲಾ ಕೋವಿಡ್ ಮಾರ್ಗಸೂಚಿಗಳನ್ನು ಪಾಲಿಸಲಾಯಿತು. ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು, ಮಾಸ್ಕ್ ಧರಿಸುವುದು, ಸ್ಯಾನಿಟೈಸರ್‌ನಿಂದ ಕೈ ಸ್ವಚ್ಛಗೊಳಿಸಿಕೊಳ್ಳುವುದನ್ನು ಕಡ್ಡಾಯಗೊಳಿಸಲಾಗಿತ್ತಲ್ಲದೆ, ಥರ್ಮಲ್ ಸ್ಕ್ಯಾನಿಂಗ್ ಮಾಡಿ, ಪ್ರತಿ ವಿದ್ಯಾರ್ಥಿಯ ಆರೋಗ್ಯದ ಮೇಲೆ ನಿಗಾ ಇರಿಸಲಾಗುತ್ತಿದೆ. ಪ್ರತೀ ಪರೀಕ್ಷಾ ಕೊಠಡಿಯಲ್ಲಿ ಸಿಸಿ ಕ್ಯಾಮೆರಾಗಳಿಂದ ಪರೀಕ್ಷಾ ಪ್ರಕ್ರಿಯೆ ಮೇಲೆ ನಿಗಾ ವಹಿಸಲಾಗಿದ್ದು, ಸೆಕ್ಷನ್ 144 ರೀತ್ಯಾ 200 ಮೀಟರ್ ಸುತ್ತಲಿನ ಪ್ರದೇಶದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿ, ಜೆರಾಕ್ಸ್ ಅಂಗಡಿಗಳನ್ನು ಬಂದ್ ಮಾಡಿಸಿ, ಕಟ್ಟೆಚ್ಚರ ವಹಿಸಲಾಯಿತು.

ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರ ರಾಜೇ ಅರಸ್ ಕೆಲ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪರೀಕ್ಷಾ ಪ್ರಕ್ರಿಯೆಗಳನ್ನು ಪರಿಶೀಲಿಸಿದರು. ನಾಳೆ (ಜೂ.28) ಪ್ರಥಮ ಭಾಷೆಯ ಪರೀಕ್ಷೆ ನಡೆಯಲಿದ್ದು, ಜುಲೈ 4ರಂದು ಮುಕ್ತಾಯಗೊಳ್ಳಲಿದೆ ಎಂದು ತಿಳಿಸಿದ್ದಾರೆ. ರಾಜ್ಯಾದ್ಯಂತ 423 ಕೇಂದ್ರಗಳಲ್ಲಿ ನಡೆಯುತ್ತಿರುವ ಪರೀಕ್ಷೆಯಲ್ಲಿ 94,649 ವಿದ್ಯಾರ್ಥಿಗಳು ಹಾಜರಾಗುತ್ತಿದ್ದಾರೆ. ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಿ ಸೂಕ್ತ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆ.

ದ್ವಿಚಕ್ರ ವಾಹನ ದುರಸ್ತಿ ತರಬೇತಿ ಪಡೆಯುತ್ತಿರುವ ಬ್ಯಾತಳ್ಳಿ ಮಹಿಳೆ



ಮೈಸೂರು,ಜೂ.27(ಜಿಎ)–ನಂಜನಗೂಡು ತಾಲೂಕಿನ ಬ್ಯಾತಳ್ಳಿ ಗ್ರಾಮದ ನಿವಾಸಿ ಸುಮಿತ್ರ (44) ಎಂಬುವರು ಮೈಸೂರಿನ ಅಗ್ರಹಾರದ ಬಸವೇಶ್ವರ ರಸ್ತೆಯಲ್ಲಿರುವ ಸುಚಿತ್ರ ಮೋಟಾರ್ಸ್‌ನಲ್ಲಿ ಕಳೆದ 23 ದಿನಗಳಿಂದ ದ್ವಿಚಕ್ರ ವಾಹನ ದುರಸ್ಥಿ ಕೆಲಸಕ್ಕೆ ತರಬೇತಿ ಪಡೆಯುತ್ತಿದ್ದು, ಸಾರ್ವಜನಿಕರ ಗಮನ ಸೆಳೆದಿದ್ದಾರೆ.

ಈ ಹಿಂದೆ ಕಡಕೊಳ ಇಂಡಸ್ಟ್ರೀಯಲ್‌ನ ಕಂಪನಿಯಲ್ಲಿ ಅವರು ಕೆಲಸ ಮಾಡುತ್ತಿದ್ದರು. ಅ ಕಂಪನಿ ಮುಚ್ಚಿದ ಪರಿಣಾಮ ತಮಗೆ ಪರಿಚಯವಿದ್ದ ಸುಚಿತ್ರ ಮೋಟಾರ್ಸ್ ಗ್ಯಾರೇಜ್‌ನ ಮಾಲೀಕ ಸುರೇಂದ್ರನ್ ವಾಹನ ದುರಸ್ತಿ ಮಾಡುವ ಕೆಲಸವನ್ನು ಕಲಿಸುತ್ತೀರಾ? ಎಂದು ಕೇಳಿದ್ದಾರೆ. ಕೇಳಿದ ತಕ್ಷಣ ಗ್ಯಾರೇಜಿನ ಮಾಲೀಕರು ಸಹ ಒಪ್ಪಿ ಅವರಿಗೆ ತರಬೇತಿ ನೀಡುತ್ತಿದ್ದಾರೆ. ಕಳೆದ 23 ದಿನಗಳಿಂದ ಸುಮಿತ್ರ ಬಹಳ ಶ್ರದ್ದೆ ಮತ್ತು ಆಸಕ್ತಿಯಿಂದ ಕೆಲಸ ಕಲಿಯುತ್ತಿದ್ದಾರೆ. ಸದ್ಯ ಅವರಿಗೆ ತರಬೇತಿ ನೀಡುತ್ತಿದ್ದು, ತಿಂಗಳ ನಂತರ ಸ್ಟೈಫಂಡ್ ನೀಡಬೇಕು ನಿರ್ಧರಿಸಲಾಗಿದೆ. ಇಲ್ಲಿಗೆ ಬರುವ ಗ್ರಾಹಕರು ಸಹ ಮೆಚ್ಚುಗೆ ಮಾತನಾಡುತ್ತಿದ್ದಾರೆ ಎಂದು ಗ್ಯಾರೇಜ್ ಮಾಲೀಕ ಸುರೇಂದ್ರನ್ ತಿಳಿಸಿದರು.

ಮಾಂಟೆಸರಿ, ಎನ್‌ಟಿಟಿಸಿ ಕುರಿತು ಕಾರ್ಯಾಗಾರ

ಮೈಸೂರು, ಜೂ. 27– ರಾಷ್ಟ್ರೀಯ ಡಿಜಿಟಲ್ ಸಾಕ್ಷರತಾ ಮಿಷನ್, ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ ಹಾಗೂ ಕ್ಯುಡಿಪಿ ಟೆಕ್ನಾಲಜೀಸ್‌ನ ಸಹಯೋಗದಲ್ಲಿ ಮಾಂಟೆಸರಿ ಹಾಗೂ ಎನ್‌ಟಿಟಿಸಿ ಪ್ರಶಿಕ್ಷಣ ಆಕಾಂಕ್ಷಿಗಳಿಗಾಗಿ ಕುವೆಂಪುನಗರದ ಶಾಖೆಯ ಆವರಣದಲ್ಲಿ ಕಾರ್ಯಾಗಾರವನ್ನು ಆಯೋಜಿಸಲಾಗಿದೆ.

ಮಕ್ಕಳ ಮಾನಸಿಕ ಬೆಳವಣಿಗೆ, ಆರೋಗ್ಯ, ಬೆಳವಣಿಗೆಯ ಹಂತಗಳು, ಕಂಪ್ಯೂಟರ್ ಶಿಕ್ಷಣ, ಮುಂತಾದವುಗಳ ಕುರಿತು ನುರಿತ ಉಪನ್ಯಾಸಕರಿಂದ ಮಾರ್ಗದರ್ಶನವಿರುತ್ತದೆ. ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ, ಡಿಪ್ಲೊಮೊ, ಪದವಿ ಇಂಜಿನಿಯರಿಂಗ್ ವಿದ್ಯಾಭ್ಯಾಸ ಮುಗಿಸಿರುವ 18 ವರ್ಷಕ್ಕಿಂತ ಮೇಲ್ಪಟ್ಟ ವಯೋಮಾನದವರು ಕಾರ್ಯಾಗಾರದಲ್ಲಿ ಪಾಲ್ಗೊಳ್ಳಬಹುದು. ಗೃಹಿಣಿಯರು ಉದ್ಯೋಗನಿರತ ಮಹಿಳೆಯರಿಗೆ ವಿಶೇಷ ಆದ್ಯತೆ ಇರುತ್ತದೆ. ಜು.9ರಂದು ಬೆಳಗ್ಗೆ 11 ಗಂಟೆಗೆ ಮೊದಲನೇ ಅವಧಿ ಪ್ರಾರಂಭವಾಗುತ್ತದೆ. ಆಸಕ್ತರು ಜೂ.30ರೊಳಗಾಗಿ ತಮ್ಮ ಹೆಸರನ್ನು ನಂ.665, ಮೊದಲನೇ ಮಹಡಿ, ನೃಪತುಂಗ ರಸ್ತೆ, ಕುವೆಂಪುನಗರ ಇಲ್ಲಿ ನೇರವಾಗಿ ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಮೊ.ಸಂಖ್ಯೆ 9964790442, 8310306882 ಸಂಪರ್ಕಿಸಿ.

ಪ್ರೌಢಶಾಲಾ ಶಿಕ್ಷಕರ ತಾತ್ಕಾಲಿಕ ಜೇಷ್ಠತಾ ಪಟ್ಟಿ ಪ್ರಕಟ


ಮೈಸೂರು,ಜೂ.27–ಮೈಸೂರು ವಿಭಾಗದ ಸರ್ಕಾರಿ ಪ್ರೌಢಶಾಲೆ ಸಹ ಶಿಕ್ಷಕರ ಗ್ರೇಡ್–2 ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು www.schooleducation.kar.nic.inನಲ್ಲಿ ಪ್ರಕಟಿಸಿದ್ದು, ಜೇಷ್ಠತಾ ಪಟ್ಟಿಯಲ್ಲಿ ಯಾವುದಾದರೂ ಆಕ್ಷೇಪಣೆಗಳಿದ್ದಲ್ಲಿ ಸಂಬಂಧಿಸಿದ ಶಿಕ್ಷಕರು ಸೂಕ್ತ ದಾಖಲೆಗಳೊಂದಿಗೆ ಜೂನ್ 30ರ ಒಳಗಾಗಿ ಸಂಬಂಧಿಸಿದ ಉಪನಿರ್ದೇಶಕರಿಗೆ ಸಲ್ಲಿಸಬೇಕು ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ಪಠ್ಯ ಪರಿಷ್ಕರಣೆಗೆ ರಾಜ್ಯಾದ್ಯಂತ ತೀವ್ರ ವಿರೋಧ

ಜನರ ಮಾತಿಗೆ ಮನ್ನಣೆ ನೀಡಿ; ಹಳೆ ಪಠ್ಯವನ್ನೇ ಮುಂದುವರೆಸಿ

● ವಿಧಾನಪರಿಷತ್ ಸದಸ್ಯ ಅಡಗೂರು ವಿಶ್ವನಾಥ್ ಸಲಹೆ ● ಪಠ್ಯ ಪುಸ್ತಕಗಳು ರಾಜಕೀಯ ಪಕ್ಷಗಳ ಅಜೆಂಡಾಗಳಾಗಬಾರದು

ಮೈಸೂರು, ಜೂ.27(ಎಂಟಿವೈ)– ರಾಜ್ಯದಲ್ಲಿ ಶಿಕ್ಷಣ ವ್ಯವಸ್ಥೆ ಅಧೋಗತಿಗೆ ಇಳಿಯುತ್ತಿದೆ. ರೋಹಿತ್ ಚಕ್ರತೀರ್ಥ ನೇತೃತ್ವದ ಸಮಿತಿ ಪರಿಷ್ಕರಿಸಿರುವ ಶಾಲಾ ಪಠ್ಯಕ್ರಮವನ್ನು ಇಡೀ ರಾಜ್ಯವೇ ವಿರೋಧಿಸುತ್ತಿದೆ. ಸರ್ಕಾರ ರಾಜ್ಯದ ಜನರ ಅಭಿಪ್ರಾಯಕ್ಕೆ ಗೌರವ ನೀಡಿ, ಪರಿಷ್ಕೃತ ಪಠ್ಯವನ್ನು ಹಿಂದಕ್ಕೆ ಪಡೆದು, ಹಳೆ ಪ್ರಠ್ಯಕ್ರಮವನ್ನೇ ಮುಂದುವರಿಸಬೇಕು ಎಂದು ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಇಂದಿಲ್ಲಿ ಆಗ್ರಹಿಸಿದ್ದಾರೆ.



ಎ.ಹೆಚ್.ವಿಶ್ವನಾಥ್

ಮೈಸೂರಿನ ಕಾಡಾ ಕಚೇರಿ ಆವರಣದಲ್ಲಿ ಆರಂಭಿಸಲಾಗಿರುವ ತಮ್ಮ(ಶಾಸಕರ) ಕಚೇರಿಯಲ್ಲಿ ವಿಶೇಷ ಪೂಜೆ ನಡೆಸಿದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಪಠ್ಯ ಕ್ರಮ ಪರಿಷ್ಕರಣೆ ರಾಜ್ಯದಲ್ಲಿ ದೊಡ್ಡಮಟ್ಟದ ಗೊಂದಲಕ್ಕೆ ಕಾರಣವಾಗಿದೆ. ಪಠ್ಯಕ್ರಮ ರಾಜಕೀಯ ಪಕ್ಷದ ಸಿದ್ಧಾಂತ ಹಾಗೂ ಅಜೆಂಡವಾಗಬಾರದು. ಸುಶಿಕ್ಷಿತ ಸಮಾಜ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಶಿಕ್ಷಣ ಕ್ಷೇತ್ರ ಪ್ರಮುಖ ಪಾತ್ರ ವಹಿಸುತ್ತದೆ. ತನ್ನದೇ ಆದ ಮಹತ್ವ ಹೊಂದಿದ್ದ ಶಿಕ್ಷಣ ಕ್ಷೇತ್ರವನ್ನು ಇಂದು ಪಠ್ಯಕ್ರಮ ಪರಿಷ್ಕರಣೆಯ ಮೂಲಕ ಕಲುಷಿತಗೊಳಿಸಲಾಗುತ್ತಿದೆ. ಇದೆಲ್ಲವನ್ನು ಗಮನಿಸಿದರೆ ಶಿಕ್ಷಣ ಅಧೋಗತಿಗೆ ದೂಡಲ್ಪಡುತ್ತಿದೆ ಎಂದು ವಿಷಾದಿಸಿದರು.

ರೋಹಿತ್ ಚಕ್ರತೀರ್ಥ ನೇತೃತ್ವದ ಸಮಿತಿ ಮಾಡಿರುವ ಪರಿಷ್ಕರಣೆಗೆ ರಾಜ್ಯಾದ್ಯಂತ ಆಕ್ರೋಶ ವ್ಯಕ್ತವಾಗುತ್ತಿದೆ. ಸರ್ಕಾರ ವಿರೋಧಿಸುವವರಿಗೆ ಜನಾಭಿಪ್ರಾಯಕ್ಕೆ ಮನ್ನಣೆ ನೀಡಬೇಕು. ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು. ಪಠ್ಯಕ್ರಮ ಮತ್ತು ಅಕ್ಷರದ ವಿಷಯದಲ್ಲಿ ಸರ್ಕಾರದ ಹಠಮಾರಿ ಧೋರಣೆ ಸರಿಯಲ್ಲ. ಅದನ್ನು ಪ್ರತಿಷ್ಠೆಯಾಗಿಯೂ ಸ್ವೀಕರಿಸಬಾರದು. ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡುವ ವಿಷಯದಲ್ಲಿ ಹಠ ಮಾಡಲಿ, ಶಿಕ್ಷಣ ಕ್ಷೇತ್ರವನ್ನು ಉನ್ನತ ಮಟ್ಟಕ್ಕೆ ತೆಗೆದುಕೊಂಡು ಹೋಗುವುದನ್ನು ಪ್ರತಿಷ್ಠೆಯಾಗಿ ತೆಗೆದುಕೊಳ್ಳಲಿ ಎಂದು ಸಲಹೆ ನೀಡಿದರು.

ಪಠ್ಯ ಪರಿಷ್ಕರಣೆ ಪ್ರಕ್ರಿಯೆ ಯಾವುದೋ ಪಕ್ಷದ ಕಾರ್ಯಕ್ರಮವಲ್ಲ. ಪಕ್ಷದ ಸಿದ್ಧಾಂತವನ್ನು ತುಂಬುವ ಸಂಚು ಕೂಡ ಆಗಬಾರದು. ಶಿಕ್ಷಣ ಇಲಾಖೆಯಲ್ಲಿ ಉಂಟಾಗಿರುವ ಗೊಂದಲಕ್ಕೆ ಕಂದಾಯ ಸಚಿವರು, ನಗರಾಭಿವೃದ್ಧಿ ಸಚಿವರು ಪ್ರತಿಕ್ರಿಯಿಸುವ ದುಸ್ಥಿತಿ ಬಂದಿದೆ. ಸಂಬಂಧಪಡೆದ ಸಚಿವರು ಮಾತನಾಡುತ್ತಾರೆ ಎಂದರೆ ಏನರ್ಥ? ಪಠ್ಯಕ್ರಮ ಪರಿಷ್ಕರಣೆ ಬಗ್ಗೆ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಏನು ಮಾಡುತ್ತಿದ್ದಾರೆ ಎಂದು ಪ್ರಶ್ನಿಸಿದ ಅವರು, ಕೂಡಲೇ ಪರಿಷ್ಕರಣೆಗೊಂಡಿರುವ ಪಠ್ಯಕ್ರಮ ರದ್ದು ಮಾಡಿ, ಈ ವರ್ಷ ಹಳೇ ಪಠ್ಯಕ್ರಮದಲ್ಲೇ ಬೋಧಿಸಬೇಕು ಎಂದು ಆಗ್ರಹಿಸಿದರು.

ವಿಸ್ತøತ ಸಮಿತಿ ರಚಿಸಿ: ಉತ್ತಮ ಪಠ್ಯಕ್ರಮ ರಚನೆಗೆ ಹಾಗೂ ಶಿಕ್ಷಣ ವ್ಯವಸ್ಥೆಯನ್ನು ಮತ್ತಷ್ಟು ಉತ್ಕೃಷ್ಟಗೊಳಿಸುವ ನಿಟ್ಟಿನಲ್ಲಿ ಸರ್ಕಾರ ಸಾಹಿತಿಗಳು, ಪಾಲಕರು, ತಜ್ಞರನ್ನು ಒಳಗೊಂಡ ವಿಸ್ತøತ ಸಮಿತಿ ರಚಿಸಬೇಕು. ಆ ಮೂಲಕ ವಿವರವಾಗಿ ಚರ್ಚಿಸಿ ಪಠ್ಯಪುಸ್ತಕ ಪರಿಷ್ಕರಿಸಬೇಕು. ಅದನ್ನು ಮುಂಬರುವ ಸಾಲಿನಿಂದ ಜಾರಿಗೊಳಿಸಬೇಕು ಎಂದು ಸಲಹೆ ನೀಡಿದರು.

ಮೋದಿ ಏನು ಸಿಂಹವೇ?: ಪ್ರಧಾನಿ ನರೇಂದ್ರ ಮೋದಿ ಮೈಸೂರು, ಬೆಂಗಳೂರಿಗೆ ಬಂದಿದ್ದಾಗ ನಮಗೆ ಯಾವ ಯೋಜನೆ ಬೇಕು ಎಂದು ಪಟ್ಟಿ ಮಾಡಿ ಸರ್ಕಾರದವರು ಕನಿಷ್ಠ ಮನವಿಯನ್ನೂ ನೀಡಲಿಲ್ಲ. ಇದು ಬೇಸರ ತರಿಸಿದೆ. ಇಷ್ಟೊಂದು ಸಚಿವರು, ಶಾಸಕರು, ಜನಪ್ರತಿನಿಧಿಗಳಿದ್ದರೂ ಮನವಿ ಸಲ್ಲಿಸದಿರುವುದು ತಪ್ಪು. ಮೋದಿ ಬಳಿ ರಾಜ್ಯಕ್ಕೆ ಏನನ್ನಾದರೂ ಕೇಳಲು ಧೈರ್ಯ ಏಕೆ ಬೇಕು. ಅವರೇನು ಸಿಂಹವೇ? ಮೋದಿ ಬಳಿ ಕೇಳಲು ರಾಜ್ಯ ನಾಯಕರಿಗೆ ಧೈರ್ಯ ಇಲ್ಲ ಎಂದು ಕಿಡಿಕಾರಿದರು.

ಅರ್ಥ ಮಾಡಿಕೊಂಡಿಲ್ಲ: ಅಗ್ನಿಪಥ ಯೋಜನೆಯನ್ನು ಕಾಂಗ್ರೆಸ್‌ನವರು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ. ಎಲ್ಲದಕ್ಕೂ ಮೋದಿ, ಆರ್‌ಎಸ್‌ಎಸ್ ಲಿಂಕ್ ಮಾಡುವುದು ಸರಿಯಲ್ಲ. ಅಗ್ನಿಪಥ್ ಯೋಜನೆಯಿಂದ ತೊಂದರೆಯಾಗುತ್ತದೆ ಎಂದು ಮೇಲ್ನೋಟಕ್ಕೆ ಕಂಡು ಬರುತ್ತಿಲ್ಲ. ಯಾವುದೇ ಒಂದು ಯೋಜನೆ ಹಾಗೂ ಕಾರ್ಯಕ್ರಮದ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಳ್ಳದೇ ಮಾತನಾಡಬಾರದು ಎಂದು ತಿರುಗೇಟು ನೀಡಿದರು.

ಶೋಷಿತರಿಗೆ ವರದಾನವಾಗಿತ್ತು: ಮೈಸೂರು ಸೇರಿದಂತೆ ರಾಜ್ಯದ ವಿವಿಧೆಡೆ ತುರ್ತು ಪರಿಸ್ಥಿತಿಯ ಕರಾಳ ದಿನ ಆಚರಿಸಲಾಗುತ್ತಿದೆ. ಆದರೆ ನಿಜಕ್ಕೂ ರಾಜ್ಯದ ಪಾಲಿಕೆಗೆ, ಅದರಲ್ಲೂ ಬಡ ಹಾಗೂ ಶೋಷಿತ ಸಮುದಾಯಕ್ಕೆ ತುರ್ತು ಪರಿಸ್ಥಿತಿ ವರದಾನವಾಗಿ ಪರಿಣಮಿಸಿತ್ತು. ಅದು ಕರ್ನಾಟಕದಲ್ಲಿ ಅಭಿವೃದ್ಧಿಯ ಯುಗವಾಗಿತ್ತು. ಆ ಸಂದರ್ಭವನ್ನು ಆಗಿನ ಮುಖ್ಯಮಂತ್ರಿ ದೇವರಾಜ ಅರಸು ರಾಜ್ಯದ ಅಭಿವೃದ್ಧಿಗೆ ಬಳಸಿಕೊಂಡರು. ಕೆಟ್ಟ ಕಾನೂನನ್ನು ಒಳ್ಳೆಯ ರೀತಿ ಬಳಸಿಕೊಂಡರು. ಇದರಿಂದ ರಾಜ್ಯಕ್ಕೆ ಒಳ್ಳೆಯದೇ ಆಯಿತು ಎಂದು ಅಭಿಪ್ರಾಯಪಟ್ಟರು.

ಪಕ್ಷದ ವಕ್ತಾರರಂತೆ ಪ್ರೊ.ಭೈರಪ್ಪನವರು ಮಾತನಾಡಬಾರದು

ಕನ್ನಡ ಸಾರಸತ್ವಲೋಕದಲ್ಲಿ ತನ್ನದೇ ಆದ ಕೊಡುಗೆ ನೀಡಿರುವ ಹಿರಿಯ ಸಾಹಿತಿ ಪ್ರೊ.ಎಸ್.ಎಲ್.ಭೈರಪ್ಪ ಅವರ ಮೇಲೆ ಅಪಾರವಾದ ಗೌರವ ವಿದೆ. ಅವರು ಪಠ್ಯ ಪರಿಷ್ಕರಣೆ ಬಗ್ಗೆ ಮಾತನಾಡಬಾರದು. ಪರಿಷ್ಕರಣೆ ವೇಳೆ ಸಾಕಷ್ಟು ಪ್ರಮಾದವಾಗಿದೆ. ಗಬ್ಬೆದ್ದು ನಾರುವಂತೆ ಮಾಡಲಾಗಿದೆ. ಇಂತಹ ದುಸ್ಥಿತಿ ಇದ್ದರೂ ಪ್ರೊ.ಎಸ್.ಎಲ್.ಭೈರಪ್ಪ ಅವರು ಪರಿಷ್ಕರಣೆ ಸಮರ್ಥಿಸಿ ಮಾತನಾಡಿರುವುದು ವಿಷಾದನೀಯ. ಅವರು ಬಿಜೆಪಿ ವಕ್ತಾರರಂತೆ ಹೇಳಿಕೆ ನೀಡಬಾರದು. ಸಾರಸ್ವತ ಲೋಕದ ಸೌಂದರ್ಯ ಹೆಚ್ಚಿಸಬೇಕೇ ಹೊರತು, ಪಕ್ಷದ ವಕಾಲತ್ತು ವಹಿಸಬಾರದು. ಅವರ ಮಾತುಗಳಲ್ಲಿ ರಾಜಕೀಯ ದುರ್ನಾತ ಬರುತ್ತಿದೆ. ಇದು ಅವರಿಗೆ ಶೋಭೆ ತರುವುದಿಲ್ಲ ಎಂದು ವಿಶ್ವನಾಥ್ ಅಸಮಾಧಾನ ವ್ಯಕ್ತಪಡಿಸಿದರು.

2019ರಲ್ಲಿ ಕರ್ನಾಟಕ, 2022ರಲ್ಲಿ ಮಹಾರಾಷ್ಟ್ರ

ಮೈಸೂರು: ಮಹಾರಾಷ್ಟ್ರದ ರಾಜಕೀಯ ಬೆಳವಣಿಗೆ ಕುರಿತು ಪ್ರತಿಕ್ರಿಯಿಸಿದ ಪರಿಷತ್ ಸದಸ್ಯ ವಿಶ್ವನಾಥ್, ಹಿಂದೆ ಕರ್ನಾಟಕದಲ್ಲಿ ಸಂಚಲನ ಮೂಡಿಸಿದ್ದ ಬೆಳವಣಿಗೆಗಳು ಈಗ ಮಹಾರಾಷ್ಟ್ರದಲ್ಲಿ ನಡೆಯುತ್ತಿವೆ. 2019ರಲ್ಲಿ ರಾಜ್ಯದಲ್ಲಿ ನನ್ನನ್ನೂ ಒಳಗೊಂಡಂತೆ ಕೆಲವು ಶಾಸಕರು ತೆಗೆದುಕೊಂಡ ಐತಿಹಾಸಿಕ ನಿರ್ಧಾರದಿಂದ ಸಮ್ಮಿಶ್ರ ಸರ್ಕಾರ ಪತನವಾಯಿತು. ಈಗ ಮಹಾರಾಷ್ಟ್ರದಲ್ಲಿ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ನಡವಳಿಕೆ ಹಾಗೂ ಕುಟುಂಬ ರಾಜಕಾರಣದಿಂದ ಅಲ್ಲಿನ ಶಾಸಕರು ಬೇಸತ್ತು ಕ್ಷಿಪ್ರಕ್ರಾಂತಿ ನಡೆಸಿದ್ದಾರೆ. ಸಿಎಂ ಆದವರು ಸರ್ವಾಧಿಕಾರಿಯಾದರೆ ಹೀಗಾಗುತ್ತದೆ. ಸ್ವಾಭಿಮಾನಕ್ಕೆ ಧಕ್ಕೆಯಾದಾಗ ಶಾಸಕರು ಸಿಡಿದೇಳುತ್ತಾರೆ. ಜೆಡಿಎಸ್–ಕಾಂಗ್ರೆಸ್ ಮೈತ್ರಿ ಸರ್ಕಾರದಲ್ಲಿ ನಮಗೂ ಹೀಗೆಯೇ ಆಗಿತ್ತು. ಸ್ವಾಭಿಮಾನ ಉಳಿಸಿಕೊಳ್ಳಲು ನಾವು ಪಕ್ಷ ಬಿಡಬೇಕಾಯಿತು. ಮಾಜಿ ಸಿಎಂಗಳಾದ ಹೆಚ್.ಡಿ. ಕುಮಾರಸ್ವಾಮಿ, ಸಿದ್ದರಾಮಯ್ಯ ಅವರ ದರ್ಪ, ದೌರ್ಜನ್ಯದಿಂದ ಶಾಸಕರು ತಿರುಗಿ ಬಿದ್ದಿದ್ದರು. ನೆರೆಯ ಮಹಾರಾಷ್ಟ್ರದಲ್ಲೂ ಅದೇ ರೀತಿ ಕ್ಷಿಪ್ರಕ್ರಾಂತಿ ಆಗುತ್ತಿದೆ. ಶಾಸಕಾಂಗ ಪಕ್ಷದ ನಾಯಕರು ಸರಿಯಾಗಿ ಇರದಿದ್ದರೆ ಹೀಗೆಲ್ಲ ಆಗುತ್ತದೆ. ಶಾಸಕರ ಸ್ವಾಭಿಮಾನವನ್ನು ಕೆಣಕಬಾರದು. ಕೆಣಕಿದರೆ ಕ್ಷಿಪ್ರಕ್ರಾಂತಿ ಆಗುತ್ತದೆ. ನಾವೂ ಅದನ್ನೇ ಮಾಡಿದ್ದೆವು ಎಂದು ಸಮರ್ಥಿಸಿಕೊಂಡರು.

ಇಂದು ನ್ಯಾಷನಲ್ ಎಸ್‌ಸಿ–ಎಸ್‌ಟಿ ಹಬ್ ಯೋಜನೆಗಳ ಬಗ್ಗೆ ಜಾಗೃತಿ ಕಾರ್ಯಕ್ರಮ

ಮೈಸೂರು,ಜೂ.27(ಪಿಎಂ)–ನ್ಯಾಷನಲ್ ಎಸ್‌ಸಿ–ಎಸ್‌ಟಿ ಹಬ್ ಮತ್ತು ಮೈಸೂರು ಜಿಲ್ಲಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ಯಮಿದಾರರ ಸಂಘದ ಜಂಟಿ ಆಶ್ರಯದಲ್ಲಿ ಜೂ.28ರಂದು ಮಾರಾಟಗಾರರ ಅಭಿವೃದ್ಧಿ ಮತ್ತು ನ್ಯಾಷನಲ್ ಎಸ್‌ಸಿ–ಎಸ್‌ಟಿ ಹಬ್‌ನ ಯೋಜನೆಗಳ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷ ಆರ್.ಮಂಜುನಾಥ್ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಜೆಎಲ್‌ಬಿ ರಸ್ತೆಯ ಇಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ಅಂದು ಬೆಳಗ್ಗೆ 10.30ಕ್ಕೆ ಮಾಜಿ ಶಾಸಕ ವಾಸು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಡಾ.ಅಂಬೇಡ್ಕರ್ ಭಾವಚಿತ್ರಕ್ಕೆ ನ್ಯಾಷನಲ್ ಎಸ್‌ಸಿ–ಎಸ್‌ಟಿ ಹಬ್‌ನ ಬೆಂಗಳೂರು ಶಾಖಾ ಮುಖ್ಯಸ್ಥೆ ಎ.ಕೋಕಿಲ ಪುಷ್ಪ ನಮನ ಸಲ್ಲಿಸಲಿದ್ದಾರೆ ಎಂದರು.

ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ದಿನೇಶ್, ಬೆಮೆಲ್‌ನ ಉಪ ಪ್ರಧಾನ ವ್ಯವಸ್ಥಾಪಕ ಎಸ್.ಕೃಷ್ಣಮೂರ್ತಿ, ನೈರುತ್ಯ ರೈಲ್ವೆಯ ಎಡಿಎಂಎಂ ಕೆ.ಎಲ್.ಪಾಂಡೆ, ಮೈಸೂರು–ಚಾಮರಾಜನಗರ ಮತ್ತು ಕೊಡಗು ಜಿಲ್ಲಾ ಪ.ಜಾ ಮತ್ತು ಪ.ಪಂ ಕೈಗಾರಿಕೋದ್ಯಮಿಗಳ ಉತ್ಪನ್ನ ಹಾಗೂ ಮಾರಾಟ ಸಹಕಾರ ಸಂಘದ ಅಧ್ಯಕ್ಷ ವಿಜಯಶಂಕರ್, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಹಿರಿಯ ವ್ಯವಸ್ಥಾಪಕ ನಾಗೇಶ್ ಮತ್ತಿತರರು ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು. ಪ.ಜಾತಿ ಮತ್ತು ಪ.ಪಂ ಸಮುದಾಯದ ಹಾಲಿ ಮತ್ತು ಭಾವಿ ಉದ್ದಿಮೆದಾರರಿಗೆ ಸರ್ಕಾರದ ಯೋಜನೆಗಳ ಬಗ್ಗೆ ಜಾಗೃತಿ ಮೂಡಿಸಲು ಈ ಕಾರ್ಯಕ್ರಮ ಏರ್ಪಡಿಸಲಾಗಿದೆ. ಸುಮಾರು 200 ಮಂದಿ ಪಾಲ್ಗೊಳ್ಳುವ ನಿರೀಕ್ಷೆ ಇದೆ ಎಂದರು. ಸಂಘದ ಪ್ರಧಾನ ಕಾರ್ಯದರ್ಶಿ ವಿಜಯಶಂಕರ್, ನಿರ್ದೇಶಕರಾದ ಡಿ.ಈಶ್ವರ ಚಕ್ಕಡಿ, ತೇನ್ ಮೋಳಿ, ಶಿವಣ್ಣ ಮತ್ತಿತರರು ಗೋಷ್ಠಿಯಲ್ಲಿದ್ದರು.

ಅರ್ಜಿ ಆಹ್ವಾನ

ಮೈಸೂರು,ಜೂ.27–ಹುಣಸೂರು ತಾಲೂಕಿನ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ ವತಿಯಿಂದ ಕಾರ್ಯಾಚರಣೆಯಲ್ಲಿರುವ ಮೆಟ್ರಿಕ್ ಪೂರ್ವ ಬಾಲಕರ ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ 2022–23ನೇ ಸಾಲಿಗೆ ಪ್ರವರ್ಗ–1 2ಎ 2ಬಿ 3ಎ 3ಬಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಹ ವಿದ್ಯಾರ್ಥಿಗಳಿಂದ ಹೊಸದಾಗಿ ಖಾಲಿ ಇರುವ ಸ್ಥಾನಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಯನ್ನು www. bcwd. karnataka.gov.in ಮೂಲಕ ಸಲ್ಲಿಸಬಹುದಾಗಿದ್ದು, ಜೂ.30 ಕೊನೇ ದಿನ. ಹೆಚ್ಚಿನ ಮಾಹಿತಿಗಾಗಿ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳ ಕಚೇರಿ ದೂ.ಸಂ.08222–250044 ಅನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು ಎಂದು ಇಲಾಖೆ ಕಲ್ಯಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಿಸೆಂಬರ್ ಅಂತ್ಯದೊಳಗೆ 'ಮುಂಬೈ ಫೈಲ್ಸ್' ಪುಸ್ತಕ ಬಿಡುಗಡೆ: ವಿಶ್ವನಾಥ್

ಮೈಸೂರು: ರಾಜ್ಯ ರಾಜಕಾರಣದಲ್ಲಿ ತೀವ್ರ ಕುತೂಹಲ ಕೆರಳಿಸುತ್ತದೆ ಎನ್ನಲಾದ ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಅವರು ಬರೆಯುತ್ತಿರುವ 'ಮುಂಬೈ ಫೈಲ್ಸ್' ಡಿಸೆಂಬರ್ ಅಂತ್ಯದಲ್ಲಿ ಲೋಕಾರ್ಪಣೆ ಮಾಡುವುದಾಗಿ ವಿಧಾನಪರಿಷತದ ಸದಸ್ಯ ಎ.ಹೆಚ್.ವಿಶ್ವನಾಥ್ ತಿಳಿಸಿದ್ದಾರೆ.

2019ರಲ್ಲಿ ರಾಜ್ಯದಲ್ಲಿ ನಡೆದ ಆಪರೇಷನ್ ಕಮಲಕ್ಕೆ ಸಿಲುಕಿದ ಜೆಡಿಎಸ್, ಕಾಂಗ್ರೆಸ್‌ನ 17 ಶಾಸಕರ ಬಂಡಾಯದಿಂದಾಗಿ ಹೆಚ್.ಡಿ.ಕುಮಾರಸ್ವಾಮಿ ನೇತೃತ್ವದ ಸಮ್ಮಿಶ್ರ ಸರ್ಕಾರ ಪಥನವಾಗಿತ್ತು. ಬಂಡಾಯವೆದ್ದ ಬಳಿಕ ಎಲ್ಲಾ ಅತೃಪ್ತ ಶಾಸಕರು ಮುಂಬೈಗೆ ತೆರಳಿ ಬಿಗಿ ಭದ್ರತೆಯಲ್ಲಿ ಕೆಲವು ದಿನ ಅಲ್ಲೇ ವಾಸ್ತವ್ಯ ಹೂಡಿದ್ದರು. ಬಳಿಕ ನಡೆದ ರಾಜಕೀಯ ವಿದ್ಯಾಮಾನದಲ್ಲಿ ಸಚಿವ ಸ್ಥಾನ ಕೈತಪ್ಪಿದ್ದರಿಂದ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಅವರು ಬಾಂಬೆಯಲ್ಲಿ ನಡೆದ ಬೆಳವಣಿಗೆ ಬಗ್ಗೆ 'ಬಾಂಬೆ ಡೇಸ್' ಪುಸ್ತಕ ಬರೆಯುವುದಾಗಿ ಬಾಂಬ್ ಸಿಡಿಸಿದ್ದರು. ಇದು ಸಂಚಲನ ಉಂಟು ಮಾಡಿತ್ತು.

ಹೆಸರು ಬದಲಾವಣೆ: ಈ ಕುರಿತು ಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಮಾತನಾಡಿ, ಪುಸ್ತಕ ಬರೆಯುವ ಪ್ರಕ್ರಿಯೆ ಅಂತಿಮ ಹಂತಕ್ಕೆ ತಲುಪಿದ್ದು, ಮುಂಬರುವ ವಿಧಾನಸಭಾ ಚುನಾವಣೆಗೂ ಮುನ್ನ ಬಿಡುಗಡೆ ಮಾಡುತ್ತೇನೆ. ಈ ಹಿಂದೆ 'ಬಾಂಬೇ ಡೇಸ್' ಎಂದು ಪುಸ್ತಕಕ್ಕೆ ಹೆಸರಿಡಲು ನಿರ್ಧರಿಸಲಾಗಿತ್ತು. ಆದರೆ ಕಾಶ್ಮೀರಿ ಫೈಲ್ಸ್ ಚಿತ್ರ ಬಿಡುಗಡೆಗೊಂಡ ಹಿನ್ನೆಲೆಯಲ್ಲಿ ನನ್ನ ಪುಸ್ತಕಕ್ಕೆ ಹೆಸರು ಬದಲಿಸಲಾಗಿದ್ದು, 'ಮುಂಬೈ ಫೈಲ್ಸ್' ಎಂದು ಹೆಸರಲ್ಲಿ ಪುಸ್ತಕ ಪ್ರಕಟವಾಗಲಿದೆ ಎಂದರು. ಪುಸ್ತಕದಲ್ಲೇ ಯಾವುದೇ ಬಾಂಬು–ಗೀಬು ಇರುವುದಿಲ್ಲ. ವಾಸ್ತವಾಂಶ ಇರಲಿದೆ. ಸಮ್ಮಿಶ್ರ ಸರ್ಕಾರದ ವಿರುದ್ಧ 17 ಶಾಸಕರು ಸಿಡಿದೆದ್ದು ಹೋಗಿದ್ದು, ರಾಜ್ಯ ರಾಜಕಾರಣದ ದೊಡ್ಡ ಚರಿತ್ರೆ ಅದು. ಅದೆಲ್ಲವೂ ದಾಖಲಾಗಬೇಕು. ನಾವೆಲ್ಲರೂ ಹಣಕ್ಕಾಗಿ ಬಿಜೆಪಿ ಸೇರಿದೆವು ಎಂದೆಲ್ಲ ಮಾತುಗಳಿವೆ. ಅದೆಲ್ಲವೂ ಸುಳ್ಳು. ವಾಸ್ತವಾಂಶಗಳನ್ನು ಪುಸ್ತಕದಲ್ಲಿ ದಾಖಲಿಸಲಿದ್ದೇನೆ ಎಂದು ಸ್ಪಷ್ಟಪಡಿಸಿದರು.

ಜೂ.29, ಬಾಲಪ್ರತಿಭೆ ರಿಷಿ ಶಿವಪ್ರಸನ್ನ ಜೊತೆ ಸಂವಾದ

ಮೈಸೂರು,ಜೂ.27(ಪಿಎಂ)– ಅಗಾಧ ಬುದ್ಧಿಮತ್ತೆಯಿಂದ ಇಂಗ್ಲೆಂಡ್ ಮೂಲದ ಪ್ರತಿಷ್ಠಿತ ಮೆನ್ಸಾ ಸಂಸ್ಥೆಯ ಸದಸ್ಯತ್ವ ಪಡೆದಿರುವ 8 ವರ್ಷದ ಬಾಲಕ ರಿಷಿ ಶಿವಪ್ರಸನ್ನ ಜೊತೆಗೆ ಜೂ.29ರಂದು ಶಾಲಾ ವಿದ್ಯಾರ್ಥಿಗಳ ಸಂವಾದ ಕಾರ್ಯಕ್ರಮವನ್ನು ರೋಟರಿ ಮೈಸೂರು ಉತ್ತರದ ವತಿಯಿಂದ ಏರ್ಪಡಿಸಲಾಗಿದೆ ಎಂದು ರೋಟರಿ ಮೈಸೂರು ಉತ್ತರದ ಅಧ್ಯಕ್ಷ ಎಲ್.ಚನ್ನಬಸವರಾಜು ತಿಳಿಸಿದರು.



ರಿಷಿ ಶಿವಪ್ರಸನ್ನ

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯ ನಂಜನಗೂಡು ತಾಲೂಕಿನ ಪ್ರಸನ್ನಕುಮಾರ್ ಮತ್ತು ರೇಚೇಶ್ವರಿ ದಂಪತಿ ಪುತ್ರ ರಿಷಿ ಶಿವಪ್ರಸನ್ನ ಪೋಷಕರೊಂದಿಗೆ ಬೆಂಗಳೂರಿನಲ್ಲಿ ವಾಸವಾಗಿದ್ದಾನೆ. 180 ಐಕ್ಯೂ (ಬುದ್ಧಿಮತ್ತೆ) ಮಟ್ಟ ಹೊಂದಿರುವ ಪ್ರಮಾಣಪತ್ರಕ್ಕೆ ಈತ ಭಾಜನವಾಗಿದ್ದಾನೆ. ಅತ್ಯಂತ ಕಿರಿಯ ಪ್ರಮಾಣೀಕೃತ ಆಂಡ್ರಾಯಿಡ್ ಅಪ್ಲಿಕೇಷನ್ ಡೆವಲಪರ್‌ಗಳಲ್ಲಿ ಈತನೂ ಒಬ್ಬನಾಗಿದ್ದಾನೆ ಎಂದು ಹೇಳಿದರು.

ರೋಟರಿ ಉತ್ತರದ ಸದಸ್ಯೆ ಶಾರದ ಶಿವಲಿಂಗಸ್ವಾಮಿ ಮಾತನಾಡಿ, 'ಆಜಾದಿ ಕಾ ಅಮೃತ್ ಮಹೋತ್ಸವ್' ಅಂಗವಾಗಿ ಭಾರತ ಸರ್ಕಾರದ ಸಂಸ್ಕೃತಿ ಸಚಿವಾಲಯ ವಿಶೇಷ ಧ್ಯೇಯಗೀತೆಯನ್ನು ಹೊರತಂದಿದೆ. ಇದರಲ್ಲಿರುವ ರಾಷ್ಟ್ರದ 40 ಯುವ ಸಾಧಕರ ಜೊತೆಗೆ ರಿಷಿ ಶಿವಪ್ರಸನ್ನ ಕೂಡ ಸ್ಥಾನ ಪಡೆದಿದ್ದಾನೆ ಎಂದರು.

ಅಂದು ಮಧ್ಯಾಹ್ನ 3ಕ್ಕೆ ಮೈಸೂರಿನ ಕಲಾ ಮಂದಿರದಲ್ಲಿ ಸಂವಾದ ಕಾರ್ಯಕ್ರಮ ನಡೆಯಲಿದ್ದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ನಡೆಯುವ ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ವಿವಿಧ ಶಾಲಾ ಮಕ್ಕಳಿಗೆ ಈಗಾಗಲೇ ಆಹ್ವಾನ ನೀಡಲಾಗಿದೆ. ಮಕ್ಕಳು ಮಾತ್ರವಲ್ಲದೆ, ಆಸಕ್ತ ಹಿರಿಯರು ಸಂವಾದದಲ್ಲಿ ಪಾಲ್ಗೊಳ್ಳಲು ಅವಕಾಶವಿದೆ. ಪ್ರವೇಶ ಉಚಿತವಿದೆ ಎಂದರು.

ಸುತ್ತೂರು ಮಠದ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಂವಾದ ಕಾರ್ಯಕ್ರಮದ ಸಾನಿಧ್ಯ ವಹಿಸಲಿದ್ದಾರೆ. ರೋಟರಿ ಜಿಲ್ಲೆ 3181ರ ಜಿಲ್ಲಾ ಗವರ್ನರ್ ಎ.ಆರ್.ರವೀಂದ್ರ ಭಟ್ ಉದ್ಘಾಟಿಸಲಿದ್ದು, ಅತಿಥಿಗಳಾಗಿ ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರ ರಾಜೇಅರಸ್ ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದರು. ರೋಟರಿ ಮೈಸೂರು ಉತ್ತರದ ಸದಸ್ಯರಾದ ಬಿ.ರಾಮಾರಾಧ್ಯ, ರಾಜಶೇಖರ್ ಕದಂಬ, ಡಿ.ಬಿ.ರಾಜಶೇಖರಮೂರ್ತಿ ಮತ್ತಿತರರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಶಿಕ್ಷಕರ ತರಬೇತಿ ಕೇಂದ್ರದ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು, ಜೂ.27– ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ವತಿಯಿಂದ ಮೈಸೂರಿನ ತಿಲಕ್ ನಗರದಲ್ಲಿ ನಡೆಯುತ್ತಿರುವ ಸರ್ಕಾರಿ ಅಂಧಮಕ್ಕಳ ಶಿಕ್ಷಕರ ತರಬೇತಿ ಕೇಂದ್ರ ಹಾಗೂ ಶ್ರವಣದೋಷವುಳ್ಳ ಮಕ್ಕಳ ಶಿಕ್ಷಕರ ಸರ್ಕಾರಿ ತರಬೇತಿ ಕೇಂದ್ರ ದಲ್ಲಿ 2022–23ನೇ ಸಾಲಿಗೆ ಪ್ರವೇಶ ಅರ್ಜಿಯನ್ನು ಆಹ್ವಾನಿಸಲಾಗಿದೆ. ಆನ್‌ಲೈನ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಜುಲೈ 21 ಹಾಗೂ ಪ್ರವೇಶ ಪತ್ರ ನೀಡುವ ಜುಲೈ 25, ಆನ್‌ಲೈನ್ ಪರೀಕ್ಷೆ ನಡೆಯುವ ಜುಲೈ 30 ಮತ್ತು 31 ಫಲಿತಾಂಶ ಪ್ರಕಟಣೆ 2022ರ ಆಗಸ್ಟ್ 5 ದಾಖಲಾತಿ ಪ್ರಾರಂಭ ಆಗಸ್ಟ್ 10ರಿಂದ 20ರವರೆಗೆ ನಡೆಯಲಿದೆ. ಅರ್ಜಿಗಳು https://rehabcouncil.co.in/ ಅಂತರ್ಜಾಲದಲ್ಲಿ ಲಭ್ಯವಿದೆ.

ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಮೈಸೂರಿನ ತಿಲಕ್ ನಗರದ ಪುಲಕೇಶಿ ರಸ್ತೆಯಲ್ಲಿರುವ ಅಂಧ ಹಾಗೂ ಶ್ರವಣದೋಷವುಳ್ಳ ಮಕ್ಕಳ ಶಿಕ್ಷಕರ ಸರ್ಕಾರಿ ತರಬೇತಿ ಕೇಂದ್ರದ ಉಪನಿರ್ದೇಶಕರು (ತರಬೇತಿ), ಇ–ಮೇಲ್: hkhalenkeller91 @gmail.com ದೂ.ಸಂ: 0821–2491600, 0821–2959600 ಅಥವಾ ಆಯಾ ಜಿಲ್ಲೆಗಳ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳನ್ನು ಸಂಪರ್ಕಿಸಬಹುದು ಎಂದು ಶ್ರವಣದೋಷವುಳ್ಳ ಮಕ್ಕಳ ಶಿಕ್ಷಕರ ತರಬೇತಿ ಕೇಂದ್ರದ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

28.06.2022 ಮಂಗಳವಾರ, ಮಳೆ ನಕ್ಷತ್ರ : ಆರೀದ್ರ, 22.06.2022 ರಿಂದ 05.07.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಕೃಷ್ಣ ಪಕ್ಷ
ತಿಥಿ: ಅಮಾವಾಸ್ಯೆ, ನಕ್ಷತ್ರ : ಮೃಗಶಿರ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ಮದ್ರಸ–ಇ–ಖವ್ವಾಲಿ ಇಸ್ಲಾಮ್:** ಹಜರತ್ ಟಿಪ್ಪು ಸುಲ್ತಾನ್ ಶಾಹೀದ್, ಮುಖ್ಯ ಅತಿಥಿಗಳು: ಶಾಸಕ ತನ್ವೀರ್ ಸೇಠ್, ಮೈಸೂರು ನಗರ (ಜಿಲ್ಲಾ) ವಕ್ಫ್ ಬೋರ್ಡ್ ಸಲಹಾ ಸಮಿತಿ ಅಧ್ಯಕ್ಷ ಅಲಿಜಾನಾಬ್ ಗಯಾಜ್ ಅಹಮದ್, ಉಪಾಧ್ಯಕ್ಷ ಅಲಿಜನಾಬ್ ಶಬ್ಬೀರ್ ಅಹಮದ್, ಜೆಡಿಎಸ್ ಮುಖಂಡ ಡಾ. ಮಹಬೂಬ್ ಖಾನ್, ಪಾಲಿಕೆ ಮಾಜಿ ಸದಸ್ಯ ನಾಸಿರುದ್ದೀನ್ ಬಾಬು, ಕಾಂಗ್ರೆಸ್ ಮುಖಂಡ ರೆಹಮತುಲ್ಲಾ, ಪ್ರೊ.ಭಾಷ್ಯಂ ಸ್ವಾಮೀಜಿ, ಟಿಪ್ಪು ಪ್ರಚಾರ ಸಮಿತಿ ಅಧ್ಯಕ್ಷ ತಲಕಾಡ್ ಚಿಕ್ಕರಂಗೇಗೌಡ, ಟಿಪ್ಪು ಸುಲ್ತಾನ್ ಸ್ಯಾಂಡಲ್ ಕಮಿಟಿ ಅಧ್ಯಕ್ಷ ಅಲ್‌ಹಜ್ ಇಸ್ಮಾಯಿಲ್ ಷರೀಫ್, ಸ್ಥಳ: ಟಿಪ್ಪು ಹಾಲ್, ಸಾಡೇ ರಸ್ತೆ, ಮೀನಾ ಬಜಾರ್, ಬೆಳಗ್ಗೆ 11.45ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಮಾನವಶಾಸ್ತ್ರ ಅಧ್ಯಯನ ವಿಭಾಗ, ವಿದ್ಯಾಭಾರತಿ ಉಚ್ಚ ಶಿಕ್ಷಾ ಸಂಸ್ಥಾನ** : ಭಾರತೀಯ ಜ್ಞಾನ ಪರಂಪರೆ ಕುರಿತು ಉಪನ್ಯಾಸ ಕಾರ್ಯಕ್ರಮ, ಅಧ್ಯಕ್ಷತೆ : ಮಾನವಶಾಸ್ತ್ರ ಅಧ್ಯಯನ ವಿಭಾಗದ ಮಾಜಿ ಅಧ್ಯಕ್ಷ ಪ್ರೊ. ಹೆಚ್.ಕೆ. ಭಟ್, ಸಂಪನ್ಮೂಲ ವ್ಯಕ್ತಿಗಳು : ರಘುನಂದನ, ಡಾ. ಸುಬ್ರಹ್ಮಣ್ಯ ಭಾರತೀ ಕೊಣಲೆ, ಸ್ಥಳ: ಸೆಮಿನಾರ್ ಹಾಲ್, ಮಾನವಶಾಸ್ತ್ರ ಅಧ್ಯಯನ ವಿಭಾಗ, ಬೆಳಗ್ಗೆ 10.30ಕ್ಕೆ.

■ **ಶಾರದಾ ವಿಲಾಸ ಕಾಲೇಜು, ವಾಣಿಜ್ಯ ಮತ್ತು ವ್ಯವಹಾರ ಆಡಳಿತ ಅಧ್ಯಯನ ವಿಭಾಗ** : ಸಾಫ್ಟ್‌ವೇರ್ ಟೂಲ್ಸ್ ಫಾರ್ ಕಾಮರ್ಸ್ ಅಂಡ್ ಬ್ಯುಸಿನೆಸ್ ಮ್ಯಾನೇಜ್‌ಮೆಂಟ್ ಕುರಿತು ಉಪನ್ಯಾಸ ಕಾರ್ಯಕ್ರಮ, ಗೌರವ ಅತಿಥಿಗಳು : ಶಾರದಾ ವಿಲಾಸ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ. ಬಿ.ಎಂ. ಸುಬ್ರಾಯ, ಕಾರ್ಯದರ್ಶಿ ಎನ್.ಚಂದ್ರಶೇಖರ್, ಪ್ರಾಸ್ತಾವಿಕ ನುಡಿ : ಎಸ್‌ವಿಸಿ, ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗದ ಡೀನ್ ಪ್ರೊ. ಸತ್ಯನಾರಾಯಣ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ದೇವಿಕಾ, ಸ್ಥಳ: ವೆಂಕಟಕೃಷ್ಣಯ್ಯ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಸ್ಕೂಲ್ ಆಫ್ ಲಾಂಗ್ವೇಜ್** : 'ಭಾರತೀಯ ಭಕ್ತಿ ಸಾಹಿತ್ಯ' (ಭಾಷಾ ಸಂಗಮ–2022) ಕುರಿತು ಎರಡು ದಿನಗಳ ಅಂತರರಾಷ್ಟ್ರೀಯ ಸಮ್ಮೇಳನದ ಸಮಾರೋಪ ಸಮಾರಂಭ, ಸಮಾರೋಪ ಭಾಷಣ : ಡಿಜಿಪಿ ಎಂ.ಎಸ್. ಗೀತಾ ಪ್ರಸನ್ನ, ಅಧ್ಯಕ್ಷತೆ : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕುಲಸಚಿವ ಪ್ರೊ. ಆರ್. ರಾಜಣ್ಣ, ಆನ್‌ಲೈನ್ ಮೋಡ್: https://meet.google.com/qbg-coow-xyf, ಮಧ್ಯಾಹ್ನ 3 ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ, ಯುವರಾಜ ಕಾಲೇಜು (ಸ್ವಾಯತ್ತ)** : ಯುರೇಕಾ–2022, ಆರೋಗ್ಯವೇ ಭಾಗ್ಯ ಧ್ಯೇಯದೊಂದಿಗೆ ಮಾರಾಥಾನ್, ಸ್ಥಳ: ಯುವರಾಜ ಕಾಲೇಜು, ಬೆಳಗ್ಗೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.35 ಅಕ್ಷರ ಮೈಸೂರು ಅನ್ನದ ಸೂರು –ಮೈಸೂರು ಪರಂಪರೆಯ ಅನ್ನ ಅಕ್ಷರಗಳ ಔದಾರ್ಯದ ನೆನಪು, ಪ್ರಸ್ತುತಿ– ಡಾ. ವಿ. ರಂಗನಾಥ್, 6.40 ಅರಿವಿನ ಶಿಖರ, ಗಾಯನ– ಜಯಂತಿ ವಿ. ಭಟ್, ಡಿ. ಪುರುಷೋತ್ತಮ್, ವ್ಯಾಖ್ಯಾನ– ಡಾ. ಮ. ರಾಮಕೃಷ್ಣ, 7.15 ಕಾದಂಬರಿ ವಿಹಾರ–ದೂರ ಸರಿದರು ಕಾದಂಬರಿಯ ಪ್ರಸ್ತುತಿ– ಉಮೇಶ್.ಎಸ್., 9.30 ವೃತ್ತಿ ಮಾರ್ಗದರ್ಶನ–ವಾಸ್ತು ಶಿಲ್ಪ ಮತ್ತು ಯೋಜನೆ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ.ಚಂಪಾ ಅರಸ್ ಹೆಚ್.ಎಸ್. ಅವರೊಂದಿಗೆ ಮಾತುಕತೆ, 10.00 ಗಾನ ರಸೋತ್ತುಂಗ ಶ್ರೀ ಶ್ಯಾಮಕೃಷ್ಣ–ಶ್ರೀ ಶ್ಯಾಮಾಶಾಸ್ತ್ರಿಗಳ ಕೃತಿಗಳನ್ನಾಧರಿಸಿದ ಕಾರ್ಯಕ್ರಮ

ಮಧ್ಯಾಹ್ನ: 12.30 ದೇವರನಾಮ–ಭೀಮಸೇನ್ ಜೋಷಿ, 12.45 ಸಂಗೀತದಲ್ಲಿ ಹೊಸತನ–ಡಾ. ಸಿ.ಎ.ಶ್ರೀಧರ್ ಅವರೊಂದಿಗೆ ಸಂದರ್ಶನ, ಸಂದರ್ಶಕರು– ದಿವಾಕರ ಹೆಗಡೆ, 1.20 ಭಾವಗೀತೆ – ಮೋದಿನಿ ಎನ್. ದತ್, 3.00 ಶ್ರೀ ರಾಮ್ ಭಟ್–ಹಾಡುಗಾರಿಕೆ, 4.00 ಕಥಾ ಕಾಲಕ್ಷೇಪ "ಸೀತಾ ಕಲ್ಯಾಣ", ಪ್ರಸ್ತುತಿ– ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 6.50 ಕೃಷಿರಂಗ–ಕಿಸಾನ್‌ವಾಣಿ, ಭತ್ತದ ಬೆಳೆಯಲ್ಲಿ ಸಮಗ್ರ ಕೀಟ ನಿರ್ವಹಣೆ ಕುರಿತು ಡಾ. ಸಿ. ಗೋವಿಂದರಾಜು ಅವರ ಭಾಷಣದ ಆಯ್ದ ಭಾಗಗಳು, 9.30 ಪಿ. ಸುರಭಿ – ಹಾಡುಗಾರಿಕೆ, 10.00 ಯಕ್ಷ ಸಂಪದ– ಯಕ್ಷಗಾನ ಬಡಗುತಿಟ್ಟಿನ ಮಟ್ಟುಗಳ ರೇಡಿಯೋ ಪಾತ್ರ ಕ್ಷಿಕೆ, ನಿರ್ಮಾಣ– ದಿವಾಕರ್ ಹೆಗಡೆ, 10.30 ಸವಿನೆನಪು

ಮೈಸೂರು ಮಿತ್ರ

ಮೈಸೂರಲ್ಲಿ ಕೆಂಪೇಗೌಡರ ಜಯಂತಿ

ನಾಡಪ್ರಭು ಕೆಂಪೇಗೌಡರ ಹೃದಯ ವೈಶಾಲ್ಯತೆ ಫಲವಾಗಿ ಒಕ್ಕಲಿಗರು ಎಲ್ಲರನ್ನೂ ಪ್ರೀತಿಸುತ್ತಾರೆ

● ಶಾಸಕ ಜಿ.ಟಿ.ದೇವೇಗೌಡ ಸ್ಮರಣೆ; ನಿತ್ಯವೂ ಅವರ ನಾಮಸ್ಮರಣೆಯಾಗಬೇಕು
● ಜಯಂತಿಯನ್ನು ಸರ್ಕಾರಿ ಕಚೇರಿ, ಶಿಕ್ಷಣ ಸಂಸ್ಥೆಗಳಲ್ಲಿ ಆಚರಿಸಿ

ಮೈಸೂರು, ಜೂ.27(ಆರ್‌ಕೆಬಿ)– ಬೆಂಗಳೂರಿನ ನಿರ್ಮಾತೃ ನಾಡಪ್ರಭು ಕೆಂಪೇಗೌಡರ ಜಯಂತಿಯನ್ನು ಶಿಕ್ಷಣ ಸಂಸ್ಥೆಗಳು ಮತ್ತು ಸರ್ಕಾರಿ ಕಚೇರಿಗಳಲ್ಲಿ ಕಡ್ಡಾಯವಾಗಿ ಆಚರಿಸಲು ಆದೇಶ ಹೊರಡಿಸುವಂತೆ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡ ಇಂದಿಲ್ಲಿ ಸರ್ಕಾರವನ್ನು ಆಗ್ರಹಿಸಿದರು.

ಮೈಸೂರು ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನಾಡಪ್ರಭು ಕೆಂಪೇಗೌಡ ಜನ್ಮ ದಿನಾಚರಣಾ ಸಮಿತಿ ಜಂಟಿಯಾಗಿ ಮೈಸೂರಿನ ಕಲಾಮಂದಿರದಲ್ಲಿ ಆಯೋಜಿಸಿದ್ದ ನಾಡಪ್ರಭು ಕೆಂಪೇಗೌಡರ 513ನೇ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಕೆಂಪೇಗೌಡ ಜಯಂತಿಯನ್ನು ಸರ್ಕಾರ ಎಲ್ಲಾ ಕಡೆ ಆಚರಿಸುವಂತೆ ಕೇಳಿದ್ದೇವೆಯೇ ಹೊರತು ಆ ದಿನದಂದು ರಜೆ ಕೊಡಿ ಎಂದು ನಾವು ಕೇಳಿಲ್ಲ. ಆದರೆ ಸರ್ಕಾರಿ ಕಚೇರಿ, ಶಿಕ್ಷಣ ಸಂಸ್ಥೆಗಳಲ್ಲಿ ನಾಡಪ್ರಭು ಕೆಂಪೇಗೌಡ ಜಯಂತಿ ಕಡ್ಡಾಯವಾಗಿ ಆಚರಣೆಯಾಗುವಂತೆ ಸರ್ಕಾರ ಆದೇಶ ಹೊರಡಿಸಬೇಕು ಎಂದು ಒತ್ತಾಯಿಸಿದರು.

ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ನಾಡಪ್ರಭು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಎಂದು ನಾಮಕರಣ ಮಾಡಿದ್ದನ್ನು ಪ್ರಸ್ತಾಪಿಸಿದ ಅವರು, ಇದಕ್ಕೆ ಹೋರಾಟ ಮಾಡಿದ ಎಲ್ಲರನ್ನೂ ನೆನಪಿಸಿಕೊಳ್ಳಬೇಕು ಎಂದರು.

ವಿಮಾನ ನಿಲ್ದಾಣದ ಮುಂದೆ ಕೆಂಪೇಗೌಡರ ಪ್ರತಿಮೆ ನಿರ್ಮಾಣ ಮಾಡುತ್ತಿರುವ ಸರ್ಕಾರದ ಕ್ರಮವನ್ನು ಸ್ವಾಗತಿಸಿದ ಅವರು, ಇದಕ್ಕಾಗಿ ಸರ್ಕಾರವನ್ನು ಅಭಿನಂದಿಸಿದರು.

2015ರಲ್ಲಿ ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಕೆಂಪೇಗೌಡ 504ನೇ ಜಯಂತಿಯನ್ನು ಅದ್ಧೂರಿಯಾಗಿ ಆಚರಿಸಿದ್ದನ್ನು ಸ್ಮರಿಸಿದ ಜಿಟಿಡಿ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ, ನಟ ಅಂಬರೀಶ್, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಇನ್ನಿತರರು ಭಾಗವಹಿಸಿದ್ದ ಅಭೂತಪೂರ್ವ ಕಾರ್ಯಕ್ರಮ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆದಿತ್ತು ಮೈಸೂರು ಜಿಲ್ಲೆಯ ಒಕ್ಕಲಿಗರ ಕೂಗು ಮತ್ತು ಪಾತ್ರ ಇಂದು ಕೆಂಪೇಗೌಡರಿಗೆ ಗೌರವ ಸಲ್ಲುವಂತಾಗಿದೆ. ಇದಕ್ಕಾಗಿ ಒಕ್ಕಲಿಗ ಸಮುದಾಯದ ಎಲ್ಲರನ್ನು ಅಭಿನಂದಿಸಿದರು.

ಎಲ್ಲಾ ಸಮಾಜಗಳನ್ನು ಗುರ್ತಿಸಿ ಕೆಂಪೇಗೌಡರು 27 ಪೇಟೆಗಳನ್ನು ಮಾಡಿ ಬೆಂಗಳೂರಿನ ನಿರ್ಮಾತೃವಾದರು. 200ಕ್ಕೂ ಹೆಚ್ಚು ಮಠಗಳನ್ನು ಮಾಡಿ, ಅವರಿಗೆ ಜಾಗಗಳನ್ನು ನೀಡಿದರು. ಕರ್ನಾಟಕದ ಮಣ್ಣಿನ ಮಗ ಹೆಚ್.ಡಿ.ದೇವೇಗೌಡರು ದೆಹಲಿ ಕೆಂಪುಕೋಟೆಯ ಮೇಲೆ ಧ್ವಜ ಹಾರಿಸಿದರು. ಎಸ್.ಎಂ.ಕೃಷ್ಣ ಬೆಂಗಳೂರನ್ನು ಐಟಿಬಿಟಿ ಕೇಂದ್ರವಾಗಿಸುವ ಜೊತೆಗೆ ಬೆಂಗಳೂರಿಗೆ ಸಿಲಿಕಾನ್ ಸಿಟಿ ಎಂಬ ಹೆಸರು ಬರಲು ಕಾರಣರಾದರು. ಹಾಗಾಗಿಯೇ ಒಕ್ಕಲಿಗರ ಸಮಾಜ ಎಲ್ಲಾ ಸಮಾಜದ ಪ್ರೀತಿ ಗಳಿಸಿದೆ. ಅದೇ ರೀತಿಯಲ್ಲಿ ಎಲ್ಲಾ ಸಮಾಜವನ್ನು ಒಕ್ಕಲಿಗ ಸಮುದಾಯ ಪ್ರೀತಿಸುತ್ತಾ ಬಂದಿದೆ ಎಂದು ಅಭಿಪ್ರಾಯಪಟ್ಟರು.



> 1537ರ ಸಂದರ್ಭದಲ್ಲಿ ಬೆಂಗಳೂರು ಯಾವುದೇ ತಂತ್ರಜ್ಞಾನ ಇರಲಿಲ್ಲ. ಆರ್ಕಿಟೆಕ್ಟ್‌ಗಳು ಇರಲಿಲ್ಲ. ಕೆಂಪೇಗೌಡರು ಅತ್ಯಂತ ಪ್ರಶಸ್ತ ಸ್ಥಳವನ್ನು ಆಯ್ಕೆ ಮಾಡಿ ಬೆಂಗಳೂರು ನಿರ್ಮಿಸಿದ್ದಾರೆ. ಇದನ್ನು ಬೆಂಗಳೂರಿನಲ್ಲಿ ವಾಸ ಮಾಡುವವರು ಧನ್ಯತಾ ಭಾವದಿಂದ ಸ್ಮರಿಸಿಕೊಳ್ಳಬೇಕು. ವರ್ಷದ 365 ದಿನವೂ ವಾಸಕ್ಕೆ ಯೋಗ್ಯವಾದ ಹವಾಮಾನ ಉಳ್ಳ ನಗರ ಬೆಂಗಳೂರು ಮಾತ್ರ. ಕೆಂಪೇಗೌಡರು 1537ರಲ್ಲಿ ಕಟ್ಟಿದ್ದಾರೆಂದರೆ ಅವರನ್ನು ಧನ್ಯತಾ ಭಾವದಿಂದ ನಿತ್ಯಸ್ಮರಣೆ ಮಾಡಬೇಕು. ಶೇ.52ರಿಂದ 57ರಷ್ಟು ಕರ್ನಾಟಕಕ್ಕೆ ಆದಾಯ ಬರುತ್ತಿರುವುದು ಬೆಂಗಳೂರು ನಗರದಿಂದ. ಇದು ಕೆಂಪೇಗೌಡರ ಕೊಡುಗೆ. ಅತೀ ಹೆಚ್ಚು ಕೆರೆಗಳಿರುವ ನಗರ ಬೆಂಗಳೂರು. ಕೋಟೆ ಕಟ್ಟುವಾಗ ತಮ್ಮ ಸೊಸೆಯನ್ನೇ ಬಲಿಕೊಟ್ಟವರು. ಭಕ್ತಿಗೂ ಅವಕಾಶ ಮಾಡಿಕೊಟ್ಟವರು. ಎಲ್ಲಾ ಜಾತಿ, ಸಮುದಾಯಗಳಿಗೂ ಈ ಪೇಟೆಗಳನ್ನು ಕಟ್ಟಿಕೊಟ್ಟವರು. ಅವರು ಬೆಂಗಳೂರಿಗಷ್ಟೇ ಸೀಮಿತರಲ್ಲ. ಬೆಂಗಳೂರಿನ ಆದಾಯ ಇಡೀ ರಾಜ್ಯಕ್ಕೆ ಸದ್ವಿನಿಯೋಗ ಮಾಡುತ್ತಿದ್ದೇವೆಂದರೆ ಇಡೀ ರಾಜ್ಯದ ಜನ ಕೆಂಪೇಗೌಡರನ್ನು ಧನ್ಯತಾಭಾವದಿಂದ ಸ್ಮರಿಸಬೇಕು.
> – **ಪ್ರತಾಪ್‌ಸಿಂಹ,** ಸಂಸದ

> ಬೆಂಗಳೂರು ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿಶ್ವ ಭೂಪಟದಲ್ಲಿ ಬೆಳೆದಿದೆ ಎಂದರೆ ಅದು ನಾಡಪ್ರಭು ಕೆಂಪೇಗೌಡರ ಕೊಡುಗೆ. ಬಹಳ ದೂರದೃಷ್ಟಿ ಇಟ್ಟುಕೊಂಡು ಅವರು ಬೆಂಗಳೂರನ್ನು ನಿರ್ಮಿಸಿದ್ದಾರೆ. ಅಂಥವರು ಮತ್ತೇ ಹುಟ್ಟಿ ಬರಬೇಕು. ಸಮಾಜದಗಳ ಮಧ್ಯೆ ಬಿರುಕುಂಟು ಮಾಡುವ ಇಂದಿನ ವ್ಯವಸ್ಥೆಯ ನಡುವೆ ಇಂದು 500 ವರ್ಷ ಕಳೆದರೂ ಕೆಂಪೇಗೌಡರನ್ನು ಸ್ಮರಿಸುವ ಪ್ರವೃತ್ತಿ ಬರಬೇಕು. ಅವರ ಹೆಸರು ಜೀವಂತವಾಗಿದ್ದು, ಮತ್ತಷ್ಟು ಬೆಳೆಯುವಂತಾಗಬೇಕು.
> – **ತನ್ವೀರ್‌ಸೇಠ್,** ಶಾಸಕ, ಎನ್.ಆರ್.ಕ್ಷೇತ್ರ

ಸಂಪನ್ಮೂಲ ವ್ಯಕ್ತಿ ಹೆಚ್.ಡಿ.ವಿಶ್ವನಾಥ್ ಅವರು ಕೆಂಪೇಗೌಡರ ಕುರಿತ ಉಪನ್ಯಾಸ ನೀಡಿದರು. ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಯಾಗಿ ಪ್ರಭಾರ ಮೇಯರ್ ಸುನಂದಾ ಪಾಲನೇತ್ರ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮಾಜಿ ಶಾಸಕ ವಾಸು, ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಮರಿಸ್ವಾಮಿ, ಮಾಜಿ ಮೇಯರ್‌ಗಳಾದ ಪುಷ್ಪಲತಾ ಜಗನ್ನಾಥ್, ಸಂದೇಶ್ ಸ್ವಾಮಿ, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಸಿ.ಜಿ.ಗಂಗಾಧರ್, ಕೆ.ವಿ.ಶ್ರೀಧರ್, ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಗೋವಿಂದರಾಜು, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಹೇಮಂತ್‌ಕುಮಾರ್ ಗೌಡ, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷ ಎಂ.ಆರ್.ಕೃಷ್ಣಪ್ಪಗೌಡ, ಬಣ್ಣ ಮತ್ತು ಅರಗು ಕಾರ್ಖಾನೆ ಅಧ್ಯಕ್ಷ ಎನ್.ವಿ.ಫಣೀಶ್, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್ ಇನ್ನಿತರರು ಉಪಸ್ಥಿತರಿದ್ದರು. ಇದಕ್ಕೂ ಮುನ್ನ ನಾಗೇಶ್ ಕಂದೇಗಾಲ ಮತ್ತು ತಂಡದವರಿಂದ ಗೀತ ಗಾಯನ ಕಾರ್ಯಕ್ರಮ ಗಮನ ಸೆಳೆಯಿತು.



ಮೈಸೂರಿನ ಬೋಗಾದಿ 2ನೇ ಹಂತದಲ್ಲಿ ಶ್ರೀ ಸಿದ್ಧಿ ವಿನಾಯಕ ಗ್ರೂಪ್ ವತಿಯಿಂದ ನಾಡಪ್ರಭು ಕೆಂಪೇಗೌಡರ ಜಯಂತಿ ಆಚರಿಸಲಾಯಿತು. ಈ ವೇಳೆ ವಿವಿಧ ಕ್ಷೇತ್ರಗಳನ್ನು ಸೇವೆ ಸಲ್ಲಿಸಿದವರನ್ನು ಶಾಸಕ ಜಿ.ಟಿ.ದೇವೇಗೌಡ ಸನ್ಮಾನಿಸಿ, ಅಭಿನಂದಿಸಿದರು. ಪಾಲಿಕೆ ಸದಸ್ಯೆ ಸವಿತಾ ಸುರೇಶ್, ಜಿಲ್ಲಾ ಒಕ್ಕಲಿಗರ ಸಂಘದ ನಿರ್ದೇಶಕ ಜಯರಾಮ್ ಮತ್ತಿತರರು ಉಪಸ್ಥಿತರಿದ್ದರು.

ಕೆಂಪೇಗೌಡರ ವರ್ಣರಂಜಿತ ಅದ್ದೂರಿ ಮೆರವಣಿಗೆ

ನಾನಾ ಜಾನಪದ ಕಲಾತಂಡಗಳು, ಮಠಾಧಿಪತಿಗಳು, ಜನಪ್ರತಿನಿಧಿಗಳು ಭಾಗಿ



ಮೈಸೂರು, ಜೂ.26(ಆರ್‌ಕೆಬಿ)– ಬೆಂಗಳೂರಿನ ನಿರ್ಮಾತೃ ನಾಡಪ್ರಭು ಕೆಂಪೇಗೌಡರ 513ನೇ ಜಯಂತಿ ಅಂಗವಾಗಿ ಸೋಮವಾರ ಮೈಸೂರು ಜಿಲ್ಲಾಡಳಿತ, ಕೆಂಪೇಗೌಡ ಜಯಂತ್ಯೋತ್ಸವ ಸಮಿತಿ ವತಿಯಿಂದ ಅಲಂಕೃತ ರಥದಲ್ಲಿ ಕೆಂಪೇಗೌಡರ ಪ್ರತಿಮೆಯ ವರ್ಣರಂಜಿತ ಭವ್ಯ ಮೆರವಣಿಗೆ ನಡೆಯಿತು.

ಅರಮನೆ ಉತ್ತರ ದ್ವಾರದಲ್ಲಿರುವ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ವಿವಿಧ ಮಠಾಧೀಶರು, ಚುನಾಯಿತ ಪ್ರತಿನಿಧಿಗಳು ಮತ್ತು ಇತರರು ನಂದಿಧ್ವಜಕ್ಕೆ ಪುಷ್ಪವೃಷ್ಟಿ ಮಾಡುವ ಮೂಲಕ ಮೆರವಣಿಗೆಗೆ ಚಾಲನೆ ನೀಡಲಾಯಿತು. ಬಳಿಕ ಮೆರವಣಿಗೆ ವಿವಿಧ ಜಾನಪದ ಮತ್ತು ಸಾಂಸ್ಕೃತಿಕ ಕಲಾತಂಡಗಳ ಸಹಿತ ಕೆ.ಆರ್.ವೃತ್ತ, ಡಿ.ದೇವರಾಜ ಅರಸು ರಸ್ತೆ, ಜೆಎಲ್‌ಬಿ ರಸ್ತೆ, ಹುಣಸೂರು ರಸ್ತೆ ಮೂಲಕ ವೇದಿಕೆ ಕಾರ್ಯಕ್ರಮ ಆಯೋಜಿಸಿದ್ದ ಕಲಾಮಂದಿರದಲ್ಲಿ ಅಂತ್ಯಗೊಂಡಿತು.

ನಂದಿ ಧ್ವಜ ಕುಣಿತ, ಡೊಳ್ಳು ಕುಣಿತ, ಪೂಜಾ ಕುಣಿತ, ಗೊರವರ ಕುಣಿತ, ಹುಲಿ ವೇಷ ಕುಣಿತ, ಕಂಸಾಳೆ, ಗಾರುಡಿ ಗೊಂಬೆ, ನವಿಲು ನೃತ್ಯ, ಅಲಂಕೃತ ಎತ್ತಿನ ಗಾಡಿಗಳು ಸೇರಿದಂತೆ ನಾನಾ ಜಾನಪದ ಕಲಾತಂಡಗಳು ಮೆರವಣಿಗೆಯಲ್ಲಿ ಭಾಗವಹಿಸಿದ್ದವು.

ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ, ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ, ಮೈಸೂರಿನ ಕಾಗಿನೆಲೆ ಕನಕಗುರು ಶಾಖಾ ಮಠದ ಶ್ರೀ ಶಿವಾನಂದಪುರಿ ಸ್ವಾಮೀಜಿ, ಉರಿಲಿಂಗಪೆದ್ದಿಮಠದ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ, ಪ್ರಭಾರ ಮೇಯರ್ ಸುನಂದಾ ಪಾಲನೇತ್ರ, ಶಾಸಕರಾದ ಜಿ.ಟಿ.ದೇವೇಗೌಡ, ಎಲ್.ನಾಗೇಂದ್ರ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಸಂಸದ ಪ್ರತಾಪ್‌ಸಿಂಹ, ಮಾಜಿ ಶಾಸಕರಾದ ವಾಸು, ಎಂ.ಕೆ.ಸೋಮಶೇಖರ್, ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡ, ಕಾರ್ಪೋರೇಟರ್ ಕೆ.ವಿ.ಶ್ರೀಧರ್, ಕರ್ನಾಟಕ ಒಕ್ಕಲಿಗರ ಸಂಘದ ನಿರ್ದೇಶಕ ಸಿ.ಜಿ.ಗಂಗಾಧರ್, ಮಾಜಿ ಮೇಯರ್ ಸಂದೇಶ್‌ಸ್ವಾಮಿ, ಮುಖಂಡರಾದ ಕವೀಶ್‌ಗೌಡ, ಜಯಪ್ರಕಾಶ್ (ಜೆಪಿ), ಮುಡಾ ಸದಸ್ಯೆ ಎಂ.ಲಕ್ಷ್ಮೀದೇವಿ ಇನ್ನಿತರರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.



ಬೆಂಗಳೂರಿನ ನಿರ್ಮಾತೃ ನಾಡಪ್ರಭು ಕೆಂಪೇಗೌಡರ ಜಯಂತಿ ಅಂಗವಾಗಿ ಮೈಸೂರಿನ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿ ಕೆಂಪೇಗೌಡರ ಪ್ರತಿಮೆಗೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಪುಷ್ಪನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ಮೈಸೂರು ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಮುಖಂಡರಾದ ಹರೀಶ್‌ಗೌಡ, ಭಾಸ್ಕರ್‌ಗೌಡ, ಮಾಜಿ ಮೇಯರ್ ಬಿ.ಕೆ.ಪ್ರಕಾಶ್, ವಿನಯ್‌ಕುಮಾರ್ ಇದ್ದರು.



ನಾಡಪ್ರಭು ಕೆಂಪೇಗೌಡರ 513ನೇ ಜಯಂತಿ ಅಂಗವಾಗಿ ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಸಿಹಿ ವಿತರಿಸಲಾಯಿತು. ಈ ವೇಳೆ ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ, ಬಿಜೆಪಿ ನಗರ ಪ್ರಧಾನ ಕಾರ್ಯದರ್ಶಿ ವಾಣೀಶ್‌ಕುಮಾರ್, ಸೋಮಸುಂದರ್, ಮೈಲ್ಯಾಕ್ ಅಧ್ಯಕ್ಷ ಎನ್.ವಿ.ಫಣೀಶ್, ಮುಖಂಡರಾದ ಗೋಪಾಲರಾವ್, ಮಹಿಳಾ ಮೋರ್ಚಾ ಅಧ್ಯಕ್ಷೆ ಹೇಮಾ ನಂದೀಶ್, ರೈತ ಮೋರ್ಚಾ ಅಧ್ಯಕ್ಷ ದೇವರಾಜ್, ಮುಡಾ ಸದಸ್ಯೆ ಎಂ.ಲಕ್ಷ್ಮೀದೇವಿ, ಮಾಧ್ಯಮ ಪ್ರಮುಖ್ ಎನ್.ರಾಜ್‌ಕುಮಾರ್, ಹಿಂದುಳಿದ ಮೋರ್ಚಾ ನಗರಾಧ್ಯಕ್ಷ ಜೋಗಿ ಮಂಜು, ನಗರಪಾಲಿಕೆ ನಾಮನಿರ್ದೇಶಿತ ಸದಸ್ಯ ಜಗದೀಶ್, ವಾಣಿ ಗೌಡ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರು 57ನೇ ವಾರ್ಡಿನ ಕುವೆಂಪುನಗರದ ಲವಕುಶ ಉದ್ಯಾನವನದಲ್ಲಿ ಕೆಂಪೇಗೌಡರ ಜಯಂತಿಯನ್ನು ಹೆಚ್.ವಿ.ರಾಜೀವ್ ಸ್ನೇಹ ಬಳಗದಿಂದ ಗಿಡ ನೆಡುವ ಮೂಲಕ ಆಚರಿಸಲಾಯಿತು. ಈ ಸಂದರ್ಭದಲ್ಲಿ ಮೈಸೂರು ನಗರ ರೈತ ಮೋರ್ಚಾ ಅಧ್ಯಕ್ಷ ಕೆ.ದೇವರಾಜ್, ಪರಿಸರಸ್ನೇಹಿ ಕುಮಾರ್, ಎಸ್.ರಂಗನಾಥ, ಉಪೇಂದ್ರಕುಮಾರ್, ಅಶೋಕ್, ರಾಜಣ್ಣ, ಶಂಕರ ಇನ್ನಿತರರು ಉಪಸ್ಥಿತರಿದ್ದರು.



ನಾಡಪ್ರಭು ಕೆಂಪೇಗೌಡರ ಜಯಂತಿಯನ್ನು ಮೈಸೂರಿನ ಇಟ್ಟಿಗೆಗೂಡಿನಲ್ಲಿ ಕೆಂಪೇಗೌಡರ ಅಭಿಮಾನಿಗಳು ಹಾಗೂ ಸಮುದಾಯದ ಮುಖಂಡರು, ಯುವಕರು ಅರ್ಥಪೂರ್ಣವಾಗಿ ಆಚರಿಸಿದರು. ಮೈಸೂರು–ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ನಿಕಟಪೂರ್ವ ಅಧ್ಯಕ್ಷ ಜಿ.ಮಂಜುಗೌಡ, ಪೈಲ್ವಾನ್ ಚಂದ್ರಶೇಖರ್, ಮಹೇಶ್, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಮಾದೇಗೌಡ, ಪ್ರವೀಣ್, ಗೋಕುಲ್, ಕುಮಾರ್ ಇತರರು ಹಾಜರಿದ್ದರು



ನಾಡಪ್ರಭು ಕೆಂಪೇಗೌಡರ 513ನೇ ಜಯಂತಿಯನ್ನು ಮೈಸೂರು ತಾಲೂಕು ಒಕ್ಕಲಿಗ ಸಂಘದಿಂದ ಆಚರಿಸಲಾಯಿತು. ಈ ವೇಳೆ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಹೇಮಂತ್ ಕುಮಾರ್, ಮೈಸೂರು ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಕರ್ಗಳ್ಳಿ ಮಹದೇವ್, ಉಪಾಧ್ಯಕ್ಷ ಶ್ರೀನಿವಾಸ್, ಪುಟ್ಟೇಗೌಡ, ಖಜಾಂಜಿ ಕೃಷ್ಣೇಕುಮಾರ್, ನಿರ್ದೇಶಕರಾದ ಕೃಷ್ಣೇಗೌಡ, ಜಯರಾಮೇಗೌಡ, ಅರುಣ್, ಹೊನ್ನೇಗೌಡ, ನಾಗರಾಜ್ ಹಾಜರಿದ್ದರು.

ಕೆಂಪೇಗೌಡರ ಜಯಂತಿ ಅಂಗವಾಗಿ

ನಂದೀಶ್ವರ ದೇವಸ್ಥಾನದ ಕಲ್ಯಾಣಿಯ ಸುತ್ತ ಸ್ವಚ್ಛತೆ

ಮೈಸೂರು, ಜೂ.27(ಎಂಕೆ)– ನಾಡಪ್ರಭು ಕೆಂಪೇಗೌಡರ ಜಯಂತಿ ಅಂಗವಾಗಿ ಜನಚೇತನ ಟ್ರಸ್ಟ್ ವತಿಯಿಂದ ಮೈಸೂರಿನ ಹೊರವರ್ತುಲ ರಸ್ತೆಯ ಬಂಡೀಪಾಳ್ಯ ಬಳಿಯಿರುವ ನಂದೀಶ್ವರ ದೇವಸ್ಥಾನದ ಕಲ್ಯಾಣಿಯ ಸುತ್ತ ಸ್ವಚ್ಛತಾ ಕಾರ್ಯ ನಡೆಸಲಾಯಿತು.



ಟ್ರಸ್ಟ್‌ನ ಅಧ್ಯಕ್ಷ ಪ್ರಸನ್ನ ಎನ್.ಗೌಡ ನೇತೃತ್ವದಲ್ಲಿ ಲಯನ್ಸ್ ಕ್ಲಬ್ ಆಫ್ ಮೈಸೂರು ಪ್ಯಾಲೇಸ್ ಸಿಟಿ, ಕರ್ನಾಟಕ ರಾಜ್ಯ ರೈತ ಸಂಘ, ಗ್ರಾಮೀಣ ಟ್ರಸ್ಟ್ ಮೈಸೂರು, ಸ್ವಚ್ಛಂದ ಸಂಸ್ಥೆ ಸಹಕಾರದೊಂದಿಗೆ ಹಮ್ಮಿಕೊಂಡಿರುವ ಒಂದು ವಾರ ಕಲ್ಯಾಣಿ ಸ್ವಚ್ಛತಾ ಕಾರ್ಯ ನಡೆಯುತ್ತಿದ್ದು, ಮೊದಲ ದಿನದಲ್ಲಿ ಕಲ್ಯಾಣಿ ಸುತ್ತಲು ಬೆಳೆದು ನಿಂತಿದ್ದ ಗಿಡ–ಗಂಟಿಗಳನ್ನು ಕತ್ತರಿಸಿ ಸ್ವಚ್ಛ ಮಾಡಲಾಯಿತು.

ಕಳೆದ ವರ್ಷ ವಿವಿಧ ಸಂಘಟನೆಗಳ ಸಹಕಾರದೊಂದಿಗೆ ಟ್ರಸ್ಟ್‌ನಿಂದ ನಂದೀಶ್ವರ ದೇವಸ್ಥಾನದ ಕಲ್ಯಾಣಿಯನ್ನು ಪುನಶ್ಚೇತಗೊಳಿಸಲಾಗಿತ್ತು. ನಿರ್ವಹಣೆ ಇಲ್ಲದೆ ಕಲ್ಯಾಣಿಯ ಸುತ್ತಲೂ ಕಸ ಬಿದ್ದಿದ್ದು, ಗಿಡ–ಗಂಟಿಗಳು ಬೆಳೆದು ನಿಂತಿವೆ. ಕಲ್ಯಾಣಿ ನಿರ್ವಹಣೆಯ ಜವಾಬ್ದಾರಿಯನ್ನು ಲಯನ್ಸ್ ಸಂಸ್ಥೆಗೆ ನೀಡಬೇಕು ಎಂದು ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಮಾಡಿದ್ದು, ಯಾವುದೇ ಪ್ರತಿಕ್ರಿಯೆ ಬಂದಿಲ್ಲ ಎಂದು ಜನಚೇತನ ಟ್ರಸ್ಟ್ ಪ್ರಸನ್ನ ಎನ್.ಗೌಡ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಸೋನಿಯಾ ಗಾಂಧಿ ಆಪ್ತ ಕಾರ್ಯದರ್ಶಿ ವಿರುದ್ಧ ರೇಪ್ ಕೇಸ್ ದಾಖಲು

ನವದೆಹಲಿ, ಜೂ.27– ಕಾಂಗ್ರೆಸ್ ಹಂಗಾಮಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರ ಆಪ್ತ ಕಾರ್ಯದರ್ಶಿ ಪಿ.ಪಿ. ಮಾಧವನ್ ವಿರುದ್ಧ ಅತ್ಯಾಚಾರ ಮತ್ತು ಕ್ರಿಮಿನಲ್ ಬೆದರಿಕೆಯ ಕೇಸ್ ದಾಖಲಾಗಿದೆ. 26 ವರ್ಷದ ಯುವತಿಯೊಬ್ಬಳು ನೀಡಿದ ದೂರಿನ ಆಧಾರದ ಮೇಲೆ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ. ಉದ್ಯೋಗ ಕೊಡಿಸುವ ನೆಪದಲ್ಲಿ ಆರೋಪಿ ಆಮಿಷವೊಡ್ಡಿದ್ದರು ಮತ್ತು ಮದುವೆಯಾಗುವುದಾಗಿ ನಂಬಿಸಿದ್ದರು ಎಂದು ಯುವತಿ ಆರೋಪಿರುವುದಾಗಿ ಅವರು ಹೇಳಿದ್ದಾರೆ. ತನ್ನ ಮೇಲೆ ಅತ್ಯಾಚಾರವಾಗಿದ್ದು, ಈ ವಿಚಾರವನ್ನು ಯಾರಿಗಾದರೂ ಹೇಳಿದರೆ ಭೀಕರ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಬೆದರಿಕೆ ಹಾಕಲಾಗಿತ್ತು ಎಂದು ಯುವತಿ ಆರೋಪಿಸಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಈ ಸಂಬಂಧ ಜೂನ್ 25 ರಂದು ಉತ್ತಮ್ ನಗರ ಪೊಲೀಸ್ ಠಾಣೆಯಲ್ಲಿ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 376 (ಅತ್ಯಾಚಾರ) ಮತ್ತು 506 (ಕ್ರಿಮಿನಲ್ ಬೆದರಿಕೆ) ಅಡಿಯಲ್ಲಿ ಪ್ರಕರಣವನ್ನು ದಾಖಲಿಸಲಾಗಿದೆ. ಈ ವಿಷಯದ ಬಗ್ಗೆ ತನಿಖೆ ನಡೆಸುತ್ತಿದ್ದೇವೆ ಎಂದು ದ್ವಾರಕ ಡಿಸಿಪಿ ಎಂ. ಹರ್ಷವರ್ಧನ್ ಮಾಹಿತಿ ನೀಡಿದ್ದಾರೆ. ಹಿರಿಯ ರಾಜಕೀಯ ನಾಯಕರೊಬ್ಬರ ಆಪ್ತ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿರುವ 71 ವರ್ಷದ ವ್ಯಕ್ತಿಯ ವಿರುದ್ಧದ ಆರೋಪಗಳ ಕುರಿತು ಪೊಲೀಸರು ತನಿಖೆ ನಡೆಸುತ್ತಿದ್ದಾರೆ ಎಂದು ಅವರು ಹೇಳಿದರು. ಡಿಸಿಪಿ ರಾಜಕೀಯ ಮುಖಂಡನ ಹೆಸರನ್ನು ಹೇಳದಿದ್ದರೂ, ಮಾಧವನ್ ವಿರುದ್ಧ ಆರೋಪ ಹೊರಿಸಲಾಗಿದೆ ಎಂದು ದೆಹಲಿ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಮಾದಕ ವ್ಯಸನಕ್ಕೆ ಬಲಿಯಾಗದೇ ಉತ್ತಮ ಭವಿಷ್ಯ ರೂಪಿಸಿಕೊಳ್ಳಿ

ಮೈಸೂರು,ಜೂ.27(ಎಸ್‌ಪಿಎನ್)– ವಿದ್ಯಾರ್ಥಿ ದಿಸೆಯಲ್ಲಿ ಕುಡಿತ, ಧೂಮಪಾನ ಹಾಗೂ ಇತರೆ ಮಾದಕ ವ್ಯಸನಕ್ಕೆ ಬಲಿಯಾಗದೇ ತಮ್ಮ ಉಜ್ವಲ ಭವಿಷ್ಯ ರೂಪಿಸಿಕೊಳ್ಳಲು ಗಮನಹರಿಸಿ ಎಂದು ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿ ಆರ್.ಮಾಲಿನಿ ಸಲಹೆ ನೀಡಿದರು.



ಮೈಸೂರು–ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಸಭಾಂಗಣದಲ್ಲಿ ಜೆಎಸ್‌ಎಸ್ ಆಪ್ತಸಮಾಲೋಚನಾ ಕೇಂದ್ರ, ಜೆಎಸ್‌ಎಸ್ ಮಹಾವಿದ್ಯಾಪೀಠ, ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಸಹಯೋಗದೊಂದಿಗೆ ಏರ್ಪಡಿಸಿದ್ದ 'ಮಾದಕ ವ್ಯಸನ ಮತ್ತು ಮಾನವ ಅಕ್ರಮ ಸಾಗಾಣಿಕೆ ವಿರುದ್ಧ ಅಂತಾರಾಷ್ಟ್ರೀಯ ದಿನಾಚರಣೆ' ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಇತ್ತೀಚೆಗೆ ಕಾಲೇಜು ವಿದ್ಯಾರ್ಥಿಗಳು ಕೆಟ್ಟವರ ಸಹವಾಸದಿಂದ ಕುಡಿತ, ಧೂಮಪಾನ ಹಾಗೂ ಇತರೆ ಮಾದಕ ವ್ಯಸನಕ್ಕೆ ಬಲಿಯಾಗುವವರ ಸಂಖ್ಯೆ ಹೆಚ್ಚಾಗುತ್ತಿದೆ. ಇದರಿಂದ ನಮ್ಮ ಯುವ ಸಮೂಹ ಹಾದಿ ತಪ್ಪುತ್ತಿದೆ. ಹಾಗಾಗಿ ವಿದ್ಯಾರ್ಥಿಗಳ ವ್ಯಸನಕ್ಕೆ ಬಲಿಯಾಗದೇ ವ್ಯಾಸಂಗದ ಕಡೆ ಗಮನಹರಿಸುವಂತೆ ಮನವಿ ಮಾಡಿದರು.

ವ್ಯಸನಕ್ಕೆ ಬಲಿಯಾಗುವ ಯುವಕನ ಸುತ್ತಮುತ್ತಲಿನ ಪರಿಸರ ಹಾಗೂ ಆತನ ಕುಟುಂಬದ ವಾತಾವರಣವೂ ಕಲುಷಿತಗೊಳ್ಳುತ್ತದೆ.ಇದರ ನೇರ ಪರಿಣಾಮ ಆತನ ತಂದೆ–ತಾಯಿ ಹಾಗೂ ಕುಟುಂಬದ ಇತರೆ ಸದಸ್ಯರ ಮೇಲೂ ಬೀರುತ್ತದೆ ಹಾಗೂ ಆ ಕುಟುಂಬದ ಗೌರವವೂ ಮಣ್ಣು ಪಾಲಾಗುತ್ತದೆ. ಹಾಗಾಗಿ ವಿದ್ಯಾರ್ಥಿಗಳು ಇದರ ಬಗ್ಗೆ ಹೆಚ್ಚಿನ ಗಮನ ಹರಿಸುವಂತೆ ಮನವಿ ಮಾಡಿದರು.

ಮೈಸೂರಿನಲ್ಲಿ ಮಾದಕ ವ್ಯಸನ ಬಗ್ಗೆ ಜೆಎಸ್‌ಎಸ್ ಹಾಗೂ ಸೈಂಟ್ ಮೇರಿಸ್‌ನಲ್ಲಿ ಆಪ್ತ ಸಮಾಲೋಚನಾ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ ಎಂದ ಅವರು, ಮಾದಕ ವ್ಯಸನದಿಂದ ಮುಕ್ತರಾಗಬೇಕಾದರೆ, ವಿದ್ಯಾರ್ಥಿಗಳು ತಂದೆ–ತಾಯಿ ಹಾಗೂ ಉಪನ್ಯಾಸಕರ ಮಾರ್ಗದರ್ಶನದಲ್ಲಿ ಮುಂದಿನ ಜೀವನ ರೂಪಿಸಿಕೊಳ್ಳುವಂತೆ ಕಿವಿ ಮಾತು ಹೇಳಿದರು.

ಮಾದಕ ವ್ಯಸನದಿಂದ ಮುಕ್ತಗೊಂಡು ಹೊಸ ಬದುಕು ರೂಪಿಸಿಕೊಂಡಿರುವ ದೇವೇಂದ್ರ(ಹೆಸರು ಬದಲಾಯಿಸಲಾಗಿದೆ) ಎಂಬುವರು ತಮ್ಮ ಅನಿಸಿಕೆ ವ್ಯಕ್ತಪಡಿಸುತ್ತಾ, ಕಳೆದ ನಾಲ್ಕೈದು ವರ್ಷಗಳ ಹಿಂದೆ ಕೆಟ್ಟವರ ಸಹವಾಸದಿಂದ ಮಾದಕ ವ್ಯಸನಕ್ಕೆ ಬಲಿಯಾದೆ. ದಿನನಿತ್ಯ ಮೂರಿಂದ ನಾಲ್ಕು ಬಾರಿ ಡ್ರಗ್ ಸೇವಿಸುವ ಹವ್ಯಾಸ ಬೆಳೆಯಿತು. ಇದರಿಂದ ನಮ್ಮ ಮನೆಯ ವಾತಾವರಣವೇ ಕಲುಷಿತಗೊಂಡಿತು. ನನ್ನಿಂದಾಗಿ ನನ್ನ ತಂಗಿ ವಿದ್ಯಾಭ್ಯಾಸಕ್ಕೆ ತೊಂದರೆ, ನನ್ನಿಂದಾಗಿ ಅಪ್ಪ–ಅಮ್ಮನಿಗೆ ಸಮಾಜದಲ್ಲಿ ಕೆಟ್ಟ ಹೆಸರು, ಅಕ್ಕ–ಪಕ್ಕದ ಮನೆಯವರು ನನ್ನನ್ನು ದೂರ್ತನಂತೆ ನೋಡುವ ವಾತಾವರಣ ನಿರ್ಮಾಣವಾಯಿತು. ಆ ವೇಳೆ ಸಮಾಜದಲ್ಲಿ ನಾನು ಅನುಭವಿಸಿದ ನೋವುಗಳನ್ನು ಹೇಳತೀರದು ಎಂದು ವಿವರಿಸಿದರು.

ವ್ಯಸನಕ್ಕೆ ಸಿಲುಕಿದ್ದಾಗ ನನ್ನ ಬಾಲ್ಯದ ಗೆಳೆಯರೇ ನನ್ನಿಂದ ಅಂತರ ಕಾಯ್ದುಕೊಂಡರು. ಅಕ್ಕ–ಪಕ್ಕದ ಮನೆಯವರು ನನ್ನನ್ನು ಕಂಡರೇ ಕೆಟ್ಟ ದೃಷ್ಟಿಯಲ್ಲಿ ನೋಡುತ್ತಿದ್ದರು. ಒಮ್ಮೆ ಡ್ರಗ್ ಸೇವನೆ ಮಿತಿ ಮೀರಿ ನಾಲ್ಕು ದಿನ ಪ್ರಜ್ಞೆ ಕಳೆದುಕೊಂಡು ಆಸ್ಪತ್ರೆ ಪಾಲಾಗಿದ್ದೆ. ಆ ದಿನಗಳಲ್ಲಿ ನನ್ನ ತಂದೆ–ತಾಯಿ ಚಿಕಿತ್ಸೆ ಕೊಡಿಸಿ ನನ್ನನ್ನು ಉಳಿಸಿಕೊಂಡರು. ಈ ನಾಲ್ಕು ದಿನ ಏನಾಗಿತ್ತು ಎಂದು ಇಂದಿಗೂ ನೆನಪು ಬರುತ್ತಿಲ್ಲ. ಒಮ್ಮೆ ವ್ಯಸನಕ್ಕೆ ಸಿಲುಕಿದರೆ ನಮ್ಮ ಮುಂದಿನ ಜೀವನವೇ ನರಕವಾಗುತ್ತದೆ ಎಂದು ತಾನು ವ್ಯಸನಿಯಾಗಿದ್ದ ಸಂದರ್ಭವನ್ನು ಎಳೆಎಳೆಯಾಗಿ ವಿವರಿಸಿದರು.

ಈ ವೇಳೆ ಜಿಲ್ಲಾ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಬಿ.ಬಸವರಾಜು, ಕಾಲೇಜಿನ ಮುಖ್ಯ ಕಾರ್ಯ ನಿರ್ವಾಹಕ ಪ್ರೊ.ಬಿ.ವಿ. ಸಾಂಬಶಿವಯ್ಯ, ಪಾಂಶುಪಾಲ ಪ್ರೊ.ಎಂ.ಪಿ. ವಿಜಯೇಂದ್ರ ಕುಮಾರ್, ಎಂ.ಎಸ್.ಸುಶ್ಮಿತಾ, ಡಾ.ಕುಮುದಿನಿ ಅಚ್ಚಿ, ಡಾನ್ ಬಾಸ್ಕೊ ಸಂಸ್ಥೆಯ ಇಮಾನ್ಯುಯಲ್, ಡಾ.ಬಿ.ಸುಶ್ಮಿತ ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ವೈದ್ಯರು : ನಾಲ್ಕನೇ ವಾರ್ಡ್‌ನ ರೋಗಿಗೆ ಜ್ಞಾನ ಬಂತೆ?
ನರ್ಸ್ : ಬಂದಿತ್ತು ಸಾರ್, ಆದರೆ ನೀವು ಕೊಟ್ಟ ಬಿಲ್ ನೋಡಿ ಎಚ್ಚರ ತಪ್ಪಿದ್ದಾನೆ.

ಮೈಸೂರು ಮಿತ್ರ

ಮಂಗಳವಾರ, 28 ಜೂನ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ M.A.

ಅಮೃತವಾಹಿನಿ

ನಿಮಗೆ ಅಧಿಕಾರದ ಆವಶ್ಯಕತೆಯಿದ್ದಾಗ ದೃಢವಾಗಿರಿ, ಆದರೆ ಅಧಿಕಾರ ಚಲಾಯಿಸುವಾಗ ಸಹೃದಯಿಗಳಾಗಿರಿ – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಪ್ರಯಾಸ ಪಡದೆ ಪ್ರಯಾಗ ಸಿಗದು

ನಿಮ್ಮ ಪತ್ರಗಳು

ಹೆಚ್ಚುತ್ತಿರುವ ವಂಚನೆ ಪ್ರಕರಣಗಳು

ಮಾನ್ಯರೆ,

ಶ್ರೀರಂಗಪಟ್ಟಣ ತಾಲೂಕಿನ ಗಾಮನಹಳ್ಳಿ ನಿವಾಸಿ ನಿಂಗರಾಜು ಎಂಬ ರೈತ, ತನ್ನ ಮಗನಿಗಾಗಿ ಕೆಲಸ ಪಡೆಯಲು ಕೋಲಾರ ಮೂಲದ ವಂಚಕನೊಬ್ಬನಿಗೆ 38 ಲಕ್ಷ ರೂಪಾಯಿಗಳನ್ನು ನೀಡಿ ಮೋಸ ಹೋದ ಪ್ರಕರಣ ಮಾಧ್ಯಮಗಳಲ್ಲಿ ವರದಿಯಾಗಿದೆ. ಮತ್ತೊಂದು ಪ್ರಕರಣದಲ್ಲಿ "ಕೌನ್ ಬನೇಗಾ ಕರೋಡ್ ಪತಿ" ಸ್ಪರ್ಧೆಯಲ್ಲಿ 25 ಲಕ್ಷ ರೂಪಾಯಿ ಬಹುಮಾನ ಬಂದಿದೆ ಎಂದು ಗೃಹಿಣಿಯೋರ್ವಳನ್ನು ನಂಬಿಸಿ 25 ಸಾವಿರ ರೂಪಾಯಿಗಳನ್ನು ವಂಚಿಸಿದ ಪ್ರಕರಣ ನಗರದಿಂದ ವರದಿಯಾಗಿದೆ. ಮತ್ತೊಂದು ಇಂತಹುದೇ ಪ್ರಕರಣದಲ್ಲಿ ಪಾರ್ಟ್‌ಟೈಮ್ ಕೆಲಸ ಕೊಡಿಸುವ ಆಮಿಷ ಒಡ್ಡಿ ಮೈಸೂರಿನ ಸರಸ್ವತಿಪುರಂನ ವಿದ್ಯಾರ್ಥಿನಿಓರ್ವಳಿಂದ 1.45 ಲಕ್ಷ ರೂಪಾಯಿಗಳನ್ನು ಲಪಟಾಯಿಸಿರುವ ಮತ್ತೊಂದು ಪ್ರಕರಣ ವರದಿಯಾಗಿದೆ. ದೇಶಾದ್ಯಂತ ಇಂತಹ ಸಾವಿರಾರು ಮೋಸದ ಪ್ರಕರಣಗಳು ಪ್ರತಿನಿತ್ಯ ನಡೆಯುತ್ತಲೇ ಇದ್ದರೂ ಜನ ಮತ್ತೆ ಮತ್ತೆ ಏಕೆ ಮೋಸ ಹೋಗುತ್ತಿದ್ದಾರೆಂಬುದು ಅರ್ಥವಾಗುತ್ತಿಲ್ಲ. ಇತ್ತೀಚಿನ ವರ್ಷಗಳಲ್ಲಂತೂ ಆನ್‌ಲೈನ್ ವಂಚನೆಯ ಪ್ರಕರಣಗಳು ಹೆಚ್ಚುತ್ತಿವೆ. ನಿಮಗೆ ಆ ಬಹುಮಾನ ಬಂದಿದೆ, ನಿಮಗೆ ಈ ಬಹುಮಾನ ಬಂದಿದೆ ಎಂದ್ಹೇಳಿ ಮುಗ್ಧ ಜನರನ್ನು ನಂಬಿಸಿ, ಅವರು ಜೀವನವಿಡಿ ಕಷ್ಟಪಟ್ಟು ಕೂಡಿಟ್ಟಿರುವ ಹಣಕ್ಕೆ ಕತ್ತರಿ ಹಾಕುತ್ತಿರುವ ವಂಚಕರಿಗೆ ಪೋಲಿಸರು ಸರಿಯಾದ ಪಾಠ ಕಲಿಸಬೇಕಾಗಿದೆ. ಇನ್ನು ನಿರುದ್ಯೋಗವನ್ನೇ ಒಂದು ಬಂಡವಾಳ ಮಾಡಿಕೊಂಡು ಕೆಲಸ ಕೊಡಿಸುವ ಆಮಿಷ ಒಡ್ಡಿ ಯುವ ಜನರಿಗೆ ಲಕ್ಷಾಂತರ ರೂಪಾಯಿಗಳನ್ನು ವಂಚಿಸುತ್ತಿರುವ ಪ್ರಕರಣಗಳು ಹೆಚ್ಚುತ್ತಿವೆ. "ಅಲ್ಲಾ ಸ್ವಾಮಿ ಪಾರ್ಟ್‌ಟೈಮ್ ಕೆಲಸಕ್ಕೆ ಯಾರಾದರೂ 1.45 ಲಕ್ಷ ರೂಪಾಯಿ ಲಂಚ ನೀಡುತ್ತಾರಾ? ಪಿಎಸ್ಐ ನೇಮಕಾತಿಯಲ್ಲಿ ಕೋಟ್ಯಾಂತರ ರೂಪಾಯಿಗಳ ಹಗರಣ ನಡೆದಿರುವುದು ಇನ್ನೂ ಹಸಿರಾಗಿಯೇ ಇದೆ. ವಂಚಕರು ನಿಮ್ಮ ಮುಗ್ಧತೆ ಅಥವಾ ಅಸಹಾಯಕತೆಯನ್ನು "ಎನ್ ಕ್ಯಾಶ್" ಮಾಡಿಕೊಳ್ಳಲು ತುದಿಗಾಲಲ್ಲಿ ನಿಂತಿರುತ್ತಾರೆ. ಹೇಳಿ ಕೇಳಿ ಇದು "ಆನ್‌ಲೈನ್ ಯುಗ" ಈಗ ಬಹುತೇಕ ವ್ಯವಹಾರಗಳು ಆನ್‌ಲೈನ್ ಮೂಲಕವೇ. ಇದು ವಂಚಕರಿಗೆ ರಹದಾರಿ ನೀಡಿದ ಹಾಗೆ. ದಯವಿಟ್ಟು, ನಿಮ್ಮ ವೈಯುಕ್ತಿಕ ವಿವರಗಳಾದ ಪಾಸ್ ಬುಕ್ ನಂಬರ್, ಆಧಾರ್ ಕಾರ್ಡ್ ನಂಬರ್, ಒಟಿಪಿ ನಂಬರ್ ಇತ್ಯಾದಿ ಇತ್ಯಾದಿಗಳನ್ನು ಅನಗತ್ಯವಾಗಿ ಯಾರಿಗೂ ನೀಡಬೇಡಿ.

ಮೋಸ ಹೋಗುವವರು ಇರುವವರೆಗೆ ಮೋಸಗಾರರು ಇದ್ದೆ ಇರುತ್ತಾರೆ ಎಂಬುದನ್ನು ಮರೆಯಬೇಡಿ. ಯಾವುದೇ ಅನಾಮದೇಯ ಕರೆ ಬಂದರೆ, ಕರೆ ಮಾಡಿದವರಿಗೆ ಯಾವ ವಿವರವನ್ನೂ ನೀಡದೆ, ಮೊದಲು ಅವರ ಪೂರ್ವಾಪರ ವಿಚಾರಿಸಿ, ಅನುಮಾನ ಬಂದರೆ ಸಮೀಪದ ಪೋಲಿಸ್ ಠಾಣೆಗೆ ಕರೆ ಮಾಡಿ. ಒಟ್ಟಿನಲ್ಲಿ ಜಾಗ್ರತೆ ಅತ್ಯಗತ್ಯ.

–ಡಾ.ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ರಸ್ತೆ ದುರಸ್ಥಿಗೊಳಿಸಲು ಮೋದಿಯೇ ಬರಬೇಕೇ?

ಮಾನ್ಯರೆ,

ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಯುಕ್ತ ಜೂನ್ 21ರಂದು ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಮೈಸೂರಿಗೆ ಆಗಮಿಸಿದ್ದರು. ಇದರ ಸಲುವಾಗಿಯೇ ಕೆಲವು ದಿನಗಳ ಹಿಂದೆಯಷ್ಟೇ ಹಾಳಾಗಿದ್ದ ಕೆಲವು ರಸ್ತೆಗಳ ದುರಸ್ಥಿ ಕಾರ್ಯ ಆರಂಭಗೊಂಡಿತು. ಅದರಲ್ಲೂ ಮುಖ್ಯವಾಗಿ ಯೋಗ ಏರ್ಪಡುವ ಸ್ಥಳಗಳಾದ ಅರಮನೆಯ ಹಿಂಭಾಗದ ರಸ್ತೆ ಮತ್ತು ಮಾಲ್‌ಆಫ್ ಮೈಸೂರಿಗೆ ಹೋಗುವ ರಸ್ತೆಗಳ ದುರಸ್ಥಿ ಕಾರ್ಯದ ಜೊತೆಗೆ ಅಲ್ಲಿನ ಸುತ್ತಮುತ್ತಲೂ ಸುಣ್ಣ–ಬಣ್ಣಗಳನ್ನು ಹಚ್ಚಿ ಕಂಗೊಳಿಸುವಂತೆ ಮಾಡಿದ್ದರು. ಕಾರಣ ಮೋದಿಯವರು ಬರುತ್ತಾರೆ ಎಂದು. ಏಕೆ ಮೈಸೂರಿನಲ್ಲಿ ಇನ್ಯಾವ ರಸ್ತೆಯು ಹದಗೆಟ್ಟಿಲ್ಲವೇ? ಆ ರಸ್ತೆಗೆ ಮೋದಿಯವರು ಬರುವುದಿಲ್ಲ ಎಂಬ ಕಾರಣಕ್ಕೆ ದುರಸ್ಥಿ ಮಾಡಿಸುತ್ತಿಲ್ಲವೇ? ನಗರದ ಎಷ್ಟೋ ರಸ್ತೆಗಳು ಹಾಳಾಗಿ ಪ್ರತಿದಿನ ಸಾರ್ವಜನಿಕರ ಮೃತ್ಯುಗಳಾಗಿ ಕಾಡುತ್ತಿವೆ. ಅಂತಹ ಸ್ಥಳಗಳು ಯಾರಿಗೂ ಕಾಣುವುದೇ ಇಲ್ಲ ಏಕೆಂದರೆ ಅಲ್ಲಿಗೆ ಮೋದಿ ಅವರು ಬರುವುದಿಲ್ಲವಲ್ಲ ಅದಕ್ಕೆ. ಜನರಿಗೆ ಏನಾದರೆ ಅವರಿಗೇನು ಮೊದಲು ಅವರು ದೊಡ್ಡ ನಾಯಕರಿಂದ ಶಹಭಾಷ್ ಗಿರಿ ಪಡೆಯಬೇಕಷ್ಟೆ. ಇಂತಹ ಮನಸ್ಥಿತಿಯುಳ್ಳ ನಾಯಕರು ಅಥವಾ ಅಧಿಕಾರಿಗಳು ಇರುವವರೆಗೂ ನಮ್ಮ ನಗರದ ಅಭಿವೃದ್ಧಿಯ ಕನಸು ಕನಸಾಗಿಯೇ ಇರುತ್ತದೆ ಹೊರತು ನಿಜವಾಗಲೂ ಸಾಧ್ಯವೇ ಇಲ್ಲ. ದಯವಿಟ್ಟು ಮೊದಲು ನಿಮ್ಮ ರಾಜಕೀಯ ತಂತ್ರವನ್ನು ಬಿಟ್ಟು ಜನರ ಕಲ್ಯಾಣಕ್ಕಾಗಿ ಕೆಲಸ ಮಾಡಿ ಹಾಗೂ ಮತವನ್ನು ನೀಡಿ ನಮ್ಮನ್ನು ಆಳಲು ನಿಮಗೆ ಅಧಿಕಾರವನ್ನು ನೀಡಿದ್ದೇವೆ. ಅದನ್ನು ಸದುಪಯೋಗ ಪಡಿಸಿಕೊಂಡು ಒಳ್ಳೆಯ ಕೆಲಸ ಮಾಡಿ ಜನರ ಜೀವನದೊಂದಿಗೆ ಆಟವಾಡದೆ ಅಧಿಕಾರಕ್ಕೆ ಆಸೆಪಡದೆ, ಅವಶ್ಯಕತೆ ಇದ್ದ ರಸ್ತೆಗೆ ದುರಸ್ಥಿಗೊಳಿಸಬೇಕಾಗಿ ವಿನಂತಿ.

–ಐಶ್ವರ್ಯ, ಚಟ್ನಹಳ್ಳಿ, ಮಾನಸ ಗಂಗೋತ್ರಿ, ಮೈಸೂರು.

ಜಗದ್ಗುರು ಭಾರತೀ ತೀರ್ಥರಿಂದಲೂ ನಮ್ಮ ರಾಮದಾಸರಿಗೆ ಪ್ರೀತಿಯ ಗುದ್ದು!

ಮಾನ್ಯರೆ,

ಕೆಲ ವರ್ಷಗಳ ಹಿಂದೆ, ಮೈಸೂರು–ಮಂಡ್ಯಕ್ಕೆ ಶೃಂಗೇರಿ ಜಗದ್ಗುರು ಭಾರತೀ ತೀರ್ಥರ ಆಗಮನವಾಗಿತ್ತು. ಸುಮಾರು 11 ದಿನಗಳ ಯಾತ್ರೆ ನಂತರ, ಪೂಜ್ಯರು ಶೃಂಗೇರಿಗೆ ಮರಳುವ ದಿನ ಬಂದಿತ್ತು. ಶಂಕರಮಠದಲ್ಲಿ ಅವರಿಗೆ ಶುಭ ವಿದಾಯ ಹೇಳಲು ನಾನು, ಧರ್ಮಾಧಿಕಾರಿ ಹೆಚ್. ರಾಮಚಂದ್ರ, ಚುನಾವಣೆಯಲ್ಲಿ ಶಾಸಕ ಸ್ಥಾನದಿಂದ ವಂಚಿತರಾಗಿದ್ದ ಎಸ್.ಎ.ರಾಮದಾಸ್ ಮುಂತಾದವರು ನೆರೆದಿದ್ದೆವು. ಶ್ರೀಗಳು ಸಂಪ್ರದಾಯದಂತೆ ದೇವರ ದರ್ಶನಕ್ಕೆ ತೆರಳುವಾಗ, ಮಧ್ಯದಲ್ಲಿ ಅವರಿಗಾಗಿ ಕಾಯುತ್ತಿದ್ದ ನಮ್ಮನ್ನು ನೋಡಿ ಅಲ್ಲಿಂದಲೇ ಆಶೀರ್ವದಿಸಿದರು. ಆಗ ನಮ್ಮ ಮಧ್ಯೆಯಿದ್ದ ರಾಮದಾಸ್ ನಡು ಬಗ್ಗಿ ವಂದಿಸಲು ಮುಂದಾದಾಗ, ಶ್ರೀಗಳು ನಗುತ್ತಾ, "ಶೃಂಗೇರಿಗೆ ಬಾ" ಎಂದು ಹೇಳಿ, ಬೆನ್ನಿನ ಮೇಲೆ ಪ್ರೀತಿಯಿಂದ ಗುದ್ದಿದರು.

ಸಾಮಾನ್ಯವಾಗಿ ಮಠಾಧಿಪತಿಗಳನ್ನು ನಾವು ಮುಟ್ಟಿಕೊಳ್ಳುವುದಿಲ್ಲ, ಅವರೂ ನಮ್ಮನ್ನು ಸ್ಪರ್ಶಿಸುವುದಿಲ್ಲ. ಅಂದು ಶ್ರೀಗಳ ದಿಢೀರ್ ವರ್ತನೆ ನಮಗೆಲ್ಲಾ ಸೋಜಿಗ ತಂದಿತ್ತು. ನಂತರ ನಾನು, ರಾಮದಾಸ್ ಶೃಂಗೇರಿಗೂ ಹೋಗಿ ಶ್ರೀಗಳ ಆಶೀರ್ವಾದ ಪಡೆದಿದ್ದೆವು. ತದನಂತರ ನಡೆದಿದ್ದೆಲ್ಲಾ ಇತಿಹಾಸ. ರಾಮದಾಸ್ ಮುಂದೆ ಶಾಸಕರಾಗಿ ಆಯ್ಕೆ ಹೊಂದಿ, ಸಚಿವರೂ ಆದರು.

ಪ್ರಸಕ್ತ ಮೋದೀಜಿಯವರ ಮಮತೆಯ ಗುದ್ದು ಇತಿಹಾಸ ಪುನರಾವರ್ತನೆ ಆಗಿ, ರಾಮದಾಸ್ ಪುನಃ ಸಚಿವ ಪದವಿ–ಜಿಲ್ಲಾ ಮಂತ್ರಿ ಸ್ಥಾನ ಅಲಂಕರಿಸಲಿದ್ದಾರೆಯೇ?

–ಡಾ. ಕೆ. ರಘುರಾಂ ವಾಜಪೇಯಿ, ಹಿರಿಯ ಸಮಾಜ ಸೇವಕರು, ಮೈಸೂರು

ಅಗ್ನಿ

ಮಾನ್ಯರೆ,

ದೇಶದ ಮುಂದೆ ಸಾಲು ಸಾಲು ಸವಾಲುಗಳು, ಅಗ್ನಿ ಪರೀಕ್ಷೆಗಳು; ಸಾಲದ್ದಕ್ಕೆ ಈಗ ಜ್ವಲಂತ 'ಅಗ್ನಿಪಥ'! ಪ್ರಗತಿ ಪಥಕ್ಕೆ ನಾನಾ ತೊಡಕುಗಳು; ಮುಗ್ಗರಿಸುತ್ತಿದೆ ರಾಷ್ಟ್ರಪಥ! ಜಾತಿ, ಮತ, ಪಂಥ, ಎಡ, ಬಲ ಇತ್ಯಾದಿ ಬೇಡ; ಮಧ್ಯಸ್ಥ ಸಮನ್ವಯ ನಿಲುವು ಸ್ವಸ್ಥ! (ಇಲ್ಲವೋ, ದುರಂತ). –ಸಿಪಿಕೆ, ಮೈಸೂರು.



ಡಾ. ಗುಬ್ಬಿಗೂಡು ರಮೇಶ್
ಮೊ : 9742934512

ದೀಪ ಸಾಲು

ಸ್ವಪ್ನ ಸುಂದರಿ

ಸಂಸ್ಕೃತ ನಾಟಕಕಾರ ಭಾಸ ಕವಿಯ 'ಸಪ್ನ ವಾಸವದತ್ತ' ಪ್ರತಿಜ್ಞಾ ಯೌಗಂಧರಾಯಣ ನಾಟಕ ಓದುತ್ತಿದ್ದೆ. ವಾಸವದತ್ತೆಯ 'ಸ್ವಪ್ನ'– ಯೌಗಂಧರಾಯಣದ ಪ್ರತಿಜ್ಞೆಯಲ್ಲಿ ಸಂಪನ್ನಗೊಳ್ಳುವ ನಾಟಕದ ಸ್ವರೂಪ ಅದು. ಇಲ್ಲಿ ನಾನು ಹೇಳಹೊರಟಿರುವುದು ಸಂಸ್ಕೃತದ ಭಾಸ ಕವಿಯ ನಾಟಕದ ಕತೆಯನ್ನಲ್ಲ; ಅಥವಾ ನಾಟಕದ ವಿಮರ್ಶೆಯನ್ನೂ ಅಲ್ಲ. ನಮ್ಮ ನಮ್ಮ ಬದುಕಿನಲ್ಲಿ ಅಯಾಚಿತವಾಗಿ ಹುಟ್ಟಿ ಆಕಸ್ಮಿಕವಾಗಿ ಅವಲಂಬಿಸಿಕೊಂಡು ಸುಖ ನಿದ್ರೆಯ ಮಂಪರಿನಲ್ಲೇ ನಮ್ಮನ್ನು ತನ್ನ ಭಾವ ಬಂಧುರಗಳ ಬೇಲಿಯಲ್ಲಿ ಬಂಧಿಸಿ ಮುದ ನೀಡುವ ಸ್ವಪ್ನಗಳ ಬಗ್ಗೆ! ಸ್ವಪ್ನಗಳು ಬೇರೆಯಲ್ಲ, ಕನಸುಗಳು ಬೇರೆಯಲ್ಲ. ವ್ಯಾಖ್ಯಾನ ಮಾಡುವಾಗ ಮಾತ್ರ ಎಚ್ಚರದ ವಾತಾವರಣದಲ್ಲಿ ಪ್ರತಿಯೊಂದು ನಾಗರೀಕ ಸಮಾಜದ ಸದಸ್ಯನೂ ಕೂಡ ತನ್ನ ಬದುಕಿನ ಬೆಳವಣಿಗೆಗಳ ಕುರಿತು ಅಭಿವೃದ್ಧಿಯ ನೀಲನಕ್ಷೆಯನ್ನೇ ಇದು ನನ್ನ ಬದುಕಿನ 'ಕನಸು' ಎಂದು ಹೇಳಿಕೊಳ್ಳುತ್ತಾನೆ. ಆದರೆ ಅದರ ಇನ್ನೊಂದು ಮುಖವೇ ಅವನ ಬದುಕಿನ ಬೆಳವಣಿಗೆಯ 'ಸುಂದರ ಸ್ವಪ್ನಗಳು'. ಈ ಸ್ವಪ್ನ ಸುಂದರಿ ಮಾತ್ರ ಮನುಷ್ಯನ ಅಂಕೆ ಮೀರಿ ಅವನ ಜಾಗೃದಾವಸ್ಥೆಯ ಎಚ್ಚರದ ಪರಿಧಿಯಲ್ಲಿ ಕಾಣಿಸಿಕೊಳ್ಳದೆ ನಿದ್ರಾವಸ್ಥೆಯಲ್ಲಿ ರೂಪುತಳೆದು ನಮ್ಮ ಮನಸ್ಸಿನ ಸುಪ್ತಾವಸ್ಥೆಯಲ್ಲಿ ಮಲಗಿ ನಿದ್ರಿಸುತ್ತಿದ್ದ ಬಯಕೆಗಳಿಗೆ, ನಮ್ಮ ನಮ್ಮ ಜೀವನಾನುಭವದಲ್ಲಿ ನಡೆದುಹೋದ ಘಟನೆಗಳಿಗೆ, ನಮ್ಮ ಬಾಲ್ಯಕ್ಕೆ, ನಮ್ಮ ಯೌವ್ವನಕ್ಕೆ, ನಮ್ಮ ದೌರ್ಬಲ್ಯಗಳಿಗೆ, ನಮ್ಮ ಭಯ, ನಮ್ಮ ಸಂಶಯ, ನಮ್ಮ ಭವಿಷ್ಯದ ಆಶಯಗಳಿಗೆ ಒತ್ತಾಸೆಯಾಗಿ ಕಣ್ಣಿನ ತುಂಬಾ ಚಿತ್ರ ತೋರಿಸುತ್ತಾಳೆ. ಈ ಕನಸೆಂಬ ಕನಕಾಂಬರ ನಿದ್ರಾವಸ್ಥೆಯಲ್ಲಿಯೇ ನಮ್ಮನ್ನು ಮೋಹಕಗೊಳಿಸುತ್ತವೆ, ಸಮ್ಮೋಹನಗೊಳಿಸುತ್ತವೆ, ಎಚ್ಚರ ತಪ್ಪಿಸುತ್ತವೆ. ಸ್ವಪ್ನಗಳ ಅನುಭವ ಆಗದೇ ಇರುವ ಯಾವೊಂದು ನರಪ್ರಾಣಿಯೂ ಈ ಭೂಮಿಯ ಮೇಲೆ ಇರಲಾರದು ಎನ್ನುವಷ್ಟರ ಮಟ್ಟಿಗೆ ಈ 'ಸವಿ ಸ್ವಪ್ನಗಳ ಸುಂದರ ರಾತ್ರಿಗಳು'– ನಮ್ಮನ್ನು ಕಾಡಿವೆ. ಮನುಷ್ಯನ ಮನಃಪಟಲದ ಮೇಲೆ ಚಿತ್ರ–ವಿಚಿತ್ರಗಳ ದೃಶ್ಯಮಾಲಿಕೆಗಳನ್ನು ಕಟ್ಟಿ ನಮ್ಮಲ್ಲಿ ಭಾವಸ್ಫುರಣೆಯನ್ನು ಉಂಟುಮಾಡುವ ಈ ಸ್ವಪ್ನಗಳೆಂಬ ಏಲಿಯನ್ನುಗಳು ಎಲ್ಲಿಂದ ಬರುತ್ತವೆ, ಹೇಗೆ ಕಣ್ಮರೆಯಾಗುತ್ತವೆ, ಪ್ರತಿಯೊಬ್ಬರ 'body chemistry'ಯ ಮನೋಭೂಮಿಕೆಯ ಮೇಲೆ ವರ್ಣರಂಜಿತವಾಗಿ ಮೂಡಿ ಮರೆಯಾಗುವ ಈ ಸ್ವಪ್ನ ಮಿತ್ರೆಯ 'ಅಸ್ತಿತ್ವ'–ವಾದರೂ ಏನು ಎಂಬುದನ್ನು ಮನೋವಿಜ್ಞಾನಿಗಳು ತಮ್ಮ ತಮ್ಮ ಮನಃಶಾಸ್ತ್ರದ ಸಂಶೋಧನೆಗಳಲ್ಲಿ ವಿವರಿಸಿರಬೇಕು. ನಮಗಿಲ್ಲಿ ಅದು ಮುಖ್ಯವೇ ಅಲ್ಲ. ರಂಗಸಜ್ಜಿಕೆ ನಿರ್ಮಾಣ ಮಾಡುವ ರಂಗಪರಿಣಿತರಿಗಿಂತ ನಾಟಕ ನೋಡುವ ಪ್ರೇಕ್ಷಕನ ಸುಖವೇ ಅಪರಿಮಿತ. ಹಾಗಾಗಿ 'ನಾವು ಮತ್ತು ನಮ್ಮ ಕನಸು'– ಅದಷ್ಟೇ ನಮಗೆ ಸುಖ ಕೊಡುವ ವಿಷಯವಾದ್ದರಿಂದ ಅದಷ್ಟೇ ನಮಗಿಲ್ಲಿ ಚರ್ಚೆಯ ವಸ್ತು!

ಹಾಗಂತ ಸ್ವಪ್ನಗಳೆಂದರೆ, ಬರಿಯ ಸುಖ ಕೊಡುವ ಸನ್ನಿವೇಶಗಳ ಸೃಷ್ಟಿ ಎಂದು ಯಾರಾದರೂ ಭಾವಿಸಿದರೆ ಅದು ತಪ್ಪಾದೀತು. ಎಷ್ಟೋ ಬಾರಿ ಸ್ವಪ್ನಗಳು ನಮ್ಮ ರಾತ್ರಿಗಳನ್ನು, ಕೆಲವೊಮ್ಮೆ ಕೆಲವು ಸ್ವಪ್ನಗಳು ನಿದ್ರಾವಸ್ಥೆಯಲ್ಲೇ ಕರಾಳತೆ ಸೃಷ್ಟಿ ಮಾಡಿ ನಮ್ಮಲ್ಲಿ ಭಯ ಹುಟ್ಟಿಸಿ, ಆ ಕನಸು ಕನಸೇ ಅಲ್ಲ; ನಿಜವಾಗಿಯೇ ನಡೆಯುತ್ತಿವೆಯೇನೋ ಎಂಬಂತೆ ಭ್ರಮೆ ಸೃಷ್ಟಿಸಿಬಿಡುತ್ತವೆ. ಬಲವಂತವಾಗಿ ಕಣ್ಣುಜ್ಜಿಕೊಂಡು ಮೇಲೇಳಲೂ ಬಿಡದೆ, ಬಲವಂತವಾಗಿ ಕೈಕಾಲು ಕಟ್ಟಿ ನಮಗೆ ಬೇಡವಾದ ಚಿತ್ರ ತೋರಿಸುತ್ತವೆ. ನಮ್ಮ ಜೀವ ಹಿಂಡಿ ಹಿಪ್ಪೆಯಾಗುವಂತೆ ಮಾಡುತ್ತವೆ. ಬೆಳಿಗ್ಗೆ ಎದ್ದಾಗಲೇ, ರಾತ್ರಿ ಕಂಡಿದ್ದು ಕನಸು ಎಂದು ಗೊತ್ತಾದಾಗಲೇ ನಮಗೆ ಜೀವ ಬಂದಂತೆ ಭಾಸವಾಗುತ್ತದೆ. ಕಣ್ಣುಜ್ಜಿ ಕೊಂಡು ಮೇಲೆದ್ದ ಮೇಲೆ ಪುನರ್ಜನ್ಮವಾದಂತೆ, ಸ್ಮೃತಿಪಟಲದ ಮೇಲೆ ರಾತ್ರಿ ಬಿದ್ದ ಕನಸನ್ನು ಮನೆಯವರಿಗೆ ಹೇಳಿಕೊಂಡು 'ಅಬ್ಬಾ'– ಎನ್ನುವ ಹಾಗೆ, ನಮ್ಮನ್ನು ಕಾಡುವ ಕರಾಳ ರಾತ್ರಿಗಳನ್ನೂ ಈ 'ಸ್ವಪ್ನ ಸುಂದರಿ'– ಹುಟ್ಟು ಹಾಕುತ್ತಾಳೆ.

ಸ್ವಪ್ನ ಸುಂದರಿ ಎನ್ನುವುದೂ ಸರಿಯಲ್ಲ. ಕಾರಣ ಎಷ್ಟೋ ಹೆಣ್ಣು ಮಕ್ಕಳಿಗೆ 'ಸ್ವಪ್ನ' ಎಂದು ಹೆಸರಿಟ್ಟಿರುತ್ತಾರೆ. ಅಷ್ಟರಮಟ್ಟಿಗೆ ಈ ಸ್ವಪ್ನಗಳೆಂಬ ಕಿರಾಣಿ ಅಂಗಡಿ ತನಗೆ ಬೇಕಾದ ರಾತ್ರಿಗಳಲ್ಲಿ ನಮ್ಮ ಮನೋಮಂದಿರಗಳಲ್ಲಿ ಅಂಗಡಿಯಿಟ್ಟು ಬಾಗಿಲು ತೆರೆಯುತ್ತದೆ. ಅದರ ಅನುಭೋಗಿಗಳು ನಾವೇ! ಅದರ ಫಲಾನುಭವಿಗಳೂ ನಾವೇ! ಅದರ ವಾರಸುದಾರರೂ ನಾವೇ!

ಈ ಸ್ವಪ್ನಲೋಕ ಅಂಗಡಿ ತೆರೆದಾಗ ಕೆಲವರು ನಿದ್ರೆಯಲ್ಲೇ ಮಾತಾಡುತ್ತಿರುತ್ತಾರೆ. ಯಾರ ಜೊತೆಗೋ, ಯಾವುದರ ಜೊತೆಗೋ, ಅವರ ಮನಃಪಟಲದ ಒಳಗೆ ಏನೇನೋ ನಡೆದಿರುತ್ತದೆ. ಕೆಲವರು ನಿದ್ದೆಗಣ್ಣಲ್ಲೇ ಎದ್ದು ಓಡಾಡುತ್ತಾರೆ, ಕೆಲವರು ಮನೆಯ ಬಾಗಿಲು ತೆರೆದು ಆಚೆಗೇ ಹೊರಟುಬಿಟ್ಟಿರುತ್ತಾರೆ, ಸುಖಾಸುಮ್ಮನೆ ಎಲ್ಲೋ ನಡೆದು ಹೋಗುತ್ತಿರುತ್ತಾರೆ. ಅವರನ್ನು ಹಿಡಿದು ಮಾತಾಡಿಸಿ, ಅವರು ಜಾಗೃದಾವಸ್ಥೆಗೆ ಬಂದಮೇಲೆ ಕೇಳಿ ನೋಡಿ, ಅವರ ಬಾಯಲ್ಲಿ ಬರುವ ಮೊದಲ ಮಾತೇ ನಾನೇಕೆ ಇಲ್ಲಿದ್ದೇನೆ? ನಾನೇಕೆ ಇಲ್ಲಿಗೆ ಬಂದೆ? ಇತ್ಯಾದಿ ಮಾತುಗಳು ಜಾಗೃದಾವಸ್ಥೆಯಲ್ಲಿ ಹುಟ್ಟುತ್ತವೆ. ಹಾಗಾದರೆ ನಮಗೆ ನಿದ್ದೆಗಣ್ಣಿನಲ್ಲಿ ಚಳ್ಳೆಹಣ್ಣು ತಿನ್ನಿಸಿ ಏನೇನೋ ಮಾತಾಡಿಸಿ ಇಲ್ಲಿಯವರೆಗೂ ಕರೆತಂದು ನಮಗೇ ನಮ್ಮನ್ನು ಪರಿಚಯ ಮಾಡಿಸುವಷ್ಟು ಅವಾಂತರ ಸೃಷ್ಟಿಸುವ ಕೆಲಸವನ್ನು ಕೆಲವೇ ನಿಮಿಷಗಳಲ್ಲಿ ಈ ಸ್ವಪ್ನಗಳು ಮಾಡಿ ಮುಗಿಸುತ್ತವೆ. ಒಟ್ಟಿನಲ್ಲಿ ಕೋತಿಗೆ ಹೆಂಡ ಕುಡಿಸಿದಂತೆ ಮನುಷ್ಯನಿಗೆ ನಿದ್ರಾವಸ್ಥೆಯಲ್ಲೇ ನಶೆಯೇರಿಸಿ ನವರಸಗಳನ್ನೂ ನವೀಕರಿಸುವ ದೇಹ ಮನಸುಗಳ ಅಮೆಚ್ಯೂರ್ ರಂಗಭೂಮಿ ಈ ಸ್ವಪ್ನಗಳು. ಇದಕ್ಕೆ ಚಿಕ್ಕವರು, ದೊಡ್ಡವರು, ವಯಸ್ಸಾದವರು, ಹೆಂಗಸರು, ಗಂಡಸರು, ಮಕ್ಕಳು ಅಂತೇನಿಲ್ಲ. ಅವರವರ ವಯಸ್ಸಿಗೆ ತಕ್ಕಂತೆ ಮನಸ್ಸನ್ನು ಮುಟ್ಟಿ ಮಾತಾಡಿಸಿ ಹೋಗುವ ಈ ಆಗಂತುಕ ಬಂಧುಗಳು ಮಕ್ಕಳನ್ನೂ ಬಿಡದೆ ರಚ್ಚೆ ಹಿಡಿಸಿ, ನಿದ್ದೆಗಣ್ಣಿನಲ್ಲೇ ಭಯದ ಕನಸು ಬೀಳಿಸಿ ಹಾಸಿಗೆಯಲ್ಲೇ ಉಚ್ಚೆ ಉಯ್ಯಿಸುತ್ತವೆ.

ಕೆಲವು ಯುವಕರು, ಮಧ್ಯವಯಸ್ಕ ಗಂಡಸರಿಗೆ ಮುಂಜಾನೆ ಬೀಳುವ ಸ್ವಪ್ನಗಳು ಎಂಥ ರೋಮಾಂಚನ ಸೃಷ್ಟಿಸುತ್ತವೆಯೆಂದರೆ, ಯಾಕಪ್ಪಾ ಇಷ್ಟು ಬೇಗ ಈ ಕನಸು ಮುಗಿದುಹೋಯ್ತು; ಯಾಕಪ್ಪಾ ಇಷ್ಟು ಬೇಗ ಬೆಳಕಾಯಿತು ಎನ್ನಿಸುವಷ್ಟರಮಟ್ಟಿಗೆ ಆವರಿಸಿಕೊಂಡು ಮೈ ಮುದುರಿಕೊಂಡು, ಇನ್ನಷ್ಟು ಹೊತ್ತು ಆ ಕನಸಿನೊಂದಿಗೇ ಮಲಗಿ ನಿದ್ರಿಸಬಹುದಿತ್ತಲ್ಲ! ಎನ್ನುವಷ್ಟರ ಮಟ್ಟಿಗೆ ಮೈ ನವಿರೇಳಿಸಿ ಅರ್ಧಕ್ಕೇ ಎದ್ದು ಹೊರಟುಬಿಡುತ್ತಾಳೆ ಈ ಸ್ವಪ್ನಸುಂದರಿ ಎಂಬ ಗರ್ಲ್‌ಫ್ರೆಂಡು.

> **ಕೆಲವು ಯುವಕರು, ಮಧ್ಯವಯಸ್ಕ ಗಂಡಸರಿಗೆ ಮುಂಜಾನೆ ಬೀಳುವ ಸ್ವಪ್ನಗಳು ಎಂಥ ರೋಮಾಂಚನ ಸೃಷ್ಟಿಸುತ್ತವೆಯೆಂದರೆ, ಯಾಕಪ್ಪಾ ಇಷ್ಟು ಬೇಗ ಈ ಕನಸು ಮುಗಿದುಹೋಯ್ತು; ಯಾಕಪ್ಪಾ ಇಷ್ಟು ಬೇಗ ಬೆಳಕಾಯಿತು ಎನ್ನಿಸುವಷ್ಟರಮಟ್ಟಿಗೆ ಆವರಿಸಿಕೊಂಡು ಮೈ ಮುದುರಿಕೊಂಡು, ಇನ್ನಷ್ಟು ಹೊತ್ತು ಆ ಕನಸಿನೊಂದಿಗೇ ಮಲಗಿ ನಿದ್ರಿಸಬಹುದಿತ್ತಲ್ಲ! ಎನ್ನುವಷ್ಟರ ಮಟ್ಟಿಗೆ ಮೈ ನವಿರೇಳಿಸಿ ಅರ್ಧಕ್ಕೇ ಎದ್ದು ಹೊರಟುಬಿಡುತ್ತಾಳೆ ಈ ಸ್ವಪ್ನ ಸುಂದರಿ ಎಂಬ ಗರ್ಲ್‌ಫ್ರೆಂಡು. ಇನ್ನು ಎಂಭತ್ತು, ತೊಂಭತ್ತರ ವಯೋಮಾನದವರಿಗೆ ಬದುಕಿದ್ದಾಗಲೇ ನಿದ್ರೆಯಲ್ಲೇ ವೈಕುಂಠ ತೋರಿಸಿ ಶ್ರೀಮನ್ನಾರಾಯಣನ ದರ್ಶನವನ್ನೇ ಮಾಡಿಸುತ್ತವೆ ಈ ಕನಸುಗಳು. ಕೈಲಾಸದ ಗಿರಿಶಿಖರಗಳಲ್ಲೇ ವಾಕಿಂಗ್ ಮಾಡಿಸಿಬಿಡುತ್ತವೆ ಈ ಸ್ವಪ್ನ ಸಾಮೀಪ್ಯದ ಸಾಂಗತ್ಯಗಳು.**

ಇನ್ನು ಎಂಭತ್ತು, ತೊಂಭತ್ತರ ವಯೋಮಾನದವರಿಗೆ ಬದುಕಿದ್ದಾಗಲೇ ನಿದ್ರೆಯಲ್ಲೇ ವೈಕುಂಠ ತೋರಿಸಿ ಶ್ರೀಮನ್ನಾರಾಯಣನ ದರ್ಶನವನ್ನೇ ಮಾಡಿಸುತ್ತವೆ ಈ ಕನಸುಗಳು. ಕೈಲಾಸದ ಗಿರಿಶಿಖರಗಳಲ್ಲೇ ವಾಕಿಂಗ್ ಮಾಡಿಸಿಬಿಡುತ್ತವೆ ಈ ಸ್ವಪ್ನ ಸಾಮೀಪ್ಯದ ಸಾಂಗತ್ಯಗಳು.

ಕನಸುಗಳ ವೈವಿಧ್ಯತೆಗಳನ್ನು ಜಾಗೃದಾವಸ್ಥೆಯಲ್ಲಿ ಚೆನ್ನಾಗಿ ದುಡಿಸಿಕೊಂಡವರು ಸಿನಿಮಾದವರು. ಕನಸುಗಳನ್ನೇ flash back ತಂತ್ರಗಳ ಮಾದರಿಯಿಟ್ಟುಕೊಂಡು ಬೆಳ್ಳಿ ತೆರೆಯ ಮೇಲೆ ಅದೆಷ್ಟು ಕತೆ ಹೇಳಿದರೋ! ಅದೆಷ್ಟು ಶೀರ್ಷಿಕೆಗಳನ್ನು ಇಟ್ಟುಕೊಂಡರೋ ಗೊತ್ತಿಲ್ಲ!. 'ಎರಡುಕನಸು' ಸಿನಿಮಾದಿಂದ ಹಿಡಿದು 'ಕನಸುಗಾರನಾ ಒಂದು ಕನಸು ಕೇಳಮ್ಮಾ'– ಎನ್ನುವ ಹಾಡಿನ ತನಕ.

ಹಗಲುಗನಸಿಗೂ, ರಾತ್ರಿ ಕನಸಿಗೂ ವ್ಯತ್ಯಾಸಗಳಿವೆ. ಎಚ್ಚರವಾಗಿದ್ದುಕೊಂಡು ಕಾಣುವ ಕನಸು, ನಿದ್ರೆಯಲ್ಲಿ ಕಾಣುವ ಕನಸಿನಷ್ಟು ರಸಾವೇಶವನ್ನಾಗಲೀ, ಭಾವಸ್ಫುರಣೆಯನ್ನಾಗಲೀ ಉಂಟುಮಾಡುವುದಿಲ್ಲ. ತೀರಾ ವಯಸ್ಸಾದ ಕೆಲವರು ಯಾರೋ ನನ್ನನ್ನು ಕರೀತಾರೆ, ಬಾ ಅಂತಾರೆ, ನನ್ನನ್ನು 'ಬಾ'– ಅಂತ ಕೂಗುತ್ತಾರೆ ಎನ್ನುತ್ತಾ ಕನಸಿನ ಭ್ರಮಾಲೋಕಕ್ಕೆ ಒಳಗಾಗಿ ದೇಹ, ಮನಸ್ಸುಗಳ ಸ್ವಪ್ನ ವಿಹ್ವಲಗಳನ್ನು ಹೇಳಿಕೊಂಡೇ ಹೊರಟುಬಿಡುತ್ತಾರೆ. ಕೆಟ್ಟ ಕನಸು ಕಂಡ ಕೆಲವರು ವ್ರತ ನಿಷ್ಠೆ, ನೇಮ, ನಿಷ್ಠೆ ಅಂತ ಹೊರಟುಬಿಡುತ್ತಾರೆ.

ಸ್ವಪ್ನ ಅಥವಾ ಕನಸುಗಳೆಂಬ ಈ ಮಹಾಮಾಯೆ ಸಾಹಿತ್ಯದಂಥ ವೈಚಾರಿಕ ಕ್ಷೇತ್ರವನ್ನೂ ಬಿಟ್ಟಿಲ್ಲ. ನಾವು ಚಿಕ್ಕವರಿರುವಾಗ ಶಿಶುಪದ್ಯವೊಂದಿತ್ತು. ಶಾಲೆಯಲ್ಲಿ ಕಂಠಪಾಠ ಮಾಡಿ ಉರುಹಚ್ಚಿ, ಬಾಯಿಪಾಠದಂತೆ ಹೇಳುತ್ತಿದ್ದ ಕಾಲ ಅದು, ಈಗಲೂ ನಮ್ಮಂಥ ಅನೇಕರಿಗೆ ಆ ಪದ್ಯ ನೆನಪಿದೆ.

'ತಿರುಕನೋರ್ವನೂರಮುಂದೆ
ಮುರುಕು ಧರ್ಮಶಾಲೆಯಲ್ಲಿ
ಒರಗಿರುತ್ತಲೊಂದು ಕನಸಕಂಡನೆಂತೆನೆ'– ಎನ್ನುವ ಪದ್ಯ.

ತಿರುಕನೊಬ್ಬ ಕನಸಿನಲ್ಲಿ ರಾಜನಾಗಿ ವೈಭವ ಅನುಭವಿಸಿ, ಎಚ್ಚರವಾದ ಮೇಲೆ ತಿರುಪೆಗೆ ತೆರಳಿದ ಸಂಗತಿಯನ್ನು ಕವಿತೆ ಕತೆಯ ರೂಪದಲ್ಲಿ ತಿಳಿಸಿದ ಕವಿತೆ ಅದು. ಇಂದಿಗೂ ನಮಗೆ ಗೊತ್ತಿದೆ. ಪಂಪ, ರನ್ನ, ಜನ್ನ, ನಾಗಚಂದ್ರ ಮುಂತಾದ ಪ್ರಾಚೀನ ಕವಿಗಳಿಂದ ಶುರುವಾಗಿ ಹೊಸಗನ್ನಡದ ಆಧುನಿಕ ಕಾವ್ಯದವರೆಗೆ 'ಸ್ವಪ್ನ'ಗಳು ಕಾವ್ಯದ ಸಾಮಗ್ರಿಯಾಗಿಯೂ ಬಳಕೆಯಾಗಿವೆ. ಕನಸುಗಳು ಅಂತರಂಗದ ಅಭೀಪ್ಸೆಗಳಿಗೆ ಶುಭಸೂಚನೆಯ ಸಾಂಕೇತಿಕ ಪ್ರತಿಮೆಗಳಿಗೆ ಪೂರಕವಾಗಿ, ಹುಟ್ಟಿದ ಅದೆಷ್ಟೋ ಉದಾಹರಣೆಗಳಿವೆ. ನೇಮಿಚಂದ್ರನ 'ಲೀಲಾವತಿ' ಮತ್ತು ದೇವ ಕವಿಯ 'ಕುಸುಮಾವಳಿ'–ಕಾವ್ಯಗಳು ಸ್ವಪ್ನದಲ್ಲಿ ಕಂಡ ನಲ್ಲ ನಲ್ಲೆಯನ್ನು ವಾಸ್ತವದಲ್ಲಿ ಹುಡುಕಿಕೊಂಡು ಹೋಗುವ ಕಥಾ ಹಂದರವನ್ನು ಒಳಗೊಂಡಿದ್ದು,

ಅಕ್ಕ ಕೇಳವ್ವ ಅಕ್ಕಯ್ಯ ನಾನೊಂದು ಕನಸಕಂಡೆ
ಅಕ್ಕಿಯಡಕೆ ಓಲೆ ತೆಂಗಿನಕಾಯ ಕಂಡೆ
ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲ ಗೊರವನು
ಭಿಕ್ಷಕ್ಕೆ ಬಂದುದ ಕಂಡೆ
ಮಿಕ್ಕು ಮೀರಿ ಹೋಹನ ಕೈಪಿಡಿದು ಚೆನ್ನಮಲ್ಲಿಕಾರ್ಜುನಯ್ಯನ ಕಂಡು ಕಣ್ತೆರೆದು॥

ಇದು ಮಹಾ ಶಿವಶರಣೆ ಮಹಾದೇವಿ ಅಕ್ಕನ ವಚನದೊಂದು ಮಾದರಿ. 'ಕನಸು'– ಹೇಗೆಲ್ಲಾ ಸಾಹಿತ್ಯ ಪ್ರಕಾರಗಳಲ್ಲಿ ಬಳಕೆಯಾಗಿದೆ ನೋಡಿ! ಇಲ್ಲಿನ ವಚನದಲ್ಲಿ ಅಕ್ಕ ತನ್ನ ಆರಾಧ್ಯ ದೈವ ಮನಸ್ಸಿನಲ್ಲಿ ಮತ್ತೆ ಕನಸಿನಲ್ಲಿ ಸಾಕಾರಗೊಳ್ಳುವ 'ಸ್ವಪ್ನಗೀತ'ಕ್ಕೆ ಭಾಷ್ಯ ಬರೆದಂತೆ ಅಕ್ಕನ ವಚನ ಮೂಡಿಬಂದಿದೆ.

'ಕೆರೆಗೆ ಹಾರ'– ಎಂಬ ಜನಪದ ಕಥನ ಗೀತೆಯಲ್ಲಿ ಕೆರೆಗೆ ಹಾರವಾದ ಭಾಗೀರತಿಯನ್ನು ನೆನೆದು ಗಂಡ ಮಹಾದೇವರಾಯನಿಗೆ ಕನಸೊಂದು ಬಿದ್ದಂತೆ ಜನಪದಗೀತೆ ಹೇಳುತ್ತದೆ.

ಗಂಡ ಮಹದೇವರಾಯ ದಂಡಿನೊಳಗೈದಾನು
ದಂಡಿನೊಳಗೈದಾನು ಕಂಡಾನು ಕೆಟ್ಟಕನಸ
ಸೆಲ್ಯ ಸುಟ್ಟಂಗಾತು ಕೋಲು ಮುರಿದಂಗಾತು
ಕಟ್ಟಿಸಿದ ಮಾಲೆಲ್ಲಾ ತಟ್ಟನೆ ಬಿದ್ದಂಗಾತು

ಅಂದರೆ ದಂಡಿನಲ್ಲಿದ್ದ ಮದೇವರಾಯನಿಗೆ ದೂರದ ಊರಿನಲ್ಲಿ ತನ್ನ ಹೆಂಡತಿ ಕೆರೆಗೆ ಹಾರವಾದ ಸಂಗತಿ ಸ್ವಪ್ನ ಸಂಕೇತಗಳ ಮೂಲಕ ಮನಸ್ಸಿನ ಮೂಲೆಯಲ್ಲಿ ಪ್ರತಿಫಲಿಸಿದ ಉದಾಹರಣೆ ಕಾವ್ಯದ ಸ್ವಪ್ನಲೀಲೆಗೆ ಸಾಕ್ಷಿ.

ರಾಷ್ಟ್ರಕವಿ ಕುವೆಂಪು ಅವರ ಕಲ್ಕಿ ಪದ್ಯವಂತೂ ಸ್ವಪ್ನ ಲೋಕದಲ್ಲೇ ನಡೆವ ಕ್ರಾಂತಿಯ ಹೆಜ್ಜೆ.

ನಿದ್ದೆಯ ಲೋಕದಿ ಕನಸಿನ ಬೀದಿ
ತಿರುಗಿದೆ ತೊಳಲಿದೆ ತಪ್ಪಿತು ಹಾದಿ
ಕಲ್ಕಿ ಕಲ್ಕಿ ಎನ್ನುತ ಚೀರಿ
ಕನಸೊಡೆದೆದ್ದೆ
ಇನ್ನೆಲ್ಲಿಯ ನಿದ್ದೆ?

ಹೀಗೆ ಮುಕ್ತಾಯವಾಗುವ 'ಕಲ್ಕಿ'– ಎಂಬ ಕವಿತೆಯಲ್ಲಿ ಅಸಮಾನತೆಯ ವಿರುದ್ಧ ಯುದ್ಧ ಸಾರುವ ಕವಿಯ ಮನಸ್ಸು ನಿದ್ದೆ ಮತ್ತು ಸ್ವಪ್ನಗಳ ಜೊತೆಯಾಟದಲ್ಲಿ ಸ್ವಪ್ನದ ಅಭಿವ್ಯಕ್ತಿಗೆ ಇರುವ ಆಂತರ್ಯದ ಶಕ್ತಿಯನ್ನು ತಮ್ಮ ಶಬ್ದಗಾರುಡಿಗೆ ಮೇಳವಿಸಿ ಕಟ್ಟಿದ ಅಪರೂಪದ ಅವಿಸ್ಮರಣೆಯನ್ನು ಕವಿತೆಯಲ್ಲಿ ಕಲ್ಕಿ ಕಟ್ಟಿಕೊಡುತ್ತದೆ.

ಹೀಗೆ ಸಾಹಿತ್ಯ, ಸಿನಿಮಾ, ರಂಗಭೂಮಿಯಿಂದ ಹಿಡಿದು ಸಾಮಾನ್ಯನ ಮತ್ತು ಅಸಾಮಾನ್ಯರ ತನಕ ನಿದ್ರಾವಸ್ಥೆಯಲ್ಲಿ, ಎಚ್ಚರದಲ್ಲಿ, ಹಗಲಿನಲ್ಲಿ, ರಾತ್ರಿಯಲ್ಲಿ ಜನರ ಜೀವದ ಜೊತೆ ಈ ಸ್ವಪ್ನ ಸುಂದರಿಯ ಚೆಲ್ಲಾಟ, ರಸ, ಸರಸ. ನಾವು ಬೇಕೆಂದರೂ, ಬೇಡವೆಂದರೂ ಬಿಡದೆ ಬೆನ್ನತ್ತುವ ಈ ಸ್ವಪ್ನ ಲೋಕದ ಕುರಿತು ಮಾತೊಂದಿದೆ "ಮುಂಜಾನೆಯಲ್ಲಿ ಬೀಳುವ ಕನಸುಗಳು ನನಸಾಗುತ್ತವಂತೆ" ಹಾಗಾದರೆ ನಮ್ಮ ಮೈನವಿರೇಳಿಸುವ, ನಮ್ಮನ್ನು ರೋಮಾಂಚನಗೊಳಿಸುವ, ನಮ್ಮನ್ನು ಸುಖಿಸುವ, ನಮ್ಮನ್ನು ಪ್ರೇರೇಪಿಸುವ, ನಮ್ಮನ್ನು ಉದ್ದೀಪನಗೊಳಿಸುವ, ನಮ್ಮನ್ನು ಬೆರೆಗುಗೊಳಿಸುವ, ನಮ್ಮನ್ನು ಬೆಳೆಸುವ, ನಮ್ಮನ್ನು ಬೆಸೆಯುವ, ನಮ್ಮನ್ನು ಬೆದರಿಸದೇ ಬದುಕಿಸುವ ಸುಂದರ ಸ್ವಪ್ನಗಳು ಮುಂಜಾನೆಯಲ್ಲಿಯೇ ಕಾಣಿಸಲಿ, ಸ್ವಪ್ನ ಲೋಕದ ಸುಂದರಿ ನಮಗೆ ಮಾತ್ರ ಹೇಳಿಹೋದ ನಮ್ಮ ನಮ್ಮ ಕಣ್ಣಾಲಿಯ ಕನಸುಗಳು ನಮ್ಮ ಬದುಕಿನ ಹಗಲುಗಳಲ್ಲಿ ನನಸಾಗಲಿ, ಏನಂತೀರೀ?



ಅಗ್ನಿಪಥ ವಿರುದ್ಧ ದೇಶದ ವಿವಿಧೆಡೆ ಕಾಂಗ್ರೆಸ್ ಪ್ರತಿಭಟನೆ



ಜಮ್ಮು/ಇಟಾನಗರ/ಗುವಾಹಟಿ: ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಅಗ್ನಿಪಥ ಯೋಜನೆಯನ್ನು ಹಿಂಪಡೆಯುವಂತೆ ಒತ್ತಾಯಿಸಿ ಕಾಂಗ್ರೆಸ್ ಪಕ್ಷವು ದೇಶದಾದ್ಯಂತ ಸೋಮವಾರ ಪ್ರತಿಭಟನೆ ನಡೆಸಿತು.

ಜಮ್ಮು ಮತ್ತು ಕಾಶ್ಮೀರದಲ್ಲಿ ಶಾಂತಿಯುತ ಸತ್ಯಾಗ್ರಹ ಹಮ್ಮಿಕೊಂಡ ಕಾಂಗ್ರೆಸ್ ಘಟಕವು, ಯುವಕ ಭವಿಷ್ಯದ ಜೊತೆಗಿನ ಚೆಲ್ಲಾಟದ ಅಗ್ನಿಪಥ ಯೋಜನೆಯನ್ನು ಕೇಂದ್ರ ಸರ್ಕಾರ ತಕ್ಷಣವೇ ಹಿಂಪಡೆಯಬೇಕು ಎಂದು ಒತ್ತಾಯಿಸಿತು. ಅಸ್ಸಾಂ, ಅರುಣಾಚಲ ಪ್ರದೇಶ, ಮಹಾರಾಷ್ಟ್ರದ ನಾಗ್ಪುರ ಸೇರಿದಂತೆ ವಿವಿಧ ಕಡೆಗಳಲ್ಲಿ ಕಾಂಗ್ರೆಸ್ ಪ್ರತಿಭಟನೆ ನಡೆಸಿತು.

ಪಟ್ನಾ ವರದಿ: 'ಅಗ್ನಿಪಥ' ವಿಚಾರವು ಬಿಹಾರದಲ್ಲಿ ಆರಂಭವಾಗಿರುವ ವಿಧಾನಮಂಡಲದ ಉಭಯ ಸದನಗಳಲ್ಲೂ ಪ್ರತಿಧ್ವನಿಸಿತು. ಬಿಹಾರದ ಮುಂಗಾರು ಅಧಿವೇಶನದ 2ನೇ ದಿನದ ಕಲಾಪ ಸೋಮವಾರ ಬೆಳಿಗ್ಗೆ ಆರಂಭವಾಗುತ್ತಿದ್ದಂತೆ ಪ್ರತಿಪಕ್ಷಗಳು, ಅಗ್ನಿಪಥ ಯೋಜನೆಯನ್ನು ಹಿಂದಕ್ಕೆ ಪಡೆಯಬೇಕು ಎಂದು ಒತ್ತಾಯಿಸಿ ಪ್ರತಿಭಟನೆ ನಡೆಸಿದವು. ಅಲ್ಲದೆ, ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧದ ಘೋಷಣೆಗಳನ್ನು ಮೊಳಗಿಸಿದವು.

ಈ ಹಿನ್ನೆಲೆಯಲ್ಲಿ ಕಲಾಪ ಆರಂಭವಾದ ಅರ್ಧ ಗಂಟೆಯಲ್ಲೇ ಅಂದರೆ, 11 ಗಂಟೆಗೆ ಕಲಾಪವನ್ನು ಮುಂದೂಡಲಾಯಿತು. ಊಟದ ವಿರಾಮದ ನಂತರ 2 ಗಂಟೆಗೆ ಕಲಾಪ ಮತ್ತೆ ಆರಂಭವಾಯಿತು. ಆದರೆ, ಕಲಾಪವನ್ನು ಮತ್ತೆ ಮುಂದೂಡಿ ಸರ್ವಪಕ್ಷಗಳ ಸದಸ್ಯರನ್ನು ತಮ್ಮ ಕಚೇರಿಗೆ ಕರೆಸಿಕೊಂಡ ಸ್ಪೀಕರ್ ವಿಜಯ್ ಕುಮಾರ್ ಸಿನ್ಹಾ ಅವರು ಆರ್‌ಜೆಡಿ ನೇತೃತ್ವದ ಪ್ರತಿಪಕ್ಷಗಳ ಮನವೊಲಿಕೆಗೆ ಯತ್ನಿಸಿದರು. ಆದರೆ, ಅದೂ ಫಲ ಕೊಡಲಿಲ್ಲ. ಹೀಗಾಗಿ ಕಲಾಪವನ್ನು ಮಂಗಳವಾರಕ್ಕೆ ಮುಂದೂಡಿದರು.

ಸಿದ್ದರಾಮಯ್ಯರನ್ನು ಭೇಟಿ ಮಾಡಿದ ನಟ ನೀನಾಸಂ ಸತೀಶ್; 'ಡಿಯರ್ ವಿಕ್ರಮ್' ವೀಕ್ಷಿಸಲು ಆಹ್ವಾನ



ಬೆಂಗಳೂರು: ನಟ ನಿನಾಸಂ ಸತೀಶ್ ಅಭಿನಯಿಸಿರುವ 'ಡಿಯರ್ ವಿಕ್ರಮ್' ಚಿತ್ರ ಇದೇ ಗುರುವಾರದಂದು ತೆರೆ ಕಾಣಲಿದೆ. ಪ್ರಚಾರದಲ್ಲಿ ಬ್ಯುಸಿಯಾಗಿರುವ ನಿನಾಸಂ ಸತೀಶ್ ಅವರು ಸೋಮವಾರ ವಿರೋಧ ಪಕ್ಷದ ನಾಯಕರಾಗಿರುವ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದರು.

ಈ ವೇಳೆ ನಿನಾಸಂ ಸತೀಶ್ ಜೂನ್ 30 ರಂದು ತೆರೆ ಕಾಣಲಿರುವ, ತಾವೇ ನಾಯಕ ನಟರಾಗಿ ಅಭಿನಯಿಸಿರುವ ಡಿಯರ್ ವಿಕ್ರಮ್ ಸಿನಿಮಾ ವೀಕ್ಷಿಸಲು ಸಿದ್ದರಾಮಯ್ಯ ಅವರಿಗೆ ಆಹ್ವಾನ ನೀಡಿದರು. ಕೆ.ಎಸ್. ನಂದೀಶ್ ನಿರ್ದೇಶನದ ಈ ಸಿನಿಮಾ ನಾಯಕತ್ವದ ಪ್ರಗತಿಪರ ಆಶಯಗಳನ್ನು ಒಳಗೊಂಡಿದೆ ಎಂದು ನಿನಾಸಂ ಸತೀಶ್ ವಿವರಿಸಿದರು. 'ಡಿಯರ್ ವಿಕ್ರಮ್' ಸಿನಿಮಾ ಯಶಸ್ವಿ ಪ್ರದರ್ಶನ ಕಾಣಲೆಂದು ಹಾರೈಸಿದ ಸಿದ್ದರಾಮಯ್ಯ ಅವರು, ಇಡೀ ಚಿತ್ರ ತಂಡಕ್ಕೆ ಶುಭ ಕೋರಿದರು. ಈ ವೇಳೆ ಸಾಹಿತಿ ನಟರಾಜ್ ಹುಳಿಯಾರ್ ಸಹ ಹಾಜರಿದ್ದರು.

ಕೊರೊನಾ ದಿಢೀರ್ ಹೆಚ್ಚಳ: ರಾಜ್ಯದಲ್ಲಿ 617 ಮಂದಿಗೆ ಪಾಸಿಟಿವ್


ಬೆಂಗಳೂರು, ಜೂ.27– ರಾಜ್ಯದಲ್ಲಿ ಕಳೆದ 24 ಗಂಟೆಯಲ್ಲಿ 617 ಮಂದಿಗೆ ಕೋವಿಡ್ ಪಾಸಿಟಿವ್ ದೃಢಪಟ್ಟಿದೆ. ಇದರೊಂದಿಗೆ ಸೋಂಕಿತರ ಸಂಖ್ಯೆ 39,65,452ಕ್ಕೆ ಏರಿಕೆಯಾಗಿದ್ದು, ಸಾವಿನ ಸಂಖ್ಯೆ 40072 ಇದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ. ಬೆಂಗಳೂರಿನಲ್ಲಿ 592 ಮಂದಿಗೆ ಸೋಂಕು ದೃಢಪಟ್ಟಿದ್ದು, ಸೋಂಕಿತರ ಸಂಖ್ಯೆ 18,00,415ಕ್ಕೆ ಏರಿಕೆಯಾಗಿದೆ. 767 ಸೋಂಕಿತರು ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದಾರೆ. ಇದರೊಂದಿಗೆ ಸೋಂಕಿನಿಂದ ಚೇತರಿಸಿಕೊಂಡವರ ಸಂಖ್ಯೆ 39,21,050ಕ್ಕೆ ಏರಿಕೆಯಾಗಿದೆ. ಇನ್ನು 4288 ಸಕ್ರಿಯ ಪ್ರಕರಣಗಳಿವೆ.

ಅಯೋಧ್ಯೆಯಲ್ಲಿ 18 ಜೀವಂತ ಗ್ರೆನೇಡ್‌ಗಳು ಪತ್ತೆ; ಎಲ್ಲವನ್ನೂ ನಿಷ್ಕ್ರಿಯಗೊಳಿಸಿದ ಸೇನೆ

ಲಖನೌ: ಅತ್ಯಂತ ಸೂಕ್ಷ್ಮ ಮತ್ತು ಸುರಕ್ಷಿತ ಅಯೋಧ್ಯೆಯ ಸೇನಾ ಕಂಟೋನ್ಮೆಂಟ್‌ನಲ್ಲಿ ಪ್ರಮುಖ ಭದ್ರತಾ ಲೋಪವಾಗಿದ್ದು, ಸೇನಾ ಅಧಿಕಾರಿಗಳ ಮೆಸ್ ಬಳಿಯ ನಿರ್ಮಲಿ ಕುಂಡ್ ಪ್ರದೇಶದಲ್ಲಿ ಶನಿವಾರ ರಾತ್ರಿ 18 ಜೀವಂತ ಹ್ಯಾಂಡ್ ಗ್ರೆನೇಡ್‌ಗಳು ಪತ್ತೆಯಾಗಿವೆ.

ಘಾಘ್ರಾ ನದಿಯ ದಡದಲ್ಲಿರುವ ಈ ಪ್ರದೇಶದಲ್ಲಿ ಕೆಲವು ಜನ ವಾಸಿಸುತ್ತಾರೆ. ಪೊದೆಗಳಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ಮಾರಕಾಸ್ತ್ರಗಳನ್ನು ಗಮನಿಸಿದ ಸ್ಥಳೀಯರು, ಆತಂಕಗೊಂಡು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಬಳಿಕ ಸೇನಾ ಗುಪ್ತಚರ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಎಲ್ಲಾ ಗ್ರೆನೇಡ್‌ಗಳನ್ನು ನಿಷ್ಕ್ರಿಯಗೊಳಿಸಿದೆ.

ಬಿಎಸ್‌ವೈ ಇಂಗ್ಲೆಂಡ್ ಪ್ರವಾಸ 8 ದಿನ ವಿಸ್ತರಣೆ



ಬೆಂಗಳೂರು: ಮಾಜಿ ಸಿಎಂ ಯಡಿಯೂರಪ್ಪನವರ ಇಂಗ್ಲೆಂಡ್ ಪ್ರವಾಸ ವಿಸ್ತರಣೆಯಾಗಿದೆ. ಜುಲೈ 8 ರವರೆಗೂ ಇಂಗ್ಲೆಂಡ್ ಪ್ರವಾಸವನ್ನು ಯಡಿಯೂರಪ್ಪ ಮುಂದುವರಿಸಲಿದ್ದಾರೆ. ಈ ಮೊದಲು ಹತ್ತು ದಿನಗಳವರೆಗೆ ಪ್ರವಾಸ ನಿಗದಿಯಾಗಿತ್ತು ಈಗ 10 ದಿನಗಳಿಂದ 18 ದಿನಗಳವರೆಗೆ ಪ್ರವಾಸದ ಅವಧಿ ವಿಸ್ತರಣೆ ಮಾಡಲಾಗಿದೆ. ಜೂ.21 ರಂದು ಯಡಿಯೂರಪ್ಪ ಇಂಗ್ಲೆಂಡ್ ಗೆ ತೆರಳಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರಲ್ಲಿ ಸ್ವಚ್ಛ ಸರ್ವೇಕ್ಷಣೆ ಮುಕ್ತಾಯ

ನಂಬರ್ ಒನ್ ನಿರೀಕ್ಷೆಯಲ್ಲಿ ಅಧಿಕಾರಿಗಳು

ಮೈಸೂರು, ಜೂ.27(ಎಂಕೆ)– ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಪ್ರಸಕ್ತ ಸಾಲಿನ 'ಸ್ವಚ್ಛ ಸರ್ವೇಕ್ಷಣೆ' ಮುಕ್ತಾಯಗೊಂಡಿದ್ದು, ಪಾಲಿಕೆ ಅಧಿಕಾರಿಗಳು ಮೈಸೂರು ಮತ್ತೆ ನಂಬರ್ ಒನ್ ಸ್ಥಾನ ಪಡೆಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದ ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ ನಡೆಯುವ ಸ್ವಚ್ಛ ಸರ್ವೇಕ್ಷಣೆ ಈಗಾಗಲೇ ಮುಕ್ತಾಯಗೊಂಡಿದ್ದು, ಪಾಲಿಕೆಯ 65 ವಾರ್ಡ್‌ಗಳಿಗೂ ಸ್ವಚ್ಛ ಸರ್ವೇಕ್ಷಣಾ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿದೆ ಎಂದು ಪಾಲಿಕೆ ಆಯುಕ್ತ ಲಕ್ಷ್ಮೀಕಾಂತ್ ರೆಡ್ಡಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಪ್ರಚಾರಕ್ಕೆ ಬದಲು ಸ್ವಚ್ಛತೆ ಆದ್ಯತೆ: ಈ ಹಿಂದಿನ ವರ್ಷಗಳಲ್ಲಿ ಸ್ವಚ್ಛ ಸರ್ವೇಕ್ಷಣೆ ಕುರಿತು ಹೆಚ್ಚಿನ ಪ್ರಚಾರ ನೀಡಲಾಗುತ್ತಿದೆ. ಆದರೆ ಈ ವರ್ಷ ಪ್ರಚಾರಕ್ಕೆ ಬದಲಾಗಿ ಸ್ವಚ್ಛತೆ ಆದ್ಯತೆ ನೀಡಿದ್ದೇವೆ. ಪ್ರಚಾರಕ್ಕೆ ಖರ್ಚಾಗುತ್ತಿದ್ದ ಹಣವನ್ನು ಬೇರೆ ಅಭಿವೃದ್ಧಿ ಕಾರ್ಯಗಳಿಗೆ ಬಳಸಿಕೊಳ್ಳಲು ನಿರ್ಧರಿಸಲಾಗಿದೆ ಎಂದು ಹೇಳಿದರು.

ವಿಶ್ವಾಸ ಹೆಚ್ಚಿದೆ: ಮೈಸೂರು ನಗರದಲ್ಲಿ ಸ್ವಚ್ಛತಾ ದೃಷ್ಟಿಯಿಂದ ಈಗಾಗಲೇ ಹಲವು ಕ್ರಮಗಳನ್ನು ಕೈಗೊಂಡಿದ್ದು, ಪಾಲಿಕೆ ವ್ಯಾಪ್ತಿಯ ಎಲ್ಲಿಯೂ ದೊಡ್ಡಮಟ್ಟದಲ್ಲಿ ಕಸ ಬೀಳದಂತೆ ಎಚ್ಚರಿಕೆ ವಹಿಸಲಾಗಿದೆ. ಅಲ್ಲದೆ ಆಗಿಂದಾಗಲೇ ಕಸ ವಿಲೇವಾರಿ ಮಾಡಲಾಗುತ್ತಿದೆ. ಪ್ರಸಕ್ತ ವರ್ಷದ ಸ್ವಚ್ಛ ಸರ್ವೇಕ್ಷಣೆ ತೃಪ್ತಿದಾಯಕವಾಗಿ ನಡೆದಿದ್ದು, ಕಳೆದ ವರ್ಷಕ್ಕೆ ಹೋಲಿಕೆ ಮಾಡಿದರೆ ರ‍್ಯಾಂಕಿಂಗ್‌ನಲ್ಲಿ ಹೆಚ್ಚಿನ ಅಂಕ ಪಡೆಯುವ ವಿಶ್ವಾಸವಿದೆ ಎಂದು ತಿಳಿಸಿದರು.

ಫಲಿತಾಂಶಕ್ಕಾಗಿ ಕಾಯುತ್ತಿದ್ದೇವೆ: ಪ್ರಸಕ್ತ ಸಾಲಿನ ಸ್ವಚ್ಛ ಸರ್ವೇಕ್ಷಣಾ ಕಾರ್ಯ ಮುಕ್ತಾಯಗೊಂಡಿದ್ದು, ಫಲಿತಾಂಶಕ್ಕಾಗಿ ಕಾಯುತ್ತಿದ್ದೇವೆ. ಕಸವಿಲೇವಾರಿಗೆ ಸಂಬಂಧಿಸಿದಂತೆ ಇದ್ದಂತಹ ವಾಹನಗಳನ್ನು ಕೊರತೆ ಸರಿಪಡಿಸಿದ್ದು, ಪಾಲಿಕೆ ವ್ಯಾಪ್ತಿಯಲ್ಲಿ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ ಪಾಲಿಕೆ ಆರೋಗ್ಯಾಧಿಕಾರಿ ಡಾ.ನಾಗರಾಜು ಮಾಹಿತಿ ನೀಡಿದರು.

ಮೌಲ್ಯಮಾಪನ ಅಂಕ ಹೆಚ್ಚಳ: ಕಳೆದ ವರ್ಷ ಸ್ವಚ್ಛತಾ ಸಮೀಕ್ಷೆಯಲ್ಲಿದ್ದ 6 ಸಾವಿರ ಅಂಕಗಳಿಗೆ ಬದಲು ಈ ವರ್ಷ 7500ಕ್ಕೆ ಹೆಚ್ಚಿಸಲಾಗಿದೆ. ಮೌಲ್ಯಮಾಪನಕ್ಕೆ ಹಲವು ಹೊಸ ಮಾನದಂಡಗಳನ್ನು ಸೇರಿಸಲಾಗಿದೆ. ಸಾರ್ವಜನಿಕ ಶೌಚಾಲಯಗಳಲ್ಲಿನ ಸ್ವಚ್ಛತಾ ನಿರ್ವಹಣೆ, ಕಸ ವಿಲೇವಾರಿ ಸೇರಿದಂತೆ ಹಲವು ಅಂಶಗಳನ್ನು ಗಮನಿಸಲಾಗಿದೆ ಎಂದು ತಿಳಿಸಿದರು.

ಸಾರಿಗೆ ಬಸ್–ಟೆಂಪೋ ಟ್ರಾವಲರ್ ಡಿಕ್ಕಿ: ಓರ್ವ ಸಾವು

ಮೈಸೂರು, ಜೂ.27(ಎಂಕೆ)– ಸಾರಿಗೆ ಬಸ್– ಟೆಂಪೋ ಟ್ರಾವಲರ್ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ವ್ಯಕ್ತಿಯೋರ್ವ ಸ್ಥಳದಲ್ಲೇ ಸಾವನ್ನಪ್ಪಿದ್ದು, ಮೂರ್‍ನಾಲ್ಕು ಮಂದಿ ಗಂಭೀರವಾಗಿ ಗಾಯಗೊಂಡಿರುವ ಘಟನೆ ಮೈಸೂರು–ಹುಣಸೂರು ಮುಖ್ಯ ರಸ್ತೆಯಲ್ಲಿ ನಡೆದಿದೆ.

ಹುಣಸೂರು ತಾಲೂಕಿನ ಬನ್ನಿಕುಪ್ಪೆ ನಿವಾಸಿ ನಾಗರಾಜು(45) ಸ್ಥಳದಲ್ಲೇ ಮೃತಪಟ್ಟವರು. ಸೋಮವಾರ ರಾತ್ರಿ 8 ಗಂಟೆಗೆ ಸುಮಾರಿಗೆ ಹುಣಸೂರು ಕಡೆಯಿಂದ ಬರುತ್ತಿದ್ದ ಸಾರಿಗೆ ಬಸ್ ಮಂಜುನಾಥಪುರ(ಬಿಳಿಕೆರೆ ಸಮೀಪ)ದ ಬಳಿ ಎದುರಿನಿಂದ ಬಂದ ಟೆಂಪೋ ಟ್ರಾವಲರ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಟೆಂಪೋ ಟ್ರಾವಲರ್‌ನಲ್ಲಿದ್ದ ನಾಗರಾಜು ಸ್ಥಳದಲ್ಲೇ ಮೃತಪಟ್ಟರೆ, ಮೂರ್‍ನಾಲ್ಕು ಮಂದಿ ಗಾಯಗೊಂಡಿದ್ದಾರೆ. ಬಸ್‌ನಲ್ಲಿದ್ದವರಿಗೆ ಯಾವುದೇ ತೊಂದರೆಯಾಗಿಲ್ಲ ಎಂದು ಬಿಳಿಕೆರೆ ಪೊಲೀಸರು ತಿಳಿಸಿದ್ದಾರೆ.

ರಾಜ್ಯ ಬಿಜೆಪಿಯ ಮಾಧ್ಯಮ ವಕ್ತಾರ ಚಂದ್ರಶೇಖರ್ ನಿಧನ

ಬೆಂಗಳೂರು, ಜೂ.27– ರಾಜ್ಯ ಬಿಜೆಪಿಯ ಮಾಧ್ಯಮ ವಕ್ತಾರ ಚಂದ್ರಶೇಖರ್ ಅವರು ಸೋಮವಾರ ಮಧ್ಯಾಹ್ನ ನಿಧನ ಹೊಂದಿದ್ದಾರೆ.



ಬೆಂಗಳೂರಿನಲ್ಲಿ ಕೆ ಆರ್ ಮಾರ್ಕೆಟ್ ಬಳಿ ಬಿಎಂಟಿಸಿ ಬಸ್ ನಲ್ಲಿ ಪ್ರಯಾಣಿಸುತ್ತಿದ್ದಾಗ ಹೃದಯಾಘಾತದಿಂದ ನಿಧನ ಹೊಂದಿದ್ದಾರೆ. ಜಾಗತಿಕ, ರಾಷ್ಟ್ರೀಯ ವಿಷಯಗಳ ಕುರಿತು ಪಾಂಡಿತ್ಯ ಹೊಂದಿದ್ದ ಚಂದ್ರಶೇಖರ್ ಮಾಧ್ಯಮ ವಕ್ತಾರರಾಗಿ ಕಾರ್ಯ ನಿರ್ವಹಿಸುತ್ತಿದ್ದರು.

ಬ್ಲ್ಯಾಕ್‌ಮೇಲ್‌ಗೆ ಯತ್ನ: ಯೂ–ಟ್ಯೂಬ್ ನ್ಯೂಸ್ ಚಾನಲ್‌ವೊಂದರ ಐವರ ಹಿಡಿದು ಪೊಲೀಸರಿಗೆ ಒಪ್ಪಿಸಿದ ಸಾರ್ವಜನಿಕರು

ಮೈಸೂರು, ಜೂ.27–ವ್ಯಕ್ತಿಯೋರ್ವರನ್ನು ಬ್ಲ್ಯಾಕ್‌ಮೇಲ್ ಮಾಡಿ, ಹಣಕ್ಕೆ ಪೀಡಿಸುತ್ತಿದ್ದ ಯೂ–ಟ್ಯೂಬ್ ನ್ಯೂಸ್ ಚಾನಲ್‌ವೊಂದರ ಐವರನ್ನು ಸಾರ್ವಜನಿಕರೇ ಹಿಡಿದು ಪೊಲೀಸರಿಗೆ ಒಪ್ಪಿಸಿದ ಘಟನೆ ಮೈಸೂರಿನ ಅಶೋಕ ರಸ್ತೆಯಲ್ಲಿ ನಡೆದಿದೆ.

ಕರ್ನಾಟಕ ಪಬ್ಲಿಕ್ ವಾಯ್ಸ್ ನ್ಯೂಸ್ ಚಾನಲ್ (ಕೆಪಿವಿ ನ್ಯೂಸ್)ನ ಅಭಿಲಾಷ್, ಮಣಿ, ಪ್ರದೀಪ್, ಬಸವರಾಜು, ನವೀನ್ ಕುಮಾರ್ ಬಂಧಿತರಾಗಿದ್ದು, ಇವರು ಜೂನ್ 25ರಂದು ಮಧ್ಯಾಹ್ನ ಅಶೋಕ ರಸ್ತೆಯಲ್ಲಿರುವ ಉಮರ್ ಷರೀಫ್ ಎಂಬುವರ ಮನೆಗೆ ಇಂಡಿಕಾ ಕಾರಿ(ಕೆಎ 18 ಬಿ 7037)ನಲ್ಲಿ ಆಗಮಿಸಿದ್ದಾರೆ. ಏಕಾಏಕಿ ಕ್ಯಾಮರಾದೊಂದಿಗೆ ಉಮರ್ ಷರೀಫ್ ಮನೆಗೆ ನುಗ್ಗಲು ಪ್ರಯತ್ನಿಸಿದಾಗ ಅದನ್ನು ಷರೀಫ್ ವಿರೋಧಿಸಿದ್ದಾರೆ. ಆ ವೇಳೆ ನಿಮ್ಮ ಮನೆಯಲ್ಲಿ ಗ್ಯಾಸ್ ರೀ–ಫಿಲ್ಲಿಂಗ್ ಮಾಡುತ್ತಿದ್ದೀರಿಯಾ. ನಾವು ಅದನ್ನು ಟಿವಿಯಲ್ಲಿ ಹಾಕುತ್ತೇವೆ ಎಂದು ಹೇಳಿದ್ದಾರೆ. ಅದೇ ವೇಳೆ ಗುಂಪಿನಲ್ಲಿದ್ದ ಓರ್ವ ತಾನು ಬೆಂಗಳೂರಿನಿಂದ ಬಂದಿರುವ ಕ್ರೈಂ ಪೊಲೀಸ್ ಎಂದು ಹೇಳುತ್ತಾ ಷರೀಫ್ ಮೇಲೆ ಕೂಗಾಡಿದ್ದಾನೆ. ಈ ವೇಳೆ ಸ್ಥಳೀಯರು ಗುಂಪುಗೂಡಿದ್ದಾರೆ. ಮಾಜಿ ಕಾರ್ಪೊರೇಟರ್ ಸುಹೇಲ್ ಬೇಗ್ ಕೂಡ ಸ್ಥಳಕ್ಕೆ ಆಗಮಿಸಿದ್ದು, ಕ್ರೈಂ ಪೊಲೀಸ್ ಎಂದು ಹೇಳಿದ ವ್ಯಕ್ತಿಯೊಂದಿಗೆ 'ಈ ಮನೆಯಲ್ಲಿ ಯಾವುದೇ ಗ್ಯಾಸ್ ರೀ–ಫಿಲ್ಲಿಂಗ್ ನಡೆಯುತ್ತಿಲ್ಲ. ಒಂದು ವೇಳೆ ನೀವು ರೈಡ್ ಮಾಡಬೇಕೆಂದರೆ ಮಂಡಿ ಠಾಣೆ ಪೊಲೀಸರನ್ನು ಕರೆಸಿಕೊಳ್ಳಿ. ಇದು ಸೆನ್ಸಿಟೀವ್ ಏರಿಯಾ ಆಗಿದ್ದು, ಸ್ಥಳೀಯ ಪೊಲೀಸರು ಇಲ್ಲದಿದ್ದರೆ ತೊಂದರೆಯಾಗಬಹುದು' ಎಂದಾಗ ಆತ, ಲೋಕಲ್ ಪೊಲೀಸ್ ಎಲ್ಲಾ ಯಾಕೆ? ನಮಗೆ ಏನಾದರೂ ಕೊಡಿಸಿಬಿಡಿ ಎಂದು ಹೇಳುತ್ತಿದ್ದಂತೆಯೇ ಸುಹೇಲ್ ಬೇಗ್ ಅವರಿಗೆ ಈತ ನಕಲಿ ಪೊಲೀಸ್ ಎಂಬುದು ಮನವರಿಕೆಯಾಗಿದೆ. ತಕ್ಷಣವೇ ಮಂಡಿ ಠಾಣೆಗೆ ಕರೆ ಮಾಡಿ ಐವರನ್ನೂ ಅವರ ವಶಕ್ಕೆ ಒಪ್ಪಿಸಿದ್ದಾರೆ. ಇವರೆಲ್ಲರನ್ನೂ ಬಂಧಿಸಿ ಕಾರನ್ನು ವಶಪಡಿಸಿಕೊಂಡ ಮಂಡಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.

G7 ಶೃಂಗಸಭೆಯಲ್ಲಿ ಶಿಷ್ಟಾಚಾರ ಪಕ್ಕಕ್ಕಿಟ್ಟು

ಪ್ರಧಾನಿ ಮೋದಿ ಕೈಕುಲುಕಲು ಹಾತೊರೆದ ಜೋ ಬಿಡೆನ್



ಜರ್ಮನಿ, ಜೂ.27– ಉ7 ಶೃಂಗಸಭೆ 2022ರಲ್ಲಿ ಅಮೆರಿಕ ಅಧ್ಯಕ್ಷ ಜೋ ಬಿಡೆನ್ ಅವರು ಪ್ರಧಾನಿ ಮೋದಿ ಅವರ ಕೈಕುಲುಕಿ, ಕುಶಲೋಪರಿ ವಿಚಾರಿಸಲು ಪ್ರೋಟೋಕಾಲ್ ಪಕ್ಕಕ್ಕಿಟ್ಟು ಮಾತುಕತೆ ನಡೆಸಿದರು. ಜರ್ಮನಿಯಲ್ಲಿ ಮಹತ್ವದ ಜಿ–7 ಸಮ್ಮೇಳನ ನಡೆಯುತ್ತಿದ್ದು, ಅದರಲ್ಲಿ ಭಾರತದ ಕೀರ್ತಿ ಪತಾಕೆಯನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಮತ್ತೊಮ್ಮೆ ಉತ್ತುಂಗಕ್ಕೆ ಕೊಂಡೊಯ್ದಿದ್ದಾರೆ. ಜಗತ್ತಿನ ಬಲಾಢ್ಯ ರಾಷ್ಟ್ರಗಳು ಭಾರತದ ಸುತ್ತ ಠಳಾಯಿಸುತ್ತಿರುವುದು ಇದರಿಂದ ಮನದಟ್ಟಾಗಿದೆ. ಜಗತ್ತಿನ ಅತೀ ದೊಡ್ಡ ರಾಷ್ಟ್ರವಾದ ಅಮೆರಿಕಾ ಕೂಡ ಭಾರತದ ಜೊತೆ ಮುಕ್ತ ಮನಸ್ಸಿನಿಂದ ಬೆರೆಯಲು ಎಲ್ಲ ಕಟ್ಟುಪಾಡುಗಳನ್ನು ಪಕ್ಕಕ್ಕಿಟ್ಟಿದೆ.

ಸೋಮವಾರ ಶೃಂಗಸಭೆಯಲ್ಲಿ ಪ್ರಧಾನಿ ಮೋದಿ ಇತರ ನಾಯಕರೊಂದಿಗೆ ಮಾತನಾಡುತ್ತಿದ್ದಾಗ, ಯುಎಸ್ ಅಧ್ಯಕ್ಷ ಜೋ ಬಿಡನ್ ಎಲ್ಲಾ ಪ್ರೋಟೋಕಾಲ್‌ಗಳನ್ನು ಉಲ್ಲಂಘಿಸಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಸಂಪರ್ಕಿಸಿದರು. ಪ್ರಧಾನಿ ಅವರ ಭುಜ ತಟ್ಟಿ ಆತ್ಮೀಯವಾಗಿ ಮಾತನಾಡಿದರು. ಆ ಬಳಿಕ ಪ್ರಧಾನಿ ಮೋದಿ ಅವರು ಅಮೆರಿಕ ಅಧ್ಯಕ್ಷರನ್ನು ಅಪ್ಪಿಕೊಂಡು ಹಸ್ತಲಾಘವ ಮಾಡಿದರು. ಅಧ್ಯಕ್ಷ ಜೋ ಬಿಡನ್ ಸೇರಿದಂತೆ ವಿಶ್ವದ ಇತರೆ ಹಲವು ಪ್ರಬಲ ನಾಯಕರು ಸಹ ಪ್ರಧಾನಿ ಮೋದಿ ಅವರನ್ನು ಇದೇ ರೀತಿ ಆತ್ಮೀಯವಾಗಿ ಭೇಟಿಯಾದರು. ಅಲ್ಲಿಗೆ ಬಂದಿದ್ದ ಮುಖಂಡರು ಪ್ರಧಾನಿ ಮೋದಿ ಅವರನ್ನು ಮಾತನಾಡಿಸಲು ಪೈಪೋಟಿ ನಡೆಸಿದಂತಿತ್ತು.

ಕಾಶಿ ಯಾತ್ರೆಗೆ ಅಂತಿಮ ಮಾರ್ಗಸೂಚಿ ಪ್ರಕಟ

ಕರ್ನಾಟಕದ 30 ಸಾವಿರ ಕಾಶಿ ಯಾತ್ರಾರ್ಥಿಗಳಿಗೆ ತಲಾ 5 ಸಾವಿರ

ಏಪ್ರಿಲ್ 1 ರಿಂದ ಪೂರ್ವಾನ್ವಯವಾಗುವಂತೆ ಘೋಷಣೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಯವರ ಕನಸಿನ ಯೋಜನೆ ಕಾಶಿ ಕಾರಿಡಾರ್‌ಗೆ ರಾಜ್ಯದ ಜನರು ಭೇಟಿ ನೀಡುವುದನ್ನು ಪ್ರೋತ್ಸಾಹಿಸುವ ಉದ್ದೇಶ ದಿಂದ ಆಯವ್ಯಯದಲ್ಲಿ ಘೋಷಿಸಲಾಗಿದ್ದ ಮುಜರಾಯಿ ಇಲಾಖೆಯ ಮಹತ್ವಾಕಾಂಕ್ಷಿ ಯೋಜನೆ ಕಾಶಿ ಯಾತ್ರೆಗೆ ಮಾರ್ಗಸೂಚಿ ಗಳನ್ನು ಅಂತಿಮಗೊಳಿಸಿ ಸರ್ಕಾರದಿಂದ ಅಂತಿಮ ಆದೇಶ ಹೊರಡಿಸಲಾಗಿದೆ ಎಂದು ಮುಜರಾಯಿ, ಹಜ್ ಮತ್ತು ವಕ್ಫ್ ಸಚಿವರಾದ ಶಶಿಕಲಾ ಜೊಲ್ಲೆ ತಿಳಿಸಿದ್ದಾರೆ.



ಸೋಮವಾರ ಈ ಬಗ್ಗೆ ಪತ್ರಿಕಾ ಹೇಳಿಕೆಯನ್ನು ಬಿಡುಗಡೆಗೊಳಿಸಿರುವ ಅವರು, ಭವ್ಯ ಕಾಶಿ ದಿವ್ಯ ಕಾಶಿಯ ಭವ್ಯತೆಯನ್ನು ಪ್ರಧಾನಿ ನರೇಂದ್ರ ಮೋದಿಯವರ ಮುತುವರ್ಜಿಯಿಂದ ಅಭಿವೃದ್ಧಿಗೊಳಿಸಲಾಗಿದೆ. ಈ ಭವ್ಯ ಕಾಶಿಯ ಯಾತ್ರೆ ಬಹಳಷ್ಟು ಜನರ ಜೀವನದ ಅಭಿಲಾಷೆಯಾಗಿರುತ್ತದೆ. ಈ ಯಾತ್ರೆಯ ಅಭಿಲಾಷೆಯನ್ನು ಪೂರೈಸುವ ನಿಟ್ಟಿನಲ್ಲಿ ರಾಜ್ಯ ಸರಕಾರದಿಂದ ಯೋಜನೆಯನ್ನು ಪ್ರಾರಂಭಿಸಬೇಕು ಎನ್ನುವುದು ನನ್ನ ಗುರಿಯಾಗಿತ್ತು. ಇದಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸಕಾರಾತ್ಮಕವಾಗಿ ಸ್ಪಂದಿಸಿ ಆಯವ್ಯಯದಲ್ಲಿ ಘೋಷಣೆ ಮಾಡಿದ್ದರು. ರಾಜ್ಯದ 30 ಸಾವಿರ ಕಾಶಿ ಯಾತ್ರಾರ್ಥಿಗಳಿಗೆ ತಲಾ 5 ಸಾವಿರ ರೂಪಾಯಿಗಳಂತೆ ಸಹಾಯಧನ ನೀಡುವ ಯೋಜನೆಗೆ ಮಾರ್ಗಸೂಚಿಗಳನ್ನು ಇಂದು ಅಂತಿಮಗೊಳಿಸಿದ್ದು, ಸರಕಾರದಿಂದ ಅಧಿಕೃತವಾಗಿ ಆದೇಶ ಹೊರಡಿಸಲಾಗಿದೆ. ಏಪ್ರಿಲ್ 1, 2022 ಕ್ಕೆ ಪೂರ್ವಾನ್ವಯವಾಗುವಂತೆ ಈ ಆದೇಶವನ್ನು ಹೊರಡಿಸಲಾಗಿದ್ದು, ಸೂಕ್ತ ದಾಖಲಾತಿ ಗಳೊಂದಿಗೆ ಜನರು ಇದರ ಸದುಪಯೋಗವನ್ನು ಪಡೆದುಕೊಳ್ಳುವಂತೆ ಸಚಿವರು ಹೇಳಿದ್ದಾರೆ.

ಮಾರ್ಗಸೂಚಿಯ ಅಂಶಗಳು

- ಕರ್ನಾಟಕ ರಾಜ್ಯದಿಂದ ಕಾಶಿ ಯಾತ್ರೆಕೈಗೊಂಡ ಅರ್ಹ ಯಾತ್ರಾರ್ಥಿಗಳಿಗೆ ತಲಾ ರೂ 5,000ಗಳನ್ನು ಸಹಾಯ ಧನವಾಗಿ ನೀಡಲಾಗುವುದು.
- ಕರ್ನಾಟಕದ ಖಾಯಂ ನಿವಾಸಿಗಳು ಮಾತ್ರ ಈ ಧನ ಸಹಾಯ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ. ಈ ಉದ್ದೇಶಕ್ಕಾಗಿ ಕರ್ನಾಟಕ ರಾಜ್ಯ ಚುನಾವಣಾ ಆಯೋಗ ನೀಡಿರುವ 'ಗುರುತಿನ ಚೀಟಿ', ಆಧಾರ್ ಗುರುತಿನ ಚೀಟಿ, ರೇಷನ್ ಕಾರ್ಡ್ ಈ ಮೂರರಲ್ಲಿ ಒಂದು ದಾಖಲೆ ನೀಡಬೇಕು.
- ಕರ್ನಾಟಕ ರಾಜ್ಯದಿಂದ ಕಾಶಿ ಯಾತ್ರೆ ಕೈಗೊಳ್ಳುವ ಯಾತ್ರಾರ್ಥಿಗಳು ಆಯಾ ಆರ್ಥಿಕ ವರ್ಷದ ಮೊದಲ ದಿನಕ್ಕೆ ಅನ್ವಯಿಸುವಂತೆ ಏ. 1 ಕ್ಕೆ 18 ವರ್ಷಗಳ ಮೇಲ್ಪಟ್ಟವರಾಗಿರತಕ್ಕದ್ದು, 18 ವಯಸ್ಸಿನ ಕೆಳಗಿನವರ ಅರ್ಜಿಗಳನ್ನು ಪರಿಗಣಿಸಲಾಗು ವುದಿಲ್ಲ. 18 ವರ್ಷ ಮೇಲ್ಪಟ್ಟ ಯಾತ್ರಾರ್ಥಿಗಳು ವಯಸ್ಸಿಗೆ ಸಂಬಂಧಿಸಿದ ಸೂಕ್ತ ದಾಖಲೆಯನ್ನು ಹಾಜರುಪಡಿಸುವುದು.
- ಏ. 1 ರಿಂದ ಜೂ. 30ರವರೆಗೆ ಕಾಶಿ ಶ್ರೀ ವಿಶ್ವನಾಥ ಸ್ವಾಮಿಯ ದರ್ಶನಕ್ಕೆ ತೆರಳಿದ ಯಾತ್ರಾರ್ಥಿಗಳು ಸಂಬಂಧಿಸಿದ ದಾಖಲಾತಿ (ಕಾಶಿ ಶ್ರೀ ವಿಶ್ವನಾಥ ಸ್ವಾಮಿ ದೇವಾಲಯಕ್ಕೆ ತೆರಳಲು ಮುಂಗಡವಾಗಿ ಕಾಯ್ದಿರಿಸಿದ ಮತ್ತು ಹಿಂದಿರುಗಿದ ಬಗ್ಗೆ ಕಾಯ್ದಿರಿಸಿದ ಟಿಕೆಟ್, ಛಾಯಾಚಿತ್ರ ಪೂಜಾ ರಶೀದಿ, ಅಥವಾ ದೇವಾಲಯಕ್ಕೆ ತೆರಳಿ ಮರಳಿದ ಬಗ್ಗೆ ಯಾವುದಾದರೂ ಇತರೆ ದಾಖಲೆ)ಗಳನ್ನು ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ, ಇವರ ಕಛೇರಿಗೆ ಸಲ್ಲಿಸತಕ್ಕದ್ದು.
- ಜೂ. 7ರಿಂದ ಅನ್ವಯವಾಗುವಂತೆ ಯಾತ್ರಾರ್ಥಿಗಳು ಕಾಶಿ ಯಾತ್ರೆ ಕೈಗೊಂಡಿರುವ ಬಗ್ಗೆ ಸಂಬಂಧಿಸಿದ ದಾಖಲೆಗಳನ್ನು ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಛತ್ರ, ವಾರಣಾಸಿ ಇವರ ಕಛೇರಿಯಿಂದ ಬಯೋಮೆಟ್ರಿಕ್ ದೃಢೀಕರಣದೊಂದಿಗೆ, ಆನ್‌ಲೈನ್ ಅಥವಾ ಮುದ್ದಾಂ/ನೊಂದಾಯಿತ ಅಂಚೆ ಮೂಲಕ, ಆಯುಕ್ತರು ಧಾರ್ಮಿಕ ದತ್ತಿ ಇಲಾಖೆ ಇವರ ಕಛೇರಿಗೆ ಸಲ್ಲಿಸತಕ್ಕದ್ದು ಒಂದು ವೇಳೆ ವ್ಯವಸ್ಥಾಪಕರು ಕರ್ನಾಟಕ ರಾಜ್ಯ ಛತ್ರ ವಾರಣಾಸಿ ಇವರ ದೃಢೀಕರಣ ಇಲ್ಲದಿದ್ದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
- ಯಾತ್ರಾರ್ಥಿಗಳು ಸಹಾಯಧನವನ್ನು ಒಂದು ಬಾರಿ ಪಡೆದ ನಂತರದಲ್ಲಿ, ಅದೇ ವ್ಯಕ್ತಿಗೆ ಎರಡನೇ ಬಾರಿ ಅನುದಾನ ನೀಡಲು ಪರಿಗಣಿಸಲಾಗುವುದಿಲ್ಲ.
- ಸರ್ಕಾರದ ಸಹಾಯಧನಕ್ಕಾಗಿ ಅರ್ಜಿ ಸಲ್ಲಿಸುವ ಯಾತ್ರಾರ್ಥಿಗಳ ಬ್ಯಾಂಕ್ ಖಾತೆಯು ರಾಷ್ಟ್ರೀಕೃತ ಬ್ಯಾಂಕಿನ ಖಾತೆಯಾಗಿರಬೇಕು ಮತ್ತು ಕಡ್ಡಾಯವಾಗಿ ಆಧಾರ್ ಲಿಂಕ್ ಆಗಿರತಕ್ಕದ್ದು,
- ಈ ಸಹಾಯಧನವನ್ನು, ಯಾತ್ರೆಯನ್ನು ಪೂರ್ಣಗೊಳಿಸಿ ಸಂಬಂಧಿಸಿದ ದಾಖಲೆಗಳನ್ನು ನಿಗಧಿತ ನಮೂನೆ ಅರ್ಜಿಯನ್ನು ಭರ್ತಿ ಮಾಡಿ ಒದಗಿಸಿದ ನಂತರ ಸದರಿ ಅರ್ಜಿಗಳನ್ನು ಧಾರ್ಮಿಕ ದತ್ತಿ ಆಯುಕ್ತರು ಸ್ವೀಕರಿಸಿ, ಪರಿಶಿಲಿಸಿ ಅನುದಾನ ಮಂಜೂರು ಮಾಡಲು ಕ್ರಮ ಕೈಗೊಳ್ಳುವುದು. ಯೋಜನೆಯ ಜೊತೆಯಲ್ಲಿ 'ಭಾರತ್ ಗೌರವ್' ಯೋಜನೆ ಅಡಿಯಲ್ಲಿ ಕಾಶಿ ಯಾತ್ರೆಗೆ ವಿಶೇಷ ರೈಲು 30 ಸಾವಿರ ಜನರಿಗೆ ತಲಾ 5 ಸಾವಿರದಂತೆ ಸಹಾಯಧನ ನೀಡುವ ಯೋಜನೆ ಅಲ್ಲದೆ, ಮತ್ತೊಂದು ವಿಶೇಷ ಯೋಜನೆಯನ್ನು ಮುಜರಾಯಿ ಇಲಾಖೆ ಅನುಷ್ಠಾನಗೊಳಿಸುತ್ತಿದೆ.

ಕೇಂದ್ರ ಸರಕಾರದ 'ಭಾರತ ಗೌರವ್' ಯೋಜನೆಯ ಅಡಿಯಲ್ಲಿ ಮುಜರಾಯಿ ಇಲಾಖೆಯ ರೈಲ್ವೇ ಇಲಾಖೆಯೊಂದಿಗೆ ಒಪ್ಪಂದ ಮಾಡಿಕೊಂಡಿದ್ದು, ಕಾಶಿಗೆ ವಿಶೇಷ ರೈಲಿನ ಕಾರ್ಯಾಚರಣೆ ಸದ್ಯದಲ್ಲೇ ಪ್ರಾರಂಭಿಸಲು ಸಿದ್ದತೆಗಳನ್ನು ಭರದಿಂದ ಮಾಡಿಕೊಳ್ಳಲಾಗುತ್ತಿದೆ. ಈ ನಿಟ್ಟಿನಲ್ಲಿ ಈಗಾಗಲೇ ರೈಲ್ವೇ ಇಲಾಖೆಯಲ್ಲಿ ನೋಂದಣಿ ಮಾಡಿಸಿದ್ದು ಇನ್ನು ಕೆಲವೇ ತಿಂಗಳುಗಳಲ್ಲಿ ಯೋಜನೆ ಕಾರ್ಯಗತಗೊಳ್ಳಲಿದೆ ಎಂದು ಶಶಿಕಲಾ ಜೊಲ್ಲೆ ತಿಳಿಸಿದ್ದಾರೆ.

ತೀಸ್ತಾ ಸೆಟಲ್ವಾಡ್ ಬಂಧನ ವಿರೋಧಿಸಿ ಪ್ರತಿಭಟನೆ

ಮೈಸೂರು, ಜೂ.27(ಎಸ್‌ಬಿಡಿ)– ಹೋರಾಟಗಾರ್ತಿ ತೀಸ್ತಾ ಸೆಟಲ್ವಾಡ್ ಮತ್ತಿತರರ ಬಂಧನ ಖಂಡಿಸಿ 'ಸಮುದಾಯ ಮೈಸೂರು' ಸಂಘಟನೆ ವತಿಯಿಂದ ಮೈಸೂರಿನ ಗಾಂಧಿ ವೃತ್ತದಲ್ಲಿ ಸೋಮವಾರ ಪ್ರತಿಭಟನೆ ನಡೆಸಲಾಯಿತು.



ಗುಜರಾತ್‌ನಲ್ಲಿ 2002ರಲ್ಲಿ ನಡೆದ ಹಿಂಸಾಚಾರದಲ್ಲಿ 69 ಜನರ ಹತ್ಯೆಯಾಯಿತು. ಆರೋಪಿಗಳನ್ನು ಬಂಧಿಸಿ ಶಿಕ್ಷಿಸುವುದನ್ನು ಬಿಟ್ಟು ಸಂತ್ರಸ್ತರ ಪರವಾಗಿ ಹೋರಾಟ ನಡೆಸಿದ ತೀಸ್ತಾ ಸೆಟಲ್ವಾಡ್ ಹಾಗೂ ಇತರರನ್ನು ಬಂಧಿಸಿರುವುದು ಖಂಡನೀಯ. ಗುಜರಾತ್ ಆಡಳಿತ ದೂರುದಾರರನ್ನೇ ಆರೋಪಿಯನ್ನಾಗಿ ಮಾಡಿ, ಅವರ ಧ್ವನಿ ಹತ್ತಿಕ್ಕುತ್ತಿದೆ. ಪ್ರಭುತ್ವವನ್ನು ಪ್ರಶ್ನಿಸಿದವರನ್ನು ದೇಶದ್ರೋಹಿಗಳಂತೆ ಬಿಂಬಿಸುತ್ತಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಗುಜರಾತ್ ಪೊಲೀಸರ ವಿರುದ್ಧ ಘೋಷಣೆ ಕೂಗಿ, ತೀಸ್ತಾ ಮತ್ತು ಇತರರ ವಿರುದ್ಧ ದಾಖಲಿಸಿರುವ ಪ್ರಕರಣಗಳನ್ನು ಹಿಂಪಡೆದು ಅವರನ್ನು ಬಿಡುಗಡೆ ಮಾಡಬೇಕು. ಹಿಂಸಾಚಾರ ಆರೋಪಿಗಳನ್ನು ಬಂಧಿಸಿ, ಶಿಕ್ಷೆಗೆ ಗುರಿಪಡಿಸಬೇಕು ಎಂದು ಆಗ್ರಹಿಸಿದರು.

ಸಮುದಾಯ ಮೈಸೂರು ಸಂಚಾಲಕ ಲ.ಜಗನ್ನಾಥ್ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ದೀಪಕ್, ಜನಾರ್ದನ, ಉಗ್ರನರಸಿಂಹೇಗೌಡ, ಎಂ.ಎಫ್. ಕಲೀಂ, ವಿಜಯ್ ಕುಮಾರ್, ಜಯರಾಂ, ಸೀಮಾ, ಬಸವರಾಜ್, ದೀಪಕ್, ಲಕ್ಷ್ಮೀನಾರಾಯಣ, ಕಲ್ಲಳ್ಳಿ ಕುಮಾರ್, ರವಿ, ವಿಜಯ್ ಕುಮಾರ್, ಗೋಪಾಲ ಕೃಷ್ಣ ಮತ್ತಿತರರು ಭಾಗಿಯಾಗಿದ್ದರು.

ದೈವಾನುಭವಕ್ಕೆ ಮನಸ್ಸಿನ ಏಕಾಗ್ರತೆ ಅವಶ್ಯ

ಸುತ್ತೂರಲ್ಲಿ ಶ್ರೀ ಸಿದ್ದೇಶ್ವರ ಸ್ವಾಮೀಜಿ ಅಭಿಮತ



ಸುತ್ತೂರು, ಜೂ. 27–ಪ್ರತಿನಿತ್ಯ ನಮ್ಮ ಹೃದಯ ಮಂದಿರದಲ್ಲಿ ದೈವಾನುಭವ ಪಡೆಯಲು ಮನಸ್ಸನ್ನು ಪ್ರಕೃತಿಯಲ್ಲಿ ಏಕಾಗ್ರಗೊಳಿಸಿ ಎಂದು ಸುತ್ತೂರು ಶ್ರೀಕ್ಷೇತ್ರದಲ್ಲಿ ವಿಜಯಪುರ ಜ್ಞಾನಯೋಗಾಶ್ರಮದ ಶ್ರೀ ಸಿದ್ದೇಶ್ವರ ಸ್ವಾಮೀಜಿ ತಿಳಿಸಿದರು.

ಪ್ರಕೃತಿ ಅಪ್ರತಿಮ, ಅಗೋಚರ, ಅಗಮ್ಯ ಮತ್ತು ಪ್ರಶಾಂತವಾಗಿದೆ. ಪ್ರಕೃತಿಯಲ್ಲಿ ಗಿಡಮರಗಳು, ಬೆಟ್ಟಗುಡ್ಡಗಳು, ಹೂ ಬಳ್ಳಿ ಎಲ್ಲವೂ ಸುಂದರವಾಗಿದೆ. ಶರಣರು, ಸಂತರು, ಋಷಿ ಮುನಿಗಳು ಸುಂದರವಾದ ಹೂವುಗಳು ಇದ್ದ ಹಾಗೆ. ಅವರ ನುಡಿಗಳು, ವಿಚಾರಗಳು ಅದ್ಭುತವಾಗಿರುತ್ತವೆ. ಅಲ್ಲಮಪ್ರಭುಗಳ ವಚನದಂತೆ 'ನೆಲ ಹೊಲದಲಿ, ಎಲ್ಲಿ ನೋಡಿದಡೆಲ್ಲಿ ನೀನಿದ್ದೆಯಯ್ಯ ಗುಹೇಶ್ವರ, ನಿಮ್ಮನ್ನು ಅಗಲಕ್ಕೆ ಅರಿದು ಕಂಡೆ'. ಮೇರುಪರ್ವತಗಳಲ್ಲಿ, ಗುಹೆಗಳಲ್ಲಿ, ಊರುಗಳಲ್ಲಿ, ಬಯಲು ಪ್ರದೇಶದಲ್ಲಿ, ಹೀಗೆ ಪ್ರತಿಯೊಂದು ವಸ್ತುವಿನಲ್ಲಿ ದೈವಾನುಭವವಿದೆ. ಎಲ್ಲಿ ಪ್ರಕೃತಿ ಸೌಂದರ್ಯ ವಿದೆಯೋ ಅಲ್ಲಿ ಸುಖವಿದೆ. ಪ್ರಕೃತಿಯನ್ನು ದ್ವೇಷಿಸುವ ಒಂದೇ ಒಂದು ಜೀವಿಯೂ ಜಗತ್ತಿನಲ್ಲಿ ಇರಲು ಸಾಧ್ಯವಿಲ್ಲ, ಏಕೆಂದರೆ ಎಲ್ಲವೂ ಪ್ರಕೃತಿಯಿಂದ ಬಂದಿದೆ.

ಪಕ್ಷಿಗಳು ಹಾಡಿದರೆ ನಮ್ಮ ಹೃದಯವೂ ತೆರೆದು ಹಾಡುತ್ತದೆ. ಸೂರ್ಯ ಬೆಳಗಿದರೆ ನಮ್ಮ ಬುದ್ಧಿವಂತಿಕೆಯೂ ಬೆಳಗುತ್ತದೆ, ಕಾರಣ ನಾವು ಪ್ರಕೃತಿಗೆ ಹತ್ತಿರವಾಗಿದ್ದೇವೆ. ಪ್ರಕೃತಿ ಇಲ್ಲದಿದ್ದರೆ ನಾವು ಬದುಕಲು ಸಾಧ್ಯವಿಲ್ಲ, ನಮ್ಮ ಜೀವನದಲ್ಲಿ ಎಲ್ಲವೂ ಪ್ರಕೃತಿಯಿಂದ ಬಂದದ್ದು. ಪ್ರಕೃತಿಯಲ್ಲಿರುವ ಪ್ರತಿ ವಸ್ತುವಿನಲ್ಲಿ ದೇವರಿದ್ದಾನೆ. ಪ್ರಕೃತಿಯ ಶಾಂತ ವಾತಾವರಣ ಹಾಗೂ ಅಲ್ಲಿನ ಪ್ರಕೃತಿ ಸೌಂದರ್ಯದಲ್ಲಿ ದೈವತ್ವ ಪಡೆಯಲು ಸಾಧ್ಯ. ಇದು ವಿಶ್ವದಲ್ಲಿನ ಪ್ರತಿಯೊಂದು ವಸ್ತುಗಳ ದಿವ್ಯಚೇತನವಾಗಿದೆ. ಹೃದಯವು ದೈವಾನುಭದಿಂದ ತುಂಬಿರಬೇಕು. ಹೃದಯ ಮತ್ತು ಮನಸ್ಸು ಶುದ್ಧವಾಗಿದ್ದಾಗ ದೈವಾನುಭವ ಪಡೆಯಲು ಸಾಧ್ಯ ಎಂದು ತಿಳಿಸಿದರು.

ಪರಿಷ್ಕೃತ ಪಠ್ಯ: ಹಳೆಯ ಪಠ್ಯವನ್ನು ಮುಂದುವರಿಸುವುದೊಂದೇ ಪರಿಹಾರ

ಬೆಂಗಳೂರು: ಪರಿಷ್ಕೃತ ಪಠ್ಯಕ್ಕೆ ಸಂಬಂಧಿಸಿದಂತೆ ಕೊನೆಗೂ ವಿರೋಧ ಪಕ್ಷಗಳ ಒತ್ತಡಕ್ಕೆ ಸರ್ಕಾರ ಮಣಿದಿದ್ದು, ಸಮಿತಿ ತಿದ್ದುಪಡಿ ಮಾಡಿದ್ದ ಪಠ್ಯಗಳನ್ನು ಮರು ಪರಿಷ್ಕರಿಸಲು ನಿರ್ಧರಿಸಿದೆ.

ಈ ಕುರಿತು ಸರಣಿ ಟ್ವೀಟ್ ಮಾಡಿರುವ ಮಾಜಿ ಮುಖ್ಯಮಂತ್ರಿ ಹಾಗೂ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಹೊಸ ಪಠ್ಯವನ್ನು ರದ್ದುಪಡಿಸಿ ಹಳೆಯ ಪಠ್ಯವನ್ನೇ ಮುಂದುವರಿಸುವುದೊಂದೇ ಸರ್ಕಾರದ ಮುಂದಿರುವ ಮಾರ್ಗ ಎಂದು ಹೇಳಿದ್ದಾರೆ. 'ಪರಿಷ್ಕೃತ ಪಠ್ಯಗಳಲ್ಲಿನ ಕೆಲವು ತಪ್ಪುಗಳನ್ನು ಸರಿಪಡಿಸಿ ಕಳೆದುಹೋದ ಮಾನ ಕಾಪಾಡುವ ವ್ಯರ್ಥ ಪ್ರಯತ್ನವನ್ನು ರಾಜ್ಯ ಬಿಜೆಪಿ ಸರ್ಕಾರ ಮಾಡಿದೆ. ಹಾಕಿರುವ ತೇಪೆಗಳಿಗಿಂತ ಉಳಿದಿರುವ ತೂತುಗಳೇ ಹೆಚ್ಚಾಗಿವೆ. ಹೊಸ ಪಠ್ಯವನ್ನು ರದ್ದುಪಡಿಸಿ ಹಳೆಯ ಪಠ್ಯವನ್ನೇ ಮುಂದುವರಿಸುವುದೊಂದೇ ಈಗಿನ ಪರಿಹಾರ' ಎಂದು ಟ್ವೀಟಿಸಿದ್ದಾರೆ.



'ಪರಿಷ್ಕೃತ' ಪಠ್ಯಕ್ಕೆ ವಿರೋಧ ವ್ಯಕ್ತವಾದ ನಂತರ ರಾಜ್ಯ ಸರ್ಕಾರ ದಿನಕ್ಕೊಂದು ಹೇಳಿಕೆ ನೀಡಿ ತನ್ನ ತಪ್ಪನ್ನು ಮುಚ್ಚಿಕೊಳ್ಳುವ ಪ್ರಯತ್ನ ಮಾಡುತ್ತಿದೆ ಪಠ್ಯ ಪರಿಷ್ಕರಣೆಗೆ ರಚನೆಗೊಂಡ ಸಮಿತಿಯನ್ನೇ ರದ್ದುಗೊಳಿಸಿದ ನಂತರ ಅದರ ಶಿಫಾರಸಿನ ಪಠ್ಯ ಕೂಡಾ ರದ್ದಿಗೆ ಸೇರಬೇಕಲ್ಲವೇ? ಎಂದು ಹೇಳಿದರು. 'ರಾಜ್ಯ ಸರ್ಕಾರದ ಆದೇಶ ಇಲ್ಲದೆ ರಚನೆಗೊಂಡ ರೋಹಿತ ಚಕ್ರತೀರ್ಥ ಎಂಬ ಬುದ್ಧಿಗೇಡಿಯ ಅಧ್ಯಕ್ಷತೆಯ ಸಮಿತಿಯೇ ಅಕ್ರಮವಾಗಿರುವಾಗ, ಆ ಸಮಿತಿ ಪರಿಷ್ಕರಿಸಿರುವ ಪಠ್ಯ ಹೇಗೆ ಕ್ರಮಬದ್ಧವಾಗಲು ಸಾಧ್ಯ?' ಎಂದು ಪ್ರಶ್ನಿಸಿದರು.

'ಪರಿಷ್ಕೃತ ಪಠ್ಯದಲ್ಲಿರುವುದು ಬೆರಳೆಣಿಕೆಯ ತಪ್ಪುಗಳಲ್ಲ, ಅದರ ಪುಟ–ಪುಟಗಳಲ್ಲಿಯೂ ತಪ್ಪುಗಳಿರುವುದನ್ನು ನಾಡಿನ ಅನೇಕ ಶಿಕ್ಷಣ ತಜ್ಞರು ವಿವರವಾಗಿ ಪಟ್ಟಿಮಾಡಿ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಹೀಗಿದ್ದರೂ ದೋಷಪೂರ್ಣ ಪಠ್ಯವನ್ನು ಸಮರ್ಥಿಸಲು ಹೊರಟಿರುವುದು ಸರ್ಕಾರದ ಉದ್ದಟತನವನ್ನಷ್ಟೇ ತೋರಿಸುತ್ತದೆ' ಎಂದು ವಾಗ್ದಾಳಿ ನಡೆಸಿದರು.

'ಪರಿಷ್ಕೃತ ಪಠ್ಯಪುಸ್ತಕದ ಬಗೆಗಿನ ವಿವಾದವನ್ನು ಸರ್ಕಾರ ಪ್ರತಿಷ್ಠೆಯಾಗಿ ಸ್ವೀಕರಿಸದೆ ನಮ್ಮ ವಿದ್ಯಾರ್ಥಿಗಳ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ನಿರ್ಧಾರ ಕೈಗೊಳ್ಳಬೇಕು. ವಿವಾದವನ್ನು ಬೆಳೆಸದೆ ಹೊಸ ಪಠ್ಯವನ್ನು ವಾಪಸು ಪಡೆದು ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಹಳೆಯ ಪಠ್ಯವನ್ನು ಬೋಧಿಸಲು ಆದೇಶ ನೀಡುವುದೊಂದೇ ಪರಿಹಾರ' ಎಂದು ಹೇಳಿದರು.

ದಕ್ಷಿಣ ಆಫ್ರಿಕಾದ ನೈಟ್‌ಕ್ಲಬ್‌ನಲ್ಲಿ 17 ಶವ ಪತ್ತೆ!

ಕೇಪ್‌ಟೌನ್, ಜೂ.27– ದಕ್ಷಿಣ ಆಫ್ರಿಕಾದ ಪೂರ್ವ ಲಂಡನ್ ನಗರದ ಎನೋಬೆನಿ ಟಾವೆರ್ನ್‌ನಲ್ಲಿ 17 ಜನರು ನಿಗೂಢವಾಗಿ ಸಾವನ್ನಪ್ಪಿದ್ದು, ಸ್ಥಳೀಯರಲ್ಲಿ ಭೀತಿ ಸೃಷ್ಟಿ ಮಾಡಿದೆ.

ಮಾಧ್ಯಮಗಳು ಭಾನುವಾರ ಈ ವರದಿ ನೀಡಿವೆ. ನ್ಯೂಸ್‌ರೂಮ್ ಆಫ್ರಿಕಾ ಟೆಲಿವಿಷನ್ ಚಾನೆಲ್ ಉಲ್ಲೇಖಿಸಿದಂತೆ ಘಟನೆಯ ಸುತ್ತಲಿನ ಪರಿಸ್ಥಿತಿಗಳ ಬಗ್ಗೆ ತನಿಖೆ ನಡೆಯುತ್ತಿದೆ ಎಂದು ಪೊಲೀಸ್ ವಕ್ತಾರರು ಬಿಬಿಸಿಗೆ ತಿಳಿಸಿದ್ದಾರೆ. ಅಲ್ಲದೆ, ಮಾಧ್ಯಮ ವರದಿಗಳ ಪ್ರಕಾರ ಮೃತರ ಸಂಬಂಧಿಕರಿಗೆ ಮೃತ ದೇಹಗಳನ್ನು ನೋಡಲು ಅವಕಾಶ ನೀಡುತ್ತಿಲ್ಲ.

ದೇಹಗಳು ಕ್ಲಬ್‌ನಲ್ಲಿ ನೆಲದ ಮೇಲೆ ಶವಗಳು ಬಿದ್ದಿವೆ ಎಂದು ಡೈಲಿ ಡಿಸ್ಪ್ಯಾಚ್ ಪತ್ರಿಕೆ ಪ್ರತ್ಯಕ್ಷದರ್ಶಿಗಳನ್ನು ಉಲ್ಲೇಖಿಸಿ ಬಿಬಿಸಿ ವರದಿ ಮಾಡಿದೆ. ಘಟನಾ ಸ್ಥಳಕ್ಕೆ ಆಗಮಿಸಿದ ಈಸ್ಟರ್ನ್ ಕೇಪ್ ಪೊಲೀಸ್ ಕಮಿಷನರ್ ನೊಮ್ಥೆಲ್ ಲಿಲಿಯನ್ ಮೇನೆ, ಬಾರ್‌ನೊಳಗೆ ಕಾಲ್ತುಳಿತ ಸಂಭವಿಸಿದೆ ಎಂದು SABC ನ್ಯೂಸ್‌ಗೆ ತಿಳಿಸಿದ್ದಾರೆ. ಇನ್ನು ಮೃತಪಟ್ಟವರ ಪೈಕಿ ಹೆಚ್ಚಿನವರು 18 ರಿಂದ 20 ವರ್ಷದ ಒಳಗಿನವರು ಎಂದು ಬ್ರಿಗೇಡಿಯರ್ ಕಿನಾನಾ ಹೇಳಿದ್ದಾರೆ.

ಶಂಕರಲಿಂಗೇಗೌಡ, ರಮಾಬಾಯಿ ನಗರಕ್ಕೆ ಮೂಲ ಸೌಲಭ್ಯ ಕಲ್ಪಿಸಲು ಆಗ್ರಹಿಸಿ ಪ್ರತಿಭಟನೆ

ಮೈಸೂರು, ಜೂ.27(ಎಂಟಿವೈ)– ಮೈಸೂರಿನ ಶಂಕರಲಿಂಗೇಗೌಡ ಮತ್ತು ರಮಾಬಾಯಿ ನಗರದಲ್ಲಿ ಮೂಲ ಸೌಲಭ್ಯ ಕಲ್ಪಿಸುವಂತೆ ಆಗ್ರಹಿಸಿ ಆಮ್ ಆದ್ಮಿ ಪಕ್ಷದ ಕಾರ್ಯಕರ್ತರೊಂದಿಗೆ ಬಡಾವಣೆ ನಿವಾಸಿಗಳು ಪ್ರತಿಭಟನೆ ನಡೆಸಿದರು.



ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಬಳಿ ಸೋಮವಾರ ಪ್ರತಿಭಟನೆ ನಡೆಸಿದ ಎರಡೂ ಬಡಾವಣೆಗಳ ನಿವಾಸಿಗಳು, ಮೂಲಭೂತ ಸೌಲಭ್ಯ ಕಲ್ಪಿಸುವಂತೆ ಮನವಿ ಮಾಡಿದರು. ಈ ಎರಡು ಬಡಾವಣೆಗಳಲ್ಲಿ ತಾತ್ಕಾಲಿಕವಾಗಿ ಹಾಕಿರುವ ಗುಡಿಸಲುಗಳಲ್ಲಿ ಕೂಲಿ ಕಾರ್ಮಿಕರು ಜೀವನ ನಡೆಸುತ್ತಿ ದ್ದಾರೆ. ಬದುಕಲು ಬೇಕಾಗಿರುವ ನೀರು, ವಿದ್ಯುತ್, ಚರಂಡಿ, ರಸ್ತೆ ಸೌಲಭ್ಯಗಳಿಂದ ಇಲ್ಲಿಯ ನಿವಾಸಿಗಳು ವಂಚಿತರಾಗಿದ್ದಾರೆ ಎಂದು ಪ್ರತಿಭಟನಾಕಾರರು ಆರೋಪಿ ಸಿದರು. ರಮಾಬಾಯಿ ನಗರದಲ್ಲಿ ಮುಡಾ ದಿಂದ ನಿರ್ಮಿಸಿರುವ ರಾಜಕಾಲುವೆ ಮಳೆ ಬಂದಾಗ ಉಕ್ಕಿ ಹರಿದು, ಗುಡಿಸಲುಗಳಿಗೆ ನುಗ್ಗುತ್ತದೆ. ಇಲ್ಲಿರುವ ತಡೆಗೋಡೆ ಕೂಡ ಕುಸಿದಿದೆ. ಮಳೆ ನೀರಿಗೆ ಕೊಳಚೆ ನೀರು ಸೇರಿ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ಮನೆಗಳು ಹಂಚಿಕೆ ಮಾಡಲಾಗಿದೆ. ಆದರೆ, ಇಲ್ಲಿ ಬೀದಿದೀಪ, ರಸ್ತೆ ಒಳಚರಂಡಿ ನಿರ್ವಹಣೆವಿಲ್ಲದೆ ವರ್ಷಗಳು ಕಳೆದಿವೆ ಎಂದು ಆರೋಪಿಸಿದರು.

ಈ ಪ್ರದೇಶ ವ್ಯಾಪ್ತಿಗೆ ಬರುವ ಶ್ರೀರಾಂಪುರ ಪಟ್ಟಣ ಪಂಚಾಯಿತಿ ಯಾವುದೇ ಸಾರ್ವಜನಿಕ ಕೆಲಸಗಳನ್ನು ನಿರ್ವಹಣೆ ಮಾಡುತ್ತಿಲ್ಲ. ಸ್ಮಶಾನಕ್ಕೆ ಮೀಸಲಾಗಿರುವ ಜಾಗದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆದಿಲ್ಲ. ಮೃತದೇಹವನ್ನು ಬಯಲಿನಲ್ಲೇ ಸುಡುವುದರಿಂದ ಹೊಗೆ, ದುರ್ವಾಸನೆ ಜನರಿಗೆ ತೊಂದರೆ ಉಂಟುಮಾಡುತ್ತದೆ. ಅಗತ್ಯ ಮೂಲ ಸೌಕರ್ಯವನ್ನು ಕಲ್ಪಿಸಿಕೊಡುವ ಮೂಲಕ ಇಲ್ಲಿಯ ಜನರಿಗೆ ಅನುಕೂಲ ಮಾಡಿಕೊಡಬೇಕು ಎಂದು ಆಗ್ರಹಿಸಿದರು. ಜಿಲ್ಲಾಧಿಕಾರಿ ಕಚೇರಿಯ ಅಧಿಕಾರಿಗೆ ಮನವಿ ಸಲ್ಲಿಸಲಾಯಿತು. ಮುಖಂಡರಾದ ಕಿರಣ್ ಕಲ್ಯಾಣಿ, ಆರ್.ಪ್ರಸಾದ್, ಇಸ್ಮಾಯಿಲ್, ಹೇಮಂತ್, ನಂಜುಂಡ, ಚಂದ್ರು ಇನ್ನಿತರರು ಪ್ರತಿಭಟನೆಯಲ್ಲಿದ್ದರು.

ಬಸ್ ಸಂಚಾರ ಅವ್ಯವಸ್ಥೆ ಸರಿಪಡಿಸಲು ಸೂಚನೆ

ಮೈಸೂರು, ಜೂ.27(ಎಸ್‌ಬಿಡಿ)– ಸಾರಿಗೆ ಸಂಸ್ಥೆ ಬಸ್ ಸಂಚಾರದಲ್ಲಿನ ಅವ್ಯವಸ್ಥೆ ಸರಿಪಡಿಸುವಂತೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಸಂಸ್ಥೆಯ ಅಧಿಕಾರಿಗಳಿಗೆ ಸೂಚಿಸಿದರು. ಆಷಾಢ ಶುಕ್ರವಾರ ಹಾಗೂ ವರ್ಧಂತ್ಯೋತ್ಸವ ಸಂಬಂಧ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಜಿಟಿಡಿ, ಕೋವಿಡ್ ಪೂರ್ವದಲ್ಲಿ ಬಸ್ ಸಂಚಾರ ವ್ಯವಸ್ಥಿತವಾಗಿತ್ತು. ನಂತರದಲ್ಲಿ ನಿಗದಿತ ಮಾರ್ಗದಲ್ಲಿ ಸರಿಯಾದ ಸಮಯಕ್ಕೆ ಬಸ್‌ಗಳು ಸಂಚರಿಸುತ್ತಿಲ್ಲ. ಪರಿಣಾಮ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಸಮಸ್ಯೆಯಾಗಿದೆ. ಇಡೀ ಜಿಲ್ಲೆಯಲ್ಲಿ ಇದೇ ಪರಿಸ್ಥಿತಿ ಇದೆ. ಕೂಡಲೇ ಈ ಬಗ್ಗೆ ಕ್ರಮ ವಹಿಸುವಂತೆ ಸಭೆಯಲ್ಲಿ ಹಾಜರಿದ್ದ ಸಾರಿಗೆ ಸಂಸ್ಥೆ ಅಧಿಕಾರಿಗಳಿಗೆ ತಿಳಿಸಿದರು.




ಇದಕ್ಕೆ ಧ್ವನಿಗೂಡಿಸಿದ ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ, ವಾಲ್ಮೀಕಿ ರಸ್ತೆಯ ಮಹಾರಾಣಿ ಕಾಲೇಜಿನಲ್ಲಿ ಸುಮಾರು 4 ಸಾವಿರ ವಿದ್ಯಾರ್ಥಿನಿಯರಿದ್ದಾರೆ. ಸರಿಯಾದ ಬಸ್ ವ್ಯವಸ್ಥೆ ಇಲ್ಲದೆ 1 ಕಿ.ಮೀ. ನಡೆಯುವಂತಾಗಿದೆ. ಕಾಲೇಜು ಆರಂಭವಾಗುವ ಹಾಗೂ ಮುಕ್ತಾಯವಾಗುವ ಸಮಯದಲ್ಲಿ ಬಸ್ ಸಂಚಾರಕ್ಕೆ ಕ್ರಮ ವಹಿಸುವಂತೆ ಆಗ್ರಹಿಸಿದರು. ಈ ವೇಳೆ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಮಾತನಾಡಿ, ಕೋವಿಡ್ ಪೂರ್ವದಲ್ಲಿ ಇದ್ದ ಹಾಗೆ ಬಸ್ ಕಾರ್ಯಾಚರಣೆಗೆ ಕ್ರಮ ವಹಿಸುವಂತೆ ಸಾರಿಗೆ ಸಂಸ್ಥೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ರಾಜ್ಯದಲ್ಲಿ ಜಿ–20 ಶೃಂಗ ಸಭೆ ಆಯೋಜನೆಗೆ ಸಹಕಾರ

ಬೆಂಗಳೂರು, ಜೂ.27– ರಾಜ್ಯದಲ್ಲಿ ಜಿ–20 ರಾಷ್ಟ್ರಗಳ ಶೃಂಗ ಸಭೆಗಳನ್ನು ಆಯೋಜಿಸಲು ಎಲ್ಲಾ ರೀತಿಯ ಸಹಕಾರ ನೀಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸೋಮವಾರ ತಿಳಿಸಿದ್ದಾರೆ.

ಮಾಜಿ ವಿದೇಶಾಂಗ ಕಾರ್ಯದರ್ಶಿ ಹಾಗೂ ಜಿ–20 ಮುಖ್ಯ ಸಂಯೋಜಕ ಹರ್ಷ್ ವರ್ಧನ್ ಶ್ರಿಂಗ್ಲಾ ಅವರು ಇಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿಯಾಗಿ, ಭಾರತದಲ್ಲಿ ಇದೇ ಡಿಸೆಂಬರ್‌ನಲ್ಲಿ ಜಿ–20 ಸಭೆ ಪ್ರಾರಂಭವಾಗುವ ಹಿನ್ನೆಲೆಯಲ್ಲಿ ವಿವಿಧ ವಿಷಯಗಳ ಕುರಿತು ಚರ್ಚಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಶ್ರಿಂಗ್ಲಾ ಅವರು, ಜಿ–20 ದೇಶಗಳು ವಿಶ್ವದ ಆರ್ಥಿಕತೆ ಮತ್ತು ಅಭಿವೃದ್ಧಿಗೆ ಗಣನೀಯ ಕೊಡುಗೆ ನೀಡುತ್ತಿದ್ದು, ಇದೀಗ ಮೊದಲ ಬಾರಿಗೆ ಭಾರತಕ್ಕೆ ಅಧ್ಯಕ್ಷತೆಯ ಅವಕಾಶ ಲಭಿಸಿದೆ. ಈ ಅವಧಿಯಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಅಪೇಕ್ಷೆಯಂತೆ ದೇಶದಾದ್ಯಂತ ಜಿ–20 ಸಭೆಗಳನ್ನು ಆಯೋಜಿಸಲು ಉದ್ದೇಶಿಸಿದೆ. ಅಂತೆಯೇ ಕರ್ನಾಟಕದಲ್ಲಿಯೂ ಸುಮಾರು 10 ಸಭೆಗಳನ್ನು ಆಯೋಜಿಸುವ ಚಿಂತನೆಯಿದೆ. ಇದಕ್ಕೆ ರಾಜ್ಯ ಸರ್ಕಾರದ ಸಹಕಾರ ಹಾಗೂ ಸಲಹೆ ಅಗತ್ಯ ಎಂದು ನುಡಿದರು.



ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ಈ ಎಲ್ಲ ರಾಷ್ಟ್ರಗಳೊಂದಿಗೆ ಕರ್ನಾಟಕ ಒಂದಲ್ಲ ಒಂದು ರೀತಿಯಿಂದ ನಂಟು ಹೊಂದಿದೆ. ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಈ ಸಭೆಗಳನ್ನು ಆಯೋಜಿಸುವುದು ಅತ್ಯಂತ ಸೂಕ್ತವೆಂದು ಅಭಿಪ್ರಾಯಪಟ್ಟರು. ಜಿ–20 ಅಧ್ಯಕ್ಷತೆ ದೊರಕಿರುವುದು ಅತ್ಯಂತ ಹೆಮ್ಮೆಯ ವಿಷಯವಾಗಿದ್ದು, ಪ್ರಧಾನಿಯವರು ಪೂರ್ವ ಹಾಗೂ ಪಾಶ್ಚಿಮಾತ್ಯ ದೇಶಗಳಲ್ಲಿ ಭಾರತಕ್ಕೆ ವಿಶೇಷ ಸ್ಥಾನ ದೊರೆಯುವಂತೆ ಮಾಡಿದ್ದಾರೆ ಎಂದು ಶ್ಲಾಘಿಸಿದರು.

ರಾಜ್ಯದಲ್ಲಿ ಆಯೋಜಿಸುವ ಸಭೆಗಳಲ್ಲಿ ರಾಜ್ಯದ ಆರ್ಥಿಕತೆ, ಔದ್ಯಮಿಕ ವಾತಾವರಣವನ್ನು ಜಿ–20 ದೇಶಗಳಿಗೆ ಮನವರಿಕೆ ಮಾಡುವಂತೆ ಸಲಹೆ ನೀಡಿದರು. ತಂತ್ರಜ್ಞಾನ ಆಧಾರಿತ ಉದ್ಯಮಗಳಿಗೆ ಹೆಸರುವಾಸಿಯಾದ ರಾಜ್ಯವು ಅತಿ ಹೆಚ್ಚು ಸ್ಟಾರ್ಟಪ್ ಗಳನ್ನು ಹೊಂದಿದೆ. ಅತಿ ಹೆಚ್ಚು ಯುನಿಕಾರ್ನ್, ಡೆಕಾಕಾರ್ನ್ ಗಳನ್ನು ಹೊಂದಿರುವ ರಾಜ್ಯ ಕರ್ನಾಟಕ. ಇದರೊಂದಿಗೆ ಮುಂದಿನ ದಿನಗಳಲ್ಲಿ ರಾಜ್ಯವು ಗ್ರೀನ್ ಹೈಡ್ರೋಜನ್ ಉತ್ಪಾದನೆ, ಸೆಮಿಕಂಡಕ್ಟರ್ ಉತ್ಪಾದನಾ ಕೇಂದ್ರವಾಗಿ ಹೊರಹೊಮ್ಮಲಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು. ಸಭೆಯಲ್ಲಿ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ, ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್ ಮತ್ತು ಇತರ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.



ನಾಡಪ್ರಭು ಕೆಂಪೇಗೌಡರ ಜಯಂತಿ ಪ್ರಯುಕ್ತ ಮೈಸೂರು-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿರುವ ನಾಡಪ್ರಭು ಕೆಂಪೇಗೌಡ ವೃತ್ತದ ನಾಮಫಲಕಕ್ಕೆ ಒಕ್ಕಲಿಗ ಸಂಘದ ಪದಾಧಿಕಾರಿಗಳು ಮಾಲಾರ್ಪಣೆ ಮಾಡಿದರು. ಮೈಸೂರು ಹಾಗೂ ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಸಿ.ಮರಿಸ್ವಾಮಿ, ಗೌರವಾಧ್ಯಕ್ಷ ಅಲತ್ತೂರು ಜಯರಾಮ್, ಉಪಾಧ್ಯಕ್ಷ ರವಿ ರಾಜಕೀಯ, ಪ್ರಧಾನ ಕಾರ್ಯದರ್ಶಿ ಚೇತನ್, ನಿರ್ದೇಶಕರಾದ ಜಿ.ಕುಮಾರ್ ಗೌಡ, ಎಲವಿ, ಒಂಟಿಕೊಪ್ಪಲು ಗುರುರಾಜ್, ಕೆ.ಪಿ.ನಾಗಣ್ಣ, ಚೆಲುವಡ್ಡ ಒಕ್ಕಲಿಗ ಸಂಘದ ಅಧ್ಯಕ್ಷ ಕೆ.ಎಂ.ರಾಘವೇಂದ್ರ, ಉಪಾಧ್ಯಕ್ಷ ರಾಮಕೃಷ್ಣ, ಎಸ್.ರಘು, ನರಸಿಂಹ(ಸಂತುಗೌಡ), ಶ್ರೀಧರ್ ಆಟೋ, ಆನಂದ್, ಚೆಲುವರಾಜು, ಉಮೇಶ್ ಆಟೋ ಮತ್ತಿತರರನ್ನು ಚಿತ್ರದಲ್ಲಿ ಕಾಣಬಹುದು.



ಮೈಸೂರು ಮಹಾನಗರ ಪಾಲಿಕೆ ಸದಸ್ಯ ಎಸ್‌ಬಿಎಂ ಮಂಜು ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಗೋಕುಲಂ-ಬೃಂದಾವನ ಬಡಾವಣೆ ಸ್ನೇಹಿತರು ಅವರನ್ನು ಅಭಿನಂದಿಸಿದರು. ಈ ಸಂದರ್ಭದಲ್ಲಿ ಮಹದೇವ್, ನವೀನ್, ರಮೇಶ್, ವೆಂಕಟೇಶ್, ಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

ವರದರಾಜು ನಾಯ್ಡು ನಿಧನ



ಮಂಡ್ಯ, ಜೂ.27– ನಗರದ ಫ್ಯಾಕ್ಟರಿ ಸರ್ಕಲ್, ಹೊನ್ನಯ್ಯ ಬಡಾವಣೆ ನಿವಾಸಿ ವರದರಾಜು ನಾಯ್ಡು(40) ಸೋಮವಾರ ನಿಧನರಾದರು. ಮೃತರು ತಾಯಿ, ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಡ್ಯ ನಗರದ ಹೆಬ್ಬಾಳ ರುದ್ರಭೂಮಿಯಲ್ಲಿ ನೆರವೇರಿತು.

'ಮಹಾ' ರಾಜಕೀಯ ಬಿಕ್ಕಟ್ಟು: ಅನರ್ಹತೆ ಭೀತಿಯಿಂದ ಶಿಂಧೆ ಬಣ ಸದ್ಯ ರಿಲೀಫ್

ನವದೆಹಲಿ, ಜೂ.27– ಮಹಾರಾಷ್ಟ್ರದ ಮಹಾ ವಿಕಾಸ್ ಅಘಾಡಿ (ಎಂವಿಎ) ಸರ್ಕಾರದ ಅಸ್ತಿತ್ವಕ್ಕೆ ಧಕ್ಕೆ ತಂದಿದ್ದ ಏಕನಾಥ್ ಶಿಂಧೆ ಬಣಕ್ಕೆ ಸುಪ್ರೀಂಕೋರ್ಟ್ ನಿಂದ ಬಿಗ್ ರಿಲೀಫ್ ಸಿಕ್ಕಿದೆ.



ಏಕನಾಥ್ ಶಿಂಧೆ

ಮಹಾರಾಷ್ಟ್ರ ವಿಧಾನ ಸಭೆ ಉಪಸಭಾ ಪತಿ ನರಹರಿ ಜಿರ್ವಾಲ್ ಅವರು ತಮಗೆ ಹಾಗೂ 15 ಬಂಡಾಯ ಶಾಸಕರಿಗೆ ಕಳುಹಿಸಲಾದ ಅನರ್ಹ ತೆಯ ನೋಟಿಸ್ ವಿರುದ್ಧ ಶಿವ ಸೇನೆಯ ಬಂಡಾಯ ನಾಯಕ ಏಕನಾಥ್ ಶಿಂಧೆ ಭಾನುವಾರ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಇಂದು ಅರ್ಜಿಯ ವಿಚಾರಣೆ ನಡೆಸಿದ ನ್ಯಾಯ ಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ಜೆ.ಬಿ.ಪರ್ದಿವಾಲಾ ಅವರ ರಜಾ ಕಾಲದ ಪೀಠವು ಅನರ್ಹತೆ ನೋಟಿಸ್‌ಗೆ ಉತ್ತರಿಸಲು 16 ಅತೃಪ್ತ ಶಾಸಕರಿಗೆ ಉಪಸಭಾಪತಿ ನೀಡಿದ ಸಮಯವನ್ನು ಜು.11 ರವರೆಗೆ ವಿಸ್ತರಿಸಿದೆ.

ಶಿಂಧೆ ಬಣದ ಎರಡು ಅರ್ಜಿಗಳ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್, ಜುಲೈ 11ರಂದು ಮತ್ತೆ ವಿಚಾರಣೆ ನಡೆಸುತ್ತೇವೆ. ಏತನ್ಮಧ್ಯೆ, ಮಧ್ಯಂತರ ಕ್ರಮವಾಗಿ, ಅರ್ಜಿದಾರರು ಅಥವಾ ಇತರ ಶಾಸಕರು ತಮ್ಮ ಲಿಖಿತ ಮನವಿಯನ್ನು ಸಲ್ಲಿಸಲು ಉಪಸಭಾಪತಿಯವರು ಇಂದು ಸಂಜೆ 5.30 ರವರೆಗೆ ನೀಡಿದ್ದ ಸಮಯವನ್ನು ಜು.11ರ ಸಂಜೆ 5.30ರವರೆಗೆ ವಿಸ್ತರಿಸಲಾಗಿದೆ. ಏಕನಾಥ್ ಶಿಂಧೆ ಮತ್ತು ಇತರ 15 ಅತೃಪ್ತ ಶಾಸಕರು ಅನರ್ಹತೆ ನೋಟಿಸ್ ಕುರಿತು ದೇಶದ ಸರ್ವೋಚ್ಚ ನ್ಯಾಯಾಲಯವು, ಕೇಂದ್ರ ಸರ್ಕಾರ, ಮಹಾರಾಷ್ಟ್ರ ಉಪ ಸ್ಪೀಕರ್, ಶಿವಸೇನೆ ಮುಖ್ಯ ಸಚೇತಕ ಸುನಿಲ್ ಪ್ರಭು ಮತ್ತು ಶಾಸಕಾಂಗ ಪಕ್ಷದ ನಾಯಕ ಅನಿಲ್ ಚೌಧರಿ ಅವರಿಗೆ ನೋಟಿಸ್ ಜಾರಿ ಮಾಡಿದೆ.

ಅರ್ಜಿಗಳ ವಿಚಾರಣೆಯ ಸಂದರ್ಭದಲ್ಲಿ, ತಮ್ಮ ಪ್ರಕರಣಕ್ಕೆ ಸಂಬಂಧಿಸಿದಂತೆ ಬಾಂಬೆ ಹೈಕೋರ್ಟ್ ಅನ್ನು ಏಕೆ ಸಂಪರ್ಕಿಸಿಲ್ಲ ಎಂದು ನ್ಯಾಯಾಲಯವು ಶಿವಸೇನೆಯ ಬಂಡಾಯ ಶಾಸಕ ಏಕನಾಥ್ ಶಿಂಧೆ ನೇತೃತ್ವದ ಬಣವನ್ನು ಕೇಳಿದ್ದು ಇದಕ್ಕೆ ತಮ್ಮ ಜೀವಕ್ಕೆ ಅಪಾಯವಿದ್ದು, ಮುಂಬೈನಲ್ಲಿ ತಮ್ಮ ವಾದವನ್ನು ಸಮರ್ಥಿಸಿಕೊಳ್ಳಲು ಪೂರಕವಾದ ವಾತಾವರಣ ಇಲ್ಲ ಎಂದು ಶಿಂಧೆ ಬಣ ತಿಳಿಸಿದೆ. ಶಿಂಧೆ ಮತ್ತು ಶಿವಸೇನೆಯ ಬಹುಪಾಲು ಶಾಸಕರು ಜೂ.22ರಿಂದ ಅಸ್ಸಾಂನ ರಾಜಧಾನಿ ಗುವಾಹಟಿಯ ಹೋಟೆಲ್‌ನಲ್ಲಿ ಮೊಕ್ಕಾಂ ಹೂಡಿದ್ದಾರೆ. ರಾಜ್ಯದ ಎಂವಿಎ ಸಮ್ಮಿಶ್ರ ಸರ್ಕಾರದ ವಿರುದ್ಧ ಬಂಡಾಯ ಶಾಸಕರು ಗರಂ ಆಗಿದ್ದು, ಸರ್ಕಾರ ಪತನವಾಗುವ ಭೀತಿ ಎದುರಾಗಿದೆ.

ಶಿಂಧೆ ನೇತೃತ್ವದ ಬಂಡಾಯ ಗುಂಪು ಶಿವಸೇನೆಯು ಮಹಾ ವಿಕಾಸ್ ಅಘಾಡಿ ಮೈತ್ರಿಯಿಂದ (ಎಂವಿಎ) ಹೊರಬರಲು ಒತ್ತಾಯಿಸುತ್ತಿದೆ, ಆದರೆ ಶಿವಸೇನೆ ಮುಖ್ಯಸ್ಥ ಮತ್ತು ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರು ಬಿಟ್ಟುಕೊಡಲು ನಿರಾಕರಿಸಿದ್ದಾರೆ. ಅಲ್ಲದೆ ಬಂಡಾಯ ಶಾಸಕರು ತಮ್ಮ ಪಕ್ಷಕ್ಕೆ ರಾಜಿನಾಮೆ ನೀಡಿ ಸ್ಪರ್ಧಿಸುವಂತೆ ಸವಾಲು ಹಾಕಿದ್ದಾರೆ.

ಬಾಳ ಸಾಹೇಬ್, ಆನಂದ್ ದಿಘೆಗೆ ಸಂದ ಜಯ

ಮುಂಬೈ: ಅನರ್ಹತೆ ನೋಟಿಸ್ ಕುರಿತು ಸುಪ್ರೀಂ ಕೋರ್ಟ್ ನೀಡಿರುವ ಆದೇಶ ಬಾಳಠಾಕ್ರೆ ಮತ್ತು ಆನಂದ್ ದಿಘೆ ಅವರಿಗೆ ಸಂದ ಜಯವಾಗಿದೆ ಎಂದು ಶಿವಸೇನೆ ಬಂಡಾಯ ನಾಯಕ ಏಕನಾಥ್ ಶಿಂಧೆ ಸೋಮವಾರ ಹೇಳಿದ್ದಾರೆ.

ಸುಪ್ರೀಂಕೋರ್ಟ್ ಆದೇಶದ ಬೆನ್ನಲ್ಲೇ ಟ್ವೀಟ್ ಮಾಡಿರುವ ಏಕನಾಥ್ ಶಿಂಧೆ, ಇದು ಹಿಂದುತ್ವ ಸಾಮ್ರಾಟ ಬಾಳಸಾಹೇಬ್ ಠಾಕ್ರೆ ಅವರ ಹಿಂದೂತ್ವ ಮತ್ತು ಧರ್ಮವೀರ್ ಆನಂದ್ ದಿಘೆ ಸಾಹೇಬ್ ಅವರ ಚಿಂತನೆಗೆ ಸಂದ ಗೆಲುವು ಎಂದಿದ್ದಾರೆ. ಅನರ್ಹತೆ ನೋಟಿಸ್‌ಗೆ ಉತ್ತರಿಸಲು 16 ಅತೃಪ್ತ ಶಾಸಕರಿಗೆ ಉಪಸಭಾಪತಿ ನೀಡಿದ ಸಮಯವನ್ನು ಜುಲೈ 11ರವರೆಗೆ ವಿಸ್ತರಿಸಿದೆ. ಆದಾಗ್ಯೂ, ವಿಧಾನಸಭೆಯಲ್ಲಿ ಯಾವುದೇ ವಿಶ್ವಾಸಮತ ಯಾಚನೆ ನಡೆಸಬಾರದು ಎಂಬ ಮಹಾರಾಷ್ಟ್ರ ಸರ್ಕಾರದ ಅರ್ಜಿ ಕುರಿತು ಮಧ್ಯಂತರ ಆದೇಶ ಹೊರಡಿಸಲು ಸುಪ್ರೀಂಕೋರ್ಟ್ ನಿರಾಕರಿಸಿತು. ಕಾನೂನುಬಾಹಿರ ಸಂದರ್ಭದಲ್ಲಿ ಯಾವಾಗ ಬೇಕಾದರೂ ಇದನ್ನು ಅವರು ಕೈಗೊಳ್ಳಬಹುದು ಎಂದು ಹೇಳಿತು.

ಶಿವಸೇನಾ ನಾಯಕ ಸಂಜಯ್ ರಾವತ್‌ಗೆ ಇಡಿ ಸಮನ್ಸ್



ಮುಂಬೈ: ಶಿವಸೇನಾ ನಾಯಕ, ಸಂಸದ ಸಂಜಯ್ ರಾವತ್‌ಗೆ ಇಡಿ ಸಮನ್ಸ್ ಜಾರಿ ಮಾಡಿದೆ. ಮುಂಬೈನ ಕೋರೇಂಗಾವ್‌ನಲ್ಲಿರುವ ಪತ್ರಾ ಬಡಾವಣೆ ಅಭಿವೃದ್ಧಿಯಲ್ಲಿ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ರಾವತ್‌ಗೆ ಸಮನ್ಸ್ ಜಾರಿ ಮಾಡಿದ್ದು, ಮಂಗಳವಾರ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದೆ.

ಒಂದನೇ ಪುಟದಿಂದ

ರೌಡಿಶೀಟರ್ ಬರ್ಬರ ಹತ್ಯೆ

ನೀಡದಿದ್ದವರನ್ನು ಅಪಹರಿಸಿ ಹೆದರಿಸಿ ಹಣ ವಸೂಲಿ ಮಾಡುತ್ತಿದ್ದ. ಈತನಿಗೆ ಹೆದರಿ ಹಲವರು ಪೊಲೀಸರಿಗೆ ದೂರನ್ನೇ ಸಲ್ಲಿಸಿರಲಿಲ್ಲ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕೆ.ಆರ್.ಪೇಟೆ ಪಟ್ಟಣದವನೇ ಆದ ಈತ, ಆರಂಭದಲ್ಲಿ ಎಳನೀರು ವ್ಯಾಪಾರ ಮಾಡುತ್ತಿದ್ದ. ನಂತರ ಪಾತಕ ಲೋಕಕ್ಕೆ ಕಾಲಿಟ್ಟಿದ್ದಾನೆ. ಈತ ಹಾಗೂ ಮತ್ತೋರ್ವ ರೌಡಿಶೀಟರ್ ಯತೀಶ್ ಸ್ನೇಹಿತರೇ ಆಗಿದ್ದು, ರೌಡಿಸಂನಲ್ಲಿ ಪ್ರಭುತ್ವ ಸಾಧಿಸುವ ವಿಚಾರದಲ್ಲಿ ಇವರಿಬ್ಬರ ನಡುವೆ ದ್ವೇಷ ಹುಟ್ಟಿಕೊಂಡಿದೆ. 2009ರಲ್ಲಿ ಯತೀಶ್ ತಂಡ ಅರುಣನ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿತ್ತಾದರೂ, ಆತ ಬದುಕುಳಿದಿದ್ದ. ಈ ವಿಚಾರವಾಗಿ ದ್ವೇಷ ಸಾಧಿಸುತ್ತಿದ್ದ ಅರುಣ, 2012ರಲ್ಲಿ ಯತೀಶ್‌ನ ಬಲಗೈ ಭಂಟ ಭಾಸ್ಕರ್‌ನನ್ನು ಕೊಚ್ಚಿ ಕೊಲೆ ಮಾಡಿದ್ದ. ಈ ಪ್ರಕರಣದಲ್ಲಿ ಯತೀಶ್ ಮತ್ತು ಅರುಣನ ನಡುವೆ ಕೆಲವರು ಸಂಧಾನ ನಡೆಸಿದರು ಎಂದು ಹೇಳಲಾಗಿದ್ದು, ಸಮರ್ಪಕ ಸಾಕ್ಷಿಗಳು ಇಲ್ಲದ ಕಾರಣ ಅರುಣ ಖುಲಾಸೆಗೊಂಡಿದ್ದ. ಆ ನಂತರವೂ ತನ್ನ ಮೇಲೆ ಹಲ್ಲೆ ನಡೆಸಿದ್ದ ಯತೀಶ್‌ನ ಗ್ಯಾಂಗ್ ವಿರುದ್ಧ ಕತ್ತಿ ಮಸೆಯುತ್ತಿದ್ದ ಅರುಣ, 2016ರಲ್ಲಿ ಯತೀಶ್‌ನ ತಮ್ಮ ರಾಜೇಶ್‌ನನ್ನು ಹುಟ್ಟು ಹಬ್ಬದ ದಿನವೇ ಕೊಚ್ಚಿ ಕೊಲೆ ಮಾಡಿ, ಜೈಲು ಪಾಲಾಗಿದ್ದ.

ಜೈಲಿನಲ್ಲಿದ್ದಾಗಲೂ ಅಪರಾಧ ಕೃತ್ಯಗಳಲ್ಲಿ ಸಕ್ರಿಯನಾಗಿದ್ದ ಅರುಣ, ಕೆ.ಆರ್.ಪೇಟೆಯ ಚಿನ್ನದ ವ್ಯಾಪಾರಿ ಗೋಪಾಲ ಎಂಬಾತನನ್ನು ತನ್ನ ಸಹಚರರ ಮೂಲಕ ಅಪಹರಣ ಮಾಡಿಸಿ, ಕೋಟಿ ರೂ. ಒತ್ತೆ ಹಣಕ್ಕೆ ಬೇಡಿಕೆ ಇಟ್ಟಿದ್ದ. 3 ದಿನಗಳ ಕಾಲ ನಂಜನಗೂಡು ಬಳಿ ತೋಟದ ಮನೆಯೊಂದರಲ್ಲಿ ಚಿನ್ನದ ವ್ಯಾಪಾರಿ ಗೋಪಾಲ್‌ನನ್ನು ಅಕ್ರಮ ಬಂಧನದಲ್ಲಿರಿಸಿದ್ದ ಅರುಣ, ಕೆಲ ಲಕ್ಷ ರೂ. ಪಡೆದು ಬಿಡುಗಡೆ ಮಾಡಿದ್ದ ಎನ್ನಲಾಗಿದೆ.

ಅಪಹರಣ ಪ್ರಕರಣ ಕೆ.ಆರ್.ಪೇಟೆ ಠಾಣೆಯಲ್ಲಿ ದಾಖಲಾಗಿತ್ತು. ಅಪಹರಣಕಾರರಿಂದ ಬಿಡುಗಡೆಯಾಗಿ ಬಂದ ಗೋಪಾಲನನ್ನು ಪೊಲೀಸರು ವಿಚಾರಣೆಗೊಳಪಡಿಸಿದಾಗ ತನ್ನನ್ನು ಅಪಹರಿಸಿದ ನಂತರ ರೌಡಿಶೀಟರ್ ಅರುಣ, ಮೊಬೈಲ್‌ಗೆ ಕರೆ ಮಾಡಿ ಕೋಟಿ ರೂ. ಒತ್ತೆ ಹಣ ಕೇಳಿದ್ದ ಎಂಬ ವಿಚಾರವನ್ನು ಗೋಪಾಲ ಹೇಳಿದಾಗ, ಜೈಲಿನಲ್ಲಿರುವ ಅರುಣ ಹ್ಯಾಗೆ ಅಪಹರಣ ಮಾಡಿಸಲು ಸಾಧ್ಯ ಎಂದು ತಲೆಕೆಡಿಸಿಕೊಂಡ ಕೆ.ಆರ್.ಪೇಟೆ ಪೊಲೀಸರು ಕಾಲ್‌ಲಿಸ್ಟ್ ಪರಿಶೀಲಿಸಿದಾಗ ಅರುಣ ಬಂಧಿಯಾಗಿದ್ದ ನಂಜನಗೂಡು ಜೈಲಿನ ಅಧಿಕಾರಿಯೊಬ್ಬರ ಮೊಬೈಲ್‌ನಿಂದ ಕರೆ ಬಂದಿರುವುದು ಖಚಿತಪಟ್ಟಿದೆ. ಆ ಪ್ರಕರಣದಲ್ಲಿ ಜೈಲಿನ ಅಧಿಕಾರಿಯೂ ಕೂಡ ಬಂಧಿಸಲ್ಪಟ್ಟು ಜೈಲು ಪಾಲಾಗಿದ್ದರು ಎಂದು ಹೇಳಲಾಗಿದೆ. ತನ್ನ ಆಪ್ತ ಭಾಸ್ಕರ್ ಮತ್ತು ಸಹೋದರ ರಾಜೇಶ್‌ನನ್ನು ಕೊಲೆ ಮಾಡಿದ್ದ ಸೇಡು ತೀರಿಸಿಕೊಳ್ಳಲು ಅರುಣನನ್ನು ಹತ್ಯೆ ಮಾಡಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ. ಆದರೂ, ಅರುಣ ನಡೆಸುತ್ತಿದ್ದ ಪಾತಕ ಕೃತ್ಯಗಳಿಂದಾಗಿ ಬೇರೆ ಯಾರಾದರೂ ವಿರೋಧಿಗಳು ಹತ್ಯೆ ಮಾಡಿರಬಹುದೇ ಎಂಬ ನಿಟ್ಟಿನಲ್ಲೂ ಕೂಡ ತನಿಖೆ ಮುಂದುವರೆಸಿದ್ದಾರೆ.

ರಾಜೇಶ್ ಹತ್ಯೆ ಪ್ರಕರಣದಲ್ಲಿ ಜೈಲು ಪಾಲಾಗಿದ್ದ ಅರುಣ, ಕಳೆದ 3 ವರ್ಷದ ಹಿಂದೆ ಬಿಡುಗಡೆಯಾಗಿ ಬಂದಾಗ ಆತನನ್ನು ಗಡಿಪಾರು ಮಾಡಲಾಗಿತ್ತು. ಗಡಿಪಾರು ಅವಧಿ ಮುಗಿದ ನಂತರವೂ ಅರುಣ ಕೆ.ಆರ್.ಪೇಟೆಯ ತನ್ನ ಮನೆಯಲ್ಲಿ ನೆಲೆಸದೆ ಮೈಸೂರಿನಲ್ಲೇ ವಾಸವಿದ್ದ. ಆದರೆ ಪ್ರತೀ ಸೋಮವಾರ ಶ್ರವಣಬೆಳಗೊಳ ರಸ್ತೆಯಲ್ಲಿರುವ ಈಶ್ವರನ ದೇವಸ್ಥಾನಕ್ಕೆ ಬಂದು ಪೂಜೆ ಸಲ್ಲಿಸಿ ಸುಮಾರು ಅರ್ಧ ಗಂಟೆ ಕಾಲ ದೇವಸ್ಥಾನದಲ್ಲೇ ಇರುತ್ತಿದ್ದ ಎಂದು ಹೇಳಲಾಗಿದ್ದು, ಈ ಮಾಹಿತಿ ಸಂಗ್ರಹಿಸಿದ್ದ ಹಂತಕರು ಆತನನ್ನು ಕೊಲೆ ಮಾಡಲು ಸಂಚು ರೂಪಿಸಿದ್ದರಾದರೂ, ಹೇಗೋ ತಪ್ಪಿಸಿಕೊಳ್ಳುತ್ತಿದ್ದ ಎನ್ನಲಾಗಿದ್ದು, ಕಳೆದ ಶನಿವಾರ ಕೆ.ಆರ್.ಪೇಟೆ ಮನೆಗೆ ಬಂದಿದ್ದ ಆತ, ಸಾರ್ವಜನಿಕವಾಗಿ ಹೆಚ್ಚು ಕಾಣಿಸಿಕೊಳ್ಳುತ್ತಿರಲಿಲ್ಲ. ಇಂದು ಬೆಳಗ್ಗೆ ಸಂಬಂಧಿಕ ಪ್ರವೀಣ್ ಬೈಕ್‌ನಲ್ಲಿ ದೇವಸ್ಥಾನಕ್ಕೆ ಡ್ರಾಪ್ ತೆಗೆದುಕೊಂಡ ಅರುಣ, ದೇವಸ್ಥಾನದ ಆವರಣದಲ್ಲೇ ಬರ್ಬರವಾಗಿ ಕೊಲೆಯಾಗಿದ್ದಾನೆ. ಈ ಹಿನ್ನೆಲೆಯಲ್ಲಿ ಕೆ.ಆರ್.ಪೇಟೆ ಪಟ್ಟಣದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದೆ. ಈ ಸಂಬಂಧ ಕೆ.ಆರ್.ಪೇಟೆ ಟೌನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

4 ದಿನಕ್ಕೆ 94 ಸಾವಿರ ಅರ್ಜಿ

ಯೋಜನೆಯನ್ನು ಕೇಂದ್ರ ಅನಾವರಣಗೊಳಿಸಿದ ಬಳಿಕ ದೇಶಾದ್ಯಂತ ಅದರ ವಿರುದ್ಧ ಹಿಂಸಾತ್ಮಕ ಪ್ರತಿಭಟನೆಗಳು ನಡೆಯಿತು. ವಿರೋಧ ಪಕ್ಷಗಳು ಯೋಜನೆಯನ್ನು ಹಿಂತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದವು. ಇಲ್ಲಿಯವರೆಗೆ ಒಟ್ಟು 94,281 ಅಗ್ನಿವೀರ್ ವಾಯುಪಡೆ ಆಕಾಂಕ್ಷಿಗಳು ಅರ್ಜಿ ಸಲ್ಲಿಸಿದ್ದಾರೆ. ಜುಲೈ 5ಕ್ಕೆ ನೋಂದಣಿ ಪ್ರಕ್ರಿಯೆ ಮುಕ್ತಾಯವಾಗುತ್ತದೆ ಎಂದು ರಕ್ಷಣಾ ಸಚಿವಾಲಯದ ವಕ್ತಾರ ಭರತ್ ಭೂಷಣ್ ಬಾಬು ತಿಳಿಸಿದ್ದಾರೆ. ಅಗ್ನಿಪಥ್ ಯೋಜನೆಯಲ್ಲಿ 17.5 ವರ್ಷದವರಿಂದ ಹಿಡಿದು 21 ವರ್ಷ ವಯಸ್ಸಿನವರು 4 ವರ್ಷಗಳ ಅವಧಿಗೆ ಸೇನೆಗೆ ಸೇರಬಹುದು ಎಂದು ಸರ್ಕಾರ ತಿಳಿಸಿತ್ತು. 4 ವರ್ಷದ ಸೇವೆ ಮುಗಿದ ಬಳಿಕ ಶೇ.25ರಷ್ಟು ಅಗ್ನಿವೀರರನ್ನು ಸೇನೆಗೆ ನೇಮಕ ಮಾಡಲಾಗುವುದು ಎಂದು ಹೇಳಿತ್ತು. ಜೂನ್ 16ರಂದು ನೇಮಕಾತಿಗೆ ವಯಸ್ಸಿನ ಮಿತಿಯನ್ನು 21 ವರ್ಷದಿಂದ 23 ವರ್ಷಕ್ಕೆ ಹೆಚ್ಚಿಸಿತು. 4 ವರ್ಷದ ಸೇವೆಯ ಬಳಿಕ ನಿವೃತ್ತ ಅಗ್ನಿವೀರರು ಅರೆಸೇನಾ ಪಡೆ ಹಾಗೂ ಸಾರ್ವಜನಿಕ ವಲಯದ ರಕ್ಷಣಾ ಸಂಸ್ಥೆಗಳಲ್ಲಿ ಅವಕಾಶಗಳನ್ನು ಪಡೆಯಬಹುದು ಎಂದು ತಿಳಿಸಿದೆ.

ತರಬೇತಿ ಉದ್ಘಾಟನೆ

ಮೈಸೂರು, ಜೂ.27– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದಲ್ಲಿ ಯುಜಿಸಿ–ನೆಟ್ ಹಾಗೂ ಕೆ–ಸೆಟ್ ಪರೀಕ್ಷಾ ತರಬೇತಿ ಆಯೋಜಿಸಲಾಗಿದೆ. ಮುಕ್ತಗಂಗೋತ್ರಿಯ ಕಾವೇರಿ ಸಭಾಂಗಣದಲ್ಲಿ ಜೂ.29ರಂದು ಬೆಳಗ್ಗೆ 11 ಗಂಟೆಗೆ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟ್ಸೂರ್ ಮಠ ಚಾಲನೆ ನೀಡಲಿದ್ದಾರೆ. ಕರಾಮುವಿ ಕುಲಪತಿ ಪ್ರೊ.ಎಸ್.ವಿದ್ಯಾಶಂಕರ್ ಅಧ್ಯಕ್ಷತೆ ವಹಿಸಲಿದ್ದು, ಕುಲಸಚಿವ ಪ್ರೊ.ಆರ್.ರಾಜಣ್ಣ ಮತ್ತಿತರರು ಭಾಗವಹಿಸಲಿದ್ದಾರೆ.

ಆಸಕ್ತರು ದೂ.ಸಂ:0821–2515944 ನ್ನು ಸಂಪರ್ಕಿಸಬಹುದು ಎಂದು ಕೇಂದ್ರದ ಸಂಯೋಜನಾಧಿಕಾರಿ ತಿಳಿಸಿದ್ದಾರೆ.

ಕಾಡಾದಲ್ಲಿ ಎಂಎಲ್‌ಸಿ ವಿಶ್ವನಾಥ್ ಕಚೇರಿ ಉದ್ಘಾಟನೆ

ಮೈಸೂರು, ಜೂ.27(ಎಂಟಿವೈ)– ಮೈಸೂರಿನ ಕಾಡಾ ಕಚೇರಿಯಲ್ಲಿ ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ತಮ್ಮ ಕಚೇರಿ ಶಾಸಕರ ಕಚೇರಿಯನ್ನು ಸೋಮವಾರ ಉದ್ಘಾಟಿಸಿದರು.

ತಮಗೆ ನಿಗದಿ ಮಾಡಿರುವ ಕೊಠಡಿಯಲ್ಲಿ ಇಂದು ಬೆಳಗ್ಗೆ ದಸರಾ ಆನೆಗೆ ಪೂಜೆ ಮಾಡುವ ಅರ್ಚಕ ಎಸ್.ವಿ.ಪ್ರಹ್ಲಾದ್ ರಾವ್ ಅವರಿಂದ ಕಳಸ ಪೂಜೆ ಸೇರಿದಂತೆ ವಿವಿಧ ಪೂಜಾ ಕೈಂಕರ್ಯ ನೆರವೇರಿಸಿದ ಬಳಿಕ ತಮ್ಮ ಕಚೇರಿಯಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕಾರಕ್ಕೆ ವ್ಯವಸ್ಥೆ ಕಲ್ಪಿಸಿದರು.



ಕಚೇರಿಯಲ್ಲಿ ಪ್ರಧಾನಿ ನರೇಂದ್ರ ಮೋದಿ, ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್, ರಾಷ್ಟ್ರಪಿತ ಮಹಾತ್ಮ ಗಾಂಧೀಜಿ, ಮಾಜಿ ಸಿಎಂ ಡಿ.ದೇವರಾಜ ಅರಸು, ಸಿಎಂ ಬಸವರಾಜ್ ಬೊಮ್ಮಾಯಿ ಅವರ ಭಾವಚಿತ್ರಗಳನ್ನು ಅಳವಡಿಸಿರುವುದು ವಿಶೇಷವಾಗಿತ್ತು.

ನಾಡಪ್ರಭು ಕೆಂಪೇಗೌಡರ ಭಾವಚಿತ್ರವನ್ನು ಪೂಜಿಸುವ ಮೂಲಕ ನೂತನ ಕಚೇರಿ ಆರಂಭಿಸಿದರಲ್ಲದೆ, ಕೆಂಪೇಗೌಡ ಜಯಂತಿಯಂದೇ ಕಚೇರಿ ಆರಂಭಿಸುವ ಮೂಲಕ ಬೆಂಗಳೂರು ನಿರ್ಮಾತೃವಿಗೆ ಗೌರವ ಸಮರ್ಪಿಸುವುದಾಗಿ ವಿಶ್ವನಾಥ್ ಹೇಳಿದರು.

ಶಾಸಕ ಜಿ.ಟಿ.ದೇವೇಗೌಡ ಸೇರಿದಂತೆ ಗಣ್ಯರು ಹಾಗೂ ಸಂಘ–ಸಂಸ್ಥೆಗಳ ಮುಖಂಡರು ನೂತನ ಕಚೇರಿಗೆ ಆಗಮಿಸಿ ವಿಶ್ವನಾಥ್ ಅವರಿಗೆ ಶುಭ ಕೋರಿದರು.

ಈ ಸಂದರ್ಭದಲ್ಲಿ ವಿಶ್ವನಾಥ್ ಅವರ ಪುತ್ರ ಅಮಿತ್ ದೇವರಹಟ್ಟಿ ದಂಪತಿ, ಪೂರ್ವಜ್ ವಿಶ್ವನಾಥ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮಂಡ್ಯ ಜಿಲ್ಲೆಯ ವಿವಿಧೆಡೆ ನಾಡಪ್ರಭು ಕೆಂಪೇಗೌಡರ ಸ್ಮರಣೆ

ಸರ್ವ ಜನರ ಪ್ರೀತಿಗೆ ಪಾತ್ರರಾಗಿದ್ದ ನಾಡಪ್ರಭು ಕೆಂಪೇಗೌಡರು

ಕೆಆರ್.ಪೇಟೆ, ಜೂ.27– ಕೃಷಿಯನ್ನು ಶ್ರೇಷ್ಠ ಕಸುಬು ಎಂದು ನಂಬಿದ್ದ ಕೆಂಪೇಗೌಡರು ರೈತರಿಗಾಗಿ ಸಾವಿರಾರು ಕೆರೆ ನಿರ್ಮಿಸಿ ಅನುಕೂಲ ಮಾಡಿಕೊಟ್ಟಿದ್ದರು. ವಿವಿಧ ಸಮುದಾಯಗಳ ಅಭಿವೃದ್ಧಿಗೆ ವೃತ್ತಿ ಆಧಾರಿತ ಪೇಟೆಗಳನ್ನು ನಿರ್ಮಿಸಿಕೊಡುವ ಮೂಲಕ ಸರ್ವ ಜನರ ಪ್ರೀತಿಗೆ ಪಾತ್ರರಾಗಿದ್ದರು ಎಂದು ಮೈಸೂರು ವಿವಿ ವಿಶ್ರಾಂತ ಉಪಕುಲಪತಿ ಡಾ.ರಾಮೇಗೌಡ ತಿಳಿಸಿದರು.

ಪಟ್ಟಣದ ಮಿನಿ ವಿಧಾನಸೌಧದ ಆವರಣದಲ್ಲಿ ತಾಲೂಕು ಆಡಳಿತ ಹಾಗೂ ಒಕ್ಕಲಿಗರ ಸಂಘದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ನಾಡಪ್ರಭು ಕೆಂಪೇಗೌಡರ ಜಯಂತಿಯಲ್ಲಿ ಅವರು ಉಪನ್ಯಾಸ ನೀಡಿದರು.

ವಿಜಯನಗರ ಅರಸರ ಸಾಮಂತ ಆಡಳಿತಗಾರನಾಗಿದ್ದ ಕೆಂಪೇಗೌಡರು, ಅಕ್ಕಿಪೇಟೆ, ರಾಗಿಪೇಟೆ, ಅರಳೆ ಪೇಟೆ, ಕುಂಬಾರಪೇಟೆ, ಗಾಣಿಗರಪೇಟೆ, ಗೊಲ್ಲರಪೇಟೆ, ಮಡಿವಾಳಪೇಟೆ, ಮಂಡಿಪೇಟೆ, ಬಳೆಪೇಟೆ, ಚಿಕ್ಕಪೇಟೆ, ಕುರುಬರಪೇಟೆ ಹೀಗೆ ಎಲ್ಲಾ ಸಮುದಾಯದವರಿಗೆ ನೆಲೆ ಕಲ್ಪಿಸಿಕೊಟ್ಟು ಸರ್ವಧರ್ಮ ಸಹಿಷ್ಣುವಾಗಿದ್ದರು. ಅಲ್ಲದೇ ಕೃಷಿ, ಕುಡಿಯುವ ನೀರಿಗಾಗಿ ಸಂಪಂಗಿ ಕೆರೆ, ಕಾರಂಜಿ ಕೆರೆ, ಧರ್ಮಾಂಬುದಿ ಕೆರೆ, ಕೆಂಪಾಂಬುದಿ ಕೆರೆ, ಹಲಸೂರು ಕೆರೆ, ಕೆಂಪಾಪುರ ಅಗ್ರಹಾರ ಕೆರೆ ಸೇರಿ 1200 ಕೆರೆ ಕಟ್ಟೆ ನಿರ್ಮಿಸಿದರು ಎಂದರು.



ಇದೇ ವೇಳೆ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿನಿಯರಾದ ಬಿ.ಎಸ್.ಮೊನಾಲಿಸಾ, ಸಹನಾ, ಹರ್ಷಿತಾ ಅವರಿಗೆ ಮಾದೇಗೌಡ ಮೆಮೋರಿಯಲ್ ಆಸ್ಪತ್ರೆ ಮುಖ್ಯಸ್ಥ ಬೋರೇಗೌಡ ನಗದು ಬಹುಮಾನ ನೀಡಿದರು. ತಾಲೂಕು ಆಡಳಿತವೂ ವಿದ್ಯಾರ್ಥಿನಿಯರಿಗೆ ಕೆಂಪೇಗೌಡ ಪ್ರಶಸ್ತಿ ನೀಡಿ ಗೌರವಿಸಿತು. ಇದೇ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರನ್ನು ಸನ್ಮಾನಿಸಲಾಯಿತು.

ಅಧ್ಯಕ್ಷತೆ ವಹಿಸಿದ್ದ ಸಚಿವ ನಾರಾಯಣಗೌಡ ಸಾಲಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡಿದ್ದ ಸಿಂಧುಘಟ್ಟ ಗ್ರಾಮದ ರೈತ ನಾಗೇಶ್ ಪತ್ನಿ ನಂದಿನಿ ಅವರಿಗೆ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವೈಯಕ್ತಿಕವಾಗಿ 1.25 ಲಕ್ಷ ರೂ. ನೀಡಿದರು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಎಂ.ವಿ.ರೂಪಾ, ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಆರ್.ಎಸ್.ಶಿವರಾಮೇಗೌಡ, ಮೂಡಾ ಅಧ್ಯಕ್ಷ ಕೆ.ಶ್ರೀನಿವಾಸ್, ಟಿಎಪಿಸಿಎಂಎಸ್ ಸಂಸ್ಥೆ ಅಧ್ಯಕ್ಷ ಬಿ.ಎಲ್.ದೇವರಾಜು, ಜಿಪಂ ಮಾಜಿ ಉಪಾಧ್ಯಕ್ಷ ಎಸ್.ಅಂಬರೀಶ್, ಜಿಲ್ಲಾ ಹಾಪ್ ಕಾಮ್ಸ್ ಅಧ್ಯಕ್ಷ ಕೆ.ಜಿ.ತಮ್ಮಣ್ಣ, ತಾಪಂ ಮಾಜಿ ಅಧ್ಯಕ್ಷ ಬಿ.ಜವರಾಯೀಗೌಡ, ತಾಲೂಕು ಒಕ್ಕಲಿಗರ ಒಕ್ಕೂಟದ ಅಧ್ಯಕ್ಷ ಎನ್.ಎಸ್.ಗಂಗಾಧರ್, ಮಹಿಳಾ ಘಟಕದ ಅಧ್ಯಕ್ಷೆ ಯಮುನಾ, ಕರವೇ ಅಧ್ಯಕ್ಷ ವೇಣು, ಪದವೀಧರ ಘಟಕದ ಅಧ್ಯಕ್ಷ ಚೇತನ್ ಕುಮಾರ್, ಕಾರ್ಯದರ್ಶಿ ಶ್ರೀನಿವಾಸ್, ಜಯ ಕರ್ನಾಟಕ ಸಂಘಟನೆ ಅಧ್ಯಕ್ಷ ಸೋಮಶೇಖರ್, ಕರ್ನಾಟಕ ರಕ್ಷಣಾ ಸೇನೆ ಅಧ್ಯಕ್ಷ ಪ್ರಶಾಂತ್, ಪುರಸಭಾಧ್ಯಕ್ಷೆ ಮಹಾದೇವಿ, ಸದಸ್ಯರಾದ ತಿಮ್ಮೇಗೌಡ, ಪ್ರಮೋದ್, ನಿವೃತ್ತ ಪ್ರಾಂಶುಪಾಲ ಕೆಕಾಳೇಗೌಡ ತಾಲೂಕು ಒಕ್ಕಲಿಗರ ಸಂಘದ ಸದಸ್ಯರು, ಉಪ ತಹಸೀಲ್ದಾರ್ ಲಕ್ಷ್ಮಿಕಾಂತ್, ರಾಜಸ್ವ ನಿರೀಕ್ಷಕಿ ಚಂದ್ರಕಲಾ, ತಾಲೂಕು ಗ್ರಾಮ ಲೆಕ್ಕಾಧಿಕಾರಿ ಸಂಘದ ಅಧ್ಯಕ್ಷ ಹರೀಶ್ ಇದ್ದರು.

ಸರ್ವ ಜನಾಂಗದ ಅಭಿವೃದ್ಧಿಗೆ ಶ್ರಮಿಸಿದ ಧೀಮಂತ ನಾಯಕ

ಪಾಂಡವಪುರ, ಜೂ.27– ಸರ್ವ ಜನಾಂಗದ ಅಭಿವೃದ್ಧಿಗಾಗಿ ಶ್ರಮಿಸಿದ ಧೀಮಂತ ನಾಯಕ ಕೆಂಪೇಗೌಡ ಎಂದು ಶಾಸಕ ಸಿ.ಎಸ್.ಪುಟ್ಟರಾಜು ತಿಳಿಸಿದರು.

ತಾಲೂಕು ಆಡಳಿತ, ಒಕ್ಕಲಿಗರ ಸಂಘ ಹಾಗೂ ಕೆಂಪೇಗೌಡರ ಯುವಕರ ಸಂಘದಿಂದ ಪಟ್ಟಣದ ತಾಲೂಕು ಕಚೇರಿಯಲ್ಲಿ ಆಯೋಜಿಸಿದ್ದ ಕೆಂಪೇಗೌಡರ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಬೆಂಗಳೂರು ನಿರ್ಮಾಣ ಗಮನಿಸಿದರೆ ಕೆಂಪೇಗೌಡರು ಎಷ್ಟು ದೂರದೃಷ್ಟಿ ಹೊಂದಿದ್ದರು ಎಂಬುದು ತಿಳಿಯುತ್ತದೆ. ಎಲ್ಲಾ ಸಮಾಜವನ್ನು ಒಗ್ಗೂಡಿಸಿ ಅವರಿಗೆ ಅನುಕೂಲವಾಗುವ ರೀತಿ ಬೆಂಗಳೂರು ಕಟ್ಟಿದ್ದಾರೆ. ಅವರ ಹಾದಿಯಲ್ಲಿ ಒಂದೆರಡು ಹೆಜ್ಜೆ ಹಾಕಿದರೂ ಸಾಕಷ್ಟು ಸಾಧನೆ ಮಾಡಬಹುದು ಎಂದರು.

ಎಸಿ ಬಿ.ಸಿ.ಶಿವಾನಂದಮೂರ್ತಿ ಮಾತನಾಡಿ, ಕೆಂಪೇಗೌಡರು ಕೆರೆ ಕಟ್ಟೆಗಳಿಗೆ ಆದ್ಯತೆ ನೀಡಿ ಸಾವಿರಾರು ಕೆರೆಗಳನ್ನು ನಿರ್ಮಿಸಿದರು.



ಪ್ರಾಕೃತಿಕ ವಿಕೋಪ ಸೇರಿದಂತೆ ಎಲ್ಲಾ ರೀತಿಯಿಂದಲೂ ರಕ್ಷಣೆ ಇರುವ ನಗರ ಕಟ್ಟಿಕೊಟ್ಟಿದ್ದಾರೆ. ಉದ್ಯಾನ ನಗರಿ ಬೆಂಗಳೂರು ಎಲ್ಲಾ ಕಾಲಕ್ಕೂ ವಾಸಿಸಲು ಯೋಗ್ಯವಾಗಿದೆ ಎಂದರು.

ಇದಕ್ಕೂ ಮುನ್ನಾ ಪಟ್ಟಣದ 5 ದೀಪ ವೃತ್ತದ ಬಳಿ ಜಮಾಯಿಸಿದ ಎಲ್ಲಾ ಪಕ್ಷದ ಮುಖಂಡರು, ಅಭಿಮಾನಿಗಳು ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಪೂಜೆ ಸಲ್ಲಿಸಿ, ಪಟ್ಟಣದ ಆಸ್ಪತ್ರೆ ಒಳರೋಗಿಗಳಿಗೆ ಹಣ್ಣು, ಬ್ರೆಡ್ ವಿತರಿಸಿದರು.

ಕೆಂಪೇಗೌಡರ ಜಯಂತಿ ಹಿನ್ನೆಲೆಯಲ್ಲಿ ಆಯೋಜಿಸಿದ್ದ ಚರ್ಚಾ ಸ್ಪರ್ಧೆಯಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ, ಸಸಿ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಎಸ್.ಎಲ್.ನಯನ, ಕಾಂಗ್ರೆಸ್ ಮುಖಂಡರಾದ ಹೆಚ್.ತ್ಯಾಗರಾಜು, ಕುಬೇರ್, ಸಿ.ಆರ್.ರಮೇಶ್, ರೈತಸಂಘ ತಾಲೂಕು ಅಧ್ಯಕ್ಷ ಹರೀಶ್, ಬಿಜೆಪಿ ಮುಖಂಡ ಡಾ.ಎನ್.ಎಸ್.ಇಂದ್ರೇಶ್, ಕಿಯೋನಿಕ್ಸ್ ನಿರ್ದೇಶಕ ಎಚ್.ಎನ್.ಮಂಜುನಾಥ್, ರಾಜೀವ್ ತಮ್ಮಣ್ಣ, ಧನಂಜಯ, ದಲಿತ ಮುಖಂಡರಾದ ಡಿ.ಕೆ.ಅಂಕಯ್ಯ, ಯೋಗೇಶ್ ಇತರರಿದ್ದರು.

ಕೆಂಪೇಗೌಡರ ಕೊಡುಗೆ ಅನನ್ಯ



ಮದ್ದೂರು, ಜೂ.27– ಬೆಂಗಳೂರು ರಾಷ್ಟ್ರ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಗಳಿಸಲು ನಾಡಪ್ರಭು ಕೆಂಪೇಗೌಡರ ಕೊಡುಗೆ ಅನನ್ಯ ಎಂದು ಶಾಸಕ ಡಿ.ಸಿ.ತಮ್ಮಣ್ಣ ಬಣ್ಣಿಸಿದರು.

ಪಟ್ಟಣದ ತಾಲೂಕು ಕ್ರೀಡಾಂಗಣದಲ್ಲಿ ನಡೆದ ಕೆಂಪೇಗೌಡರ ಜಯಂತಿಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಬೆಂಗಳೂರಿನಲ್ಲಿ ಎಲ್ಲಾ ವರ್ಗದ ಜನರು ನೆಮ್ಮದಿಯ ಜೀವನ ನಡೆಸುತ್ತಿರುವುದು ಕೆಂಪೇಗೌಡರ ದೂರದೃಷ್ಟಿತ್ವದ ಫಲ ಎಂದರು.

ಕಾರ್ಯಕ್ರಮಕ್ಕೂ ಮುನ್ನ ಪಟ್ಟಣದ ಶ್ರೀ ಉಗ್ರನರಸಿಂಹಸ್ವಾಮಿ ದೇವಾಲಯದ ಆವರಣದಿಂದ ಕೆಂಪೇಗೌಡರ ಭಾವಚಿತ್ರವನ್ನು ಶಾಲಾ, ಕಾಲೇಜು ವಿದ್ಯಾರ್ಥಿಗಳ ಆಕರ್ಷಕ ಪಥ ಸಂಚಲನದೊಂದಿಗೆ ತಾಲೂಕು ಕ್ರೀಡಾಂಗಣದವರೆಗೂ ಮೆರವಣಿಗೆ ಮಾಡಲಾಯಿತು. ಈ ವೇಳೆ ತಾಲೂಕಿನ ಗೊಲ್ಲರದೊಡ್ಡಿ ಹಿರಿಯ ಕಲಾವಿದರ ಕೋಲಾಟ, ಭೀಮನಕೆರೆ ಜಯಣ್ಣ ಮತ್ತು ತಂಡದವರ ಕೀಲು ಕುದುರೆ, ಆಕರ್ಷಕ ಪಟ ಕುಣಿತ, ಶಾಲಾ ವಿದ್ಯಾರ್ಥಿಗಳ ವಾದ್ಯವೃಂದ, ರಂಗಭೂಮಿ ಕಲಾವಿದ 'ಅಶ್ವಾರೋಹಿ ಕೆಂಪೇಗೌಡ' ವೇಷಧಾರಿ ಮಾರಸಿಂಗನಹಳ್ಳಿ ಮಲ್ಲರಾಜು ಅವರ ಪ್ರದರ್ಶನ ನೋಡುಗರ ಗಮನ ಸೆಳೆಯಿತು. ಆತಗೂರು ಹೋಬಳಿ ಚಿಕ್ಕಅಂಕನಹಳ್ಳಿ ಸರ್ಕಾರಿ ಪದವಿಪೂರ್ವ ಕಾಲೇಜು ಮುಖ್ಯಶಿಕ್ಷಕ ಎಚ್.ಕೆ.ಆನಂದ್ ಕೆಂಪೇಗೌಡರ ಕುರಿತು ಉಪನ್ಯಾಸ ನೀಡಿದರು. ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಲಕ್ಷ್ಮಿ ಚನ್ನರಾಜು, ತೊರೆಚಾಕನಹಳ್ಳಿ ಶಂಕರೇಗೌಡ, ಶ್ರೀನಿವಾಸ್, ಕ್ರಾಂತಿ ಸಿಂಹ, ದಯಾನಂದ ಅವರನ್ನು ತಾಲೂಕು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಅಭಿನಂದಿಸಲಾಯಿತು.

ಪುರಸಭೆ ಅಧ್ಯಕ್ಷ ಸುರೇಶ್ ಕುಮಾರ್, ಉಪಾಧ್ಯಕ್ಷೆ ಸುಮಿತ್ರ, ಸ್ಥಾಯಿ ಸಮಿತಿ ಅಧ್ಯಕ್ಷ ಮಹೇಶ್, ಸದಸ್ಯರಾದ ಸರ್ವ ಮಂಗಳ, ವನಿತಾ, ಪ್ರಸನ್ನ, ಸಿದ್ದರಾಜು, ರತ್ನಮ್ಮ, ಶೋಭಾ, ತ್ರಿವೇಣಿ, ಟಿಎಚ್‌ಓ ರವೀಂದ್ರ, ಒಕ್ಕಲಿಗರ ಸಂಘದ ತಾಲೂಕು ಅಧ್ಯಕ್ಷ ಪಿ.ಶಿವಪ್ಪ, ಕರವೇ ಅಧ್ಯಕ್ಷ ಅಶೋಕ್, ಗ್ರಾಪಂ ಮಾಜಿ ಅಧ್ಯಕ್ಷ ನ.ಲಿ.ಕೃಷ್ಣ, ಸ್ವಾಮಿ ಇತರರಿದ್ದರು.

ಹೆಚ್‌ಡಿಡಿ, ಎಸ್‌ಎಂಕೆಯಿಂದ ಕೆಂಪೇಗೌಡರ ಆದರ್ಶ ಪಾಲನೆ

ಶ್ರೀರಂಗಪಟ್ಟಣ, ಜೂ.27(ವಿನಯ್ ಕಾರೇಕುರ)– ಬೆಂಗಳೂರಿನ ನಿರ್ಮಾತೃ ಕೆಂಪೇಗೌಡರ ಆದರ್ಶ ಪಾಲಿಸುವ ನಿಟ್ಟಿನಲ್ಲಿ ಒಕ್ಕಲಿಗ ನಾಯಕರಾದ ಹೆಚ್.ಡಿ.ದೇವೇಗೌಡ ಹಾಗೂ ಎಸ್.ಎಂ.ಕೃಷ್ಣ ಮುಖ್ಯಮಂತ್ರಿಗಳಾಗಿದ್ದ ಅವಧಿಯಲ್ಲಿ ಬೆಂಗಳೂರು ಅಭಿವೃದ್ಧಿಗೆ ಶ್ರಮಿಸಿದರು. ಅದರಂತೆ ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಮುಂಬರುವ ವಿಧಾನ ಸಭಾ ಚುನಾವಣೆಯಲ್ಲಿ ಒಕ್ಕಲಿಗ ನಾಯಕ ಮುಖ್ಯಮಂತ್ರಿ ಆಗಲು ಸಮಾಜದವರು ಒಂದಾಗಬೇಕು ಎಂದು ಶಾಸಕ ರವೀಂದ್ರ ಶ್ರೀಕಂಠಯ್ಯ ಕರೆ ನೀಡಿದರು.



ಪಟ್ಟಣದ ಖಾಸಗಿ ಬಸ್ ನಿಲ್ದಾಣದಲ್ಲಿ ಸೋಮವಾರ ಶ್ರೀರಂಗಪಟ್ಟಣ ಒಕ್ಕಲಿಗರ ಸಂಘದಿಂದ ಆಯೋಜಿಸಿದ್ದ ಕೆಂಪೇಗೌಡರ 513ನೇ ಜಯಂತೋತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಬೆಂಗಳೂರು ಇಂದು ವಿಶ್ವದಲ್ಲಿ ವಿಶಿಷ್ಟ ಸ್ಥಾನಮಾನ ಪಡೆದಿದೆ. ಇತಿಹಾಸ ನೋಡಿದರೆ ನಮ್ಮ ಒಕ್ಕಲಿಗ ನಾಯಕರು ಮುಖ್ಯಮಂತ್ರಿಗಳಾಗಿ ಯಶಸ್ವಿಯಾಗಿ ರಾಜ್ಯವನ್ನು ಮುನ್ನಡೆಸಿದ್ದಾರೆ. ಮುಂದಿನ ಚುನಾವಣೆಯಲ್ಲೂ ನಮ್ಮ ಸಮುದಾಯದ ನಾಯಕರನ್ನು ಮುಖ್ಯಮಂತ್ರಿ ಮಾಡುವ ನಿಟ್ಟಿನಲ್ಲಿ ರಾಜ್ಯದ ಒಕ್ಕಲಿಗರು ಒಂದಾಗಬೇಕು. ಪಕ್ಷಕ್ಕಿಂತ ನೆಲ ಜಲ, ಭಾಷೆ ಮುಖ್ಯ. ಆ ದೃಷ್ಟಿಯಿಂದ ಸಮುದಾಯದ ಪ್ರಬಲ ನಾಯಕ ಮುಂದಿನ ಸಿಎಂ ಆಗಬೇಕು ಎಂದು ಹೆಚ್.ಡಿ.ಕುಮಾರಸ್ವಾಮಿ ಹೆಸರೇಳದೆ ಮಾರ್ಮಿಕವಾಗಿ ನುಡಿದರು.

ನಮ್ಮ ಸಮುದಾಯಕ್ಕೆ ತಾಲೂಕಿನಲ್ಲಿ ಯಾವುದೇ ಭವನ ಇಲ್ಲ. ಆದ್ದರಿಂದ ಸಮುದಾಯದ ಮುಖಂಡರು ನನ್ನೊಡನೆ ಚರ್ಚಿಸಿದಾಗ ಪಕ್ಷಭೇದ ಮರೆತು ಸ್ಪಂದಿಸಿದೆ. ಪರಿಣಾಮ ಪುರಸಭೆಯಿಂದ ನಿವೇಶನ ಮಂಜೂರಾಗಲಿದೆ. ಆದಷ್ಟು ಬೇಗ ಪಟ್ಟಣದಲ್ಲಿ ಒಕ್ಕಲಿಗರ ಭವನ ನಿರ್ಮಾಣಕ್ಕೆ ಗುದ್ದಲಿಪೂಜೆ ನೆರವೇರಿಸಲಾಗುವುದು ಎಂದು ಭರವಸೆ ನೀಡಿದರು.

ಮಾಜಿ ಶಾಸಕ ರಮೇಶ್ ಬಂಡಿಸಿದ್ದೇಗೌಡ, ಜಯಂತೋತ್ಸವ ಸಮಿತಿ ಗೌರವಾಧ್ಯಕ್ಷ ಪಿ.ಎಸ್.ಚಂದ್ರಶೇಖರ್ ಮಾತನಾಡಿದರು. ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಮುದಾಯದ ಗಣ್ಯರನ್ನು ಸನ್ಮಾನಿಸಲಾಯಿತು. ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ವೇದಿಕೆ ಕಾರ್ಯಕ್ರಮಕ್ಕೂ ಮುನ್ನಾ ಪಟ್ಟಣದ ಶ್ರೀರಂಗನಾಥಸ್ವಾಮಿ ದೇವಾಲಯದ ಆವರಣದಲ್ಲಿ ರಂಗನಾಥಸ್ವಾಮಿಗೆ ಪೂಜೆ ಸಲ್ಲಿಸಿ, ಅಲಂಕೃತ ಬೆಳ್ಳಿರಥದಲ್ಲಿ ಕೆಂಪೇಗೌಡರ ಭಾವಚಿತ್ರ ಮೆರವಣಿಗೆ ನಡೆಸಲಾಯಿತು. ಮೆರವಣಿಗೆಗೆ ಆದಿಚುಂಚನಗಿರಿ ಮೈಸೂರು ಸಂಸ್ಥಾನದ ಸೋಮನಾಥನಂದ ಸ್ವಾಮೀಜಿ ಚಾಲನೆ ನೀಡಿದರು. ತಹಸೀಲ್ದಾರ್ ಶ್ವೇತಾ, ಬಿಜೆಪಿ ರೈತ ಮೋರ್ಚಾ ಉಪಾಧ್ಯಕ್ಷ ಕೆ.ಎಸ್.ನಂಜುಂಡೇಗೌಡ, ಮಾಜಿ ಜಿಪಂ ಅಧ್ಯಕ್ಷ ಎಸ್.ಲಿಂಗರಾಜು, ಪುರಸಭೆ ಅಧ್ಯಕ್ಷೆ ನಿರ್ಮಲಾ, ಉಪಾಧ್ಯಕ್ಷ ಕೃಷ್ಣಪ್ಪ ಸೇರಿದಂತೆ ಇನ್ನಿತರರಿದ್ದರು.


ಇಂದು ದಿಶಾ ಸಭೆ

ಮಂಡ್ಯ, ಜೂ.27– ಸಂಸದೆ ಸುಮಲತಾ ಅಂಬರೀಶ್ ಅಧ್ಯಕ್ಷತೆಯಲ್ಲಿ ಜೂ.28 ರಂದು ಮಧ್ಯಾಹ್ನ 2.30ಕ್ಕೆ ಜಿಪಂ ಕಾವೇರಿ ಸಭಾಂಗಣದಲ್ಲಿ ದಿಶಾ ಸಭೆ ನಡೆಸಲಾಗುವುದು ಎಂದು ಜಿಪಂ ಸಿಇಓ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆಂಪೇಗೌಡರ ದೂರದೃಷ್ಟಿಗೆ ತಲೆಬಾಗಬೇಕು

ಮಂಡ್ಯ, ಜೂ.27– ಬೆಂಗಳೂರು ನಿರ್ಮಾಣದಲ್ಲಿ ಕೆಂಪೇಗೌಡರ ದೂರದೃಷ್ಟಿಗೆ ನಾವೆಲ್ಲ ತಲೆಬಾಗಬೇಕು ಎಂದು ನಗರಸಭಾಧ್ಯಕ್ಷ ಹೆಚ್.ಎಸ್.ಮಂಜು ತಿಳಿಸಿದರು.

ನಗರದ ಶ್ರೀನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾ ಮಂದಿರದಲ್ಲಿ ಜಿಲ್ಲಾಡಳಿತ, ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಸಂಯುಕ್ತಾಶ್ರಯದಲ್ಲಿ ನಡೆದ ನಾಡಪ್ರಭು ಕೆಂಪೇಗೌಡರ ಜಯಂತಿ ಉದ್ಘಾಟಿಸಿ ಮಾತನಾಡಿದಅವರು, ಕೆಂಪೇಗೌಡರ ಆದರ್ಶ, ಆಡಳಿತ, ಕೊಡುಗೆಗಳನ್ನು ಜನರು ಸದಾ ನೆನೆಯಬೇಕು ಎಂದರು.



ಡಿಸಿ ಎಸ್.ಅಶ್ವತಿ ಮಾತನಾಡಿ, ಕೆಂಪೇಗೌಡರು ಪರಿಸರದ ಬಗ್ಗೆ ಹೆಚ್ಚಿನ ಕಾಳಜಿ ಹೊಂದಿದ್ದು, ಕೆರೆಗಳನ್ನು ನಿರ್ಮಾಣ ಮಾಡಿ, ಸಂರಕ್ಷಣೆ ಮಾಡಿದರು. ಉದ್ಯಾನವನ ನಿರ್ಮಾಣ ಮಾಡಿದರು. ಜನರ ಜೀವನಕ್ಕೆ ಬೇಕಿರುವ ರಸ್ತೆ, ಬೀದಿ ದೀಪ ಮತ್ತಿತರ ಮೂಲ ಸೌಕರ್ಯಗಳ ಅಭಿವೃದ್ಧಿ ಜೊತೆಗೆ ಜೀವ ವೈವಿಧ್ಯತೆಯ ಸಮತೋಲನ ಕಾಪಾಡಲು ಕೆರೆ, ಉದ್ಯಾನವನಕ್ಕೆ ಮಹತ್ವ ನೀಡಿದ್ದಾರೆ ಎಂದರು.

ಶಂಕರಗೌಡ ಶಿಕ್ಷಣ ಮಹಾವಿದ್ಯಾಲಯದ ನಿವೃತ್ತ ಪ್ರಾಂಶುಪಾಲ ಎಸ್.ಬಿ.ಶಂಕರಗೌಡ ಮಾತನಾಡಿ, ಆ ಕಾಲಕ್ಕೆ ವಿವಿಧ ವೃತ್ತಿಗಳ ಹೆಸರಿನಲ್ಲಿ 50ಕ್ಕೂ ಹೆಚ್ಚು ಪೇಟೆಗಳನ್ನು ನಿರ್ಮಿಸಿ, ಬೆಂಗಳೂರನ್ನು ವಾಣಿಜ್ಯ ಕೇಂದ್ರವಾಗಿಸಿದರು. ಕೆಂಪೇಗೌಡರು ಧರ್ಮಾಂಬುದಿ ಕೆರೆ, ಕೆಂಪಾಂಬುದಿ ಕೆರೆ, ಹಲಸೂರು ಸೇರಿದಂತೆ ನೂರಾರು ಕೆರೆ, ಕಲ್ಯಾಣಿಗಳನ್ನು ನಿರ್ಮಿಸಿ ಬೆಂಗಳೂರಿನ ಜಲದಾಹ ನೀಗಿಸಿದವರು. ಹಲವು ಐತಿಹಾಸಿಕ ದೇಗುಲಗಳನ್ನು ಸ್ಥಾಪಿಸಿ ಭಕ್ತಿ ಪಾರಮ್ಯ ಮೆರೆದರು ಎಂದರು. ಇದಕ್ಕೂ ಮುನ್ನಾ ಕೆಂಪೇಗೌಡರ ಭಾವಚಿತ್ರ ಮೆರವಣಿಗೆಗೆ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಶಾಸಕ ಎಂ.ಶ್ರೀನಿವಾಸ್ ಚಾಲನೆ ನೀಡಿದರು. ಆದಿಚುಂಚನಗಿರಿ ಕ್ಷೇತ್ರದ ಪುರುಷೋತ್ತಮನಂದ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದರು. ಜಿಪಂ ಸಿಇಓ ದಿವ್ಯಪ್ರಭು, ಎಂಎಲ್‌ಸಿ ಕೆ.ಟಿ.ಶ್ರೀಕಂಠೇಗೌಡ, ಎಸ್ಪಿ ಎನ್.ಯತೀಶ್, ಎಡಿಸಿ ವಿ.ಆರ್.ಶೈಲಜಾ, ಎಸಿ ಆರ್.ಐಶ್ವರ್ಯ, ನಗರಸಭೆ ಆಯುಕ್ತ ಆರ್.ಮಂಜುನಾಥ್, ನಗರಸಭೆ ಉಪಾಧ್ಯಕ್ಷೆ ಇಶ್ರತ್ ಫಾತಿಮಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎನ್.ಉದಯ್ ಕುಮಾರ್, ಮುಖಂಡರಾದ ನಾಗಣ್ಣ ಸೇರಿದಂತೆ ಇತರರಿದ್ದರು.

ರೈತ ಸಹಕಾರಿಗಳ ಅನುಕೂಲಕ್ಕಾಗಿ ಯಶಸ್ವಿನಿ ಯೋಜನೆ ಮತ್ತೆ ಜಾರಿಗೆ ಚಿಂತನೆ

ಸಹಕಾರ ಸಚಿವ ಎಸ್.ಟಿ.ಸೋಮಶೇಖರ್



ಕುಶಾಲನಗರ, ಜೂ.27– ರಾಜ್ಯದಲ್ಲಿ ಸಹಕಾರ ಸಂಘ ಸಂಸ್ಥೆಗಳ ರೈತ ಸದಸ್ಯರ ಅನುಕೂಲಕ್ಕಾಗಿ ಅಕ್ಟೋಬರ್ ತಿಂಗಳಿನಿಂದ ಮತ್ತೆ ಯಶಸ್ವಿನಿ ಯೋಜನೆ ಜಾರಿಗೆ ಚಿಂತಿಸಲಾಗಿದೆ ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಹೇಳಿದರು.

ಪಟ್ಟಣದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವತಿಯಿಂದ ಸೋಮವಾರ ರೈತ ಭವನದಲ್ಲಿ ಏರ್ಪಡಿಸಿದ್ದ ಸಹಕಾರ ಸಂಘದ ಶತಮಾನೋತ್ಸವ ಸಮಾರಂಭ ಹಾಗೂ ನೂತನ ಕಟ್ಟಡದ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಕೇಂದ್ರ ಸರ್ಕಾರದ ಆಯುಷ್ಮಾನ್ ಭಾರತ್ ಮಾದರಿಯಲ್ಲಿ ಕೆಲವು ಮಾರ್ಪಾಡುಗಳೊಂದಿಗೆ ಸುಲಭ ವ್ಯವಸ್ಥೆಯಲ್ಲಿ ಆರೋಗ್ಯ ವಿಮಾ ಯೋಜನೆಯನ್ನು ಜಾರಿಗೆ ತರಲಾಗುವುದು. ರಾಜ್ಯದಲ್ಲಿ ಸುಮಾರು 9 ಲಕ್ಷ ಮಹಿಳಾ ಹಾಲು ಉತ್ಪಾದಕರು ಸೇರಿದಂತೆ ಒಟ್ಟು 26 ಲಕ್ಷ ಹಾಲು ಉತ್ಪಾದಕರಿಗೆ ಸುಗಮವಾಗಿ ಸಾಲ ಸೌಲಭ್ಯ ದೊರೆಯುವಂತಾಗಲು ಅಗತ್ಯ ಕ್ರಮ ವಹಿಸಲಾಗಿದೆ ಎಂದರು.

ರಾಜ್ಯದಲ್ಲಿ 6 ಸಾವಿರ ಕೋಟಿ ರೂ. ಗೂ ಹೆಚ್ಚು ಸಾಲ ಮನ್ನಾ ಮಾಡಲಾಗಿದೆ. ಇನ್ನೂ 31 ಸಾವಿರ ರೈತರ ಸಾಲ ಮನ್ನಾಕ್ಕೆ ಬಾಕಿ ಇದ್ದು, ಈ ಸಂಬಂಧ ಮುಖ್ಯಮಂತ್ರಿ ಅವರ ಗಮನಕ್ಕೆತರಲಾಗಿದೆ ಎಂದು ಸಚಿವರು ಹೇಳಿದರು.

3 ಲಕ್ಷ ಹೊಸ ರೈತರಿಗೆ ಸಾಲ ನೀಡಬೇಕು ಎಂಬುದು ಸರ್ಕಾರದ ಆಶಯವಾಗಿದೆ. ಆ ನಿಟ್ಟಿನಲ್ಲಿ 6,370 ಕೋಟಿ ಸಾಲ ವಿತರಣೆ ಮಾಡುವ ಉದ್ದೇಶದಿಂದ ಮುಖ್ಯಮಂತ್ರಿಗಳು ಬಜೆಟಿನಲ್ಲಿ ಪ್ರಕಟಿಸಿದ್ದಾರೆ. ಸ್ವಸಹಾಯ ಗುಂಪುಗಳಿಗೆ, ಪರಿಶಿಷ್ಟ ಜಾತಿ, ವರ್ಗ ಹಾಗೂ ಇತರರಿಗೆ ಸಾಲ ನೀಡಲಾಗುತ್ತದೆ ಎಂದು ಸಚಿವರು ಹೇಳಿದರು.

ಕೊಡಗು ಜಿಲ್ಲಾ ಉಸ್ತುವಾರಿ ಸಚಿವರೂ ಆದ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಮಾತನಾಡಿ, ಸಹಕಾರ ಸಂಘಗಳು ಸಮಾಜಮುಖಿಯಾಗಿ ಕೃಷಿಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿವೆ ಎಂದರು. ಸಹಕಾರ ಸಂಘಗಳ ಬೆಳವಣಿಗೆಗೆ ಪ್ರತಿಯೊಬ್ಬರೂ ಕೈಜೋಡಿಸಬೇಕು. ಸಹಕಾರ ಸಂಘಗಳಿಂದ ಕೃಷಿಕರಿಗೆ ಬೇಕಾದ ಸಂದರ್ಭದಲ್ಲಿ ಸಾಲ ಪಡೆಯಲು ಅನುಕೂಲವಾಗಿದೆ. ಆ ನಿಟ್ಟಿನಲ್ಲಿ ಸಹಕಾರ ಸಂಘಗಳನ್ನು ಬಲಪಡಿಸಲು ಮುಂದಾಗಬೇಕು ಎಂದರು.

ಶಾಸಕ ಎಂ.ಪಿ.ಅಪ್ಪಚ್ಚುರಂಜನ್ ಮಾತನಾಡಿ, ಸಹಕಾರ ಸಂಘಗಳು ನಿಸ್ವಾರ್ಥದಿಂದ ಕೆಲಸ ಮಾಡಬೇಕು. ಸಹಕಾರ ಕ್ಷೇತ್ರದಲ್ಲಿ ಪ್ರಾಮಾಣಿಕತೆ ಇದ್ದಲ್ಲಿ ಸಹಕಾರ ಸಂಘಗಳನ್ನು ಕಟ್ಟಲು ಸಾಧ್ಯ. ಆ ನಿಟ್ಟಿನಲ್ಲಿ ಪಕ್ಷಾತೀತವಾಗಿ ಸಹಕಾರ ಸಂಘಗಳನ್ನು ಬಲಪಡಿಸಬೇಕು ಎಂದರು. ಡಿಸಿಸಿ ಬ್ಯಾಂಕ್ ಅಧ್ಯಕ್ಷ ಬಾಂಡ್ ಗಣಪತಿ ಮಾತನಾಡಿ, ಜಿಲ್ಲೆಯಲ್ಲಿ 9 ಸಹಕಾರ ಸಂಘಗಳು ಶತಮಾನ ಪೂರೈಸಿದೆ. ಹಾಗೆಯೇ ಜಿಲ್ಲೆಯಲ್ಲಿ 98 ಧವಸ ಭಂಡಾರ ಸಹಕಾರ ಸಂಘಗಳಲ್ಲಿ 8 ಸಂಘಗಳು ಶತಮಾನ ಕಂಡಿವೆ ಎಂದರು.

'ಕುಶಲ ಸಹಕಾರ' ಸ್ಮರಣ ಸಂಚಿಕೆ ಬಿಡುಗಡೆ ಮಾತನಾಡಿದ ಅರಮೇರಿ ಕಳಂಚೇರಿ ಮಠದ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ಸಹಕಾರ ಸಂಘಗಳನ್ನು ಮತ್ತಷ್ಟು ಸದೃಢಗೊಳಿಸುವ ನಿಟ್ಟಿನಲ್ಲಿ ಪ್ರಯತ್ನಿಸಬೇಕು. ಸಹಕಾರ ಸಂಘಗಳು ಅಭಿವೃದ್ಧಿಯಾದಷ್ಟು ಕೃಷಿಕರಿಗೆ ಅನುಕೂಲವಾಗಲಿದೆ. ಆ ನಿಟ್ಟಿನಲ್ಲಿ ಸಹಕಾರ ಸಂಘದ ಸೌಲಭ್ಯಗಳು ಎಲ್ಲರಿಗೂ ದೊರೆಯಬೇಕು ಎಂದರು.

ಕುಶಾಲನಗರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಟಿ.ಆರ್. ಶರವಣ ಕುಮಾರ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಸಹಕಾರ ಸಂಘಗಳನ್ನು ಬಲಪಡಿಸಲು ಶ್ರಮಿಸಲಾಗುತ್ತದೆ ಎಂದರು.

ಸಹಕಾರ ಸಂಘಗಳ ಉಪ ನಿಬಂಧಕ ಎಚ್.ಎನ್.ರಮೇಶ್, ಸಹಾಯಕ ನಿಬಂಧಕ, ಎಂ.ಇ.ಮೋಹನ್, ಉಪಾಧ್ಯಕ್ಷ ವಿ.ಎಸ್. ಆನಂದ್ ಕುಮಾರ್ ಹಾಗೂ ನಿರ್ದೇಶಕರು ಉಪಸ್ಥಿತರಿದ್ದರು.

ಸಂವೇದಿತಾ ಪ್ರಾರ್ಥಿಸಿದರು. ನಂಜುಂಡಸ್ವಾಮಿ ರೈತ ಗೀತೆ ಹಾಡಿದರು. ವಕೀಲ ಆರ್.ಕೆ.ನಾಗೇಂದ್ರ ಬಾಬು ಸ್ವಾಗತಿಸಿದರು. ಯೋಗೇಂದ್ರ ನಾಯಕ್ ಮತ್ತು ಮಂಜುಳ ಆರ್.ಭಟ್ ನಿರೂಪಿಸಿದರು. ಆನಂದ್ ಕುಮಾರ್ ವಂದಿಸಿದರು.

ಮಡಿಕೇರಿಯಲ್ಲಿ ನಾಡಪ್ರಭು ಕೆಂಪೇಗೌಡರ ಜಯಂತಿ



ಮಡಿಕೇರಿ,ಜೂ.27– ಮಹಾನ್ ವ್ಯಕ್ತಿಗಳ ಜಯಂತಿಯನ್ನು ಒಂದು ಜಾತಿ, ವರ್ಗಕ್ಕೆ ಸೀಮಿತವಾಗಿಟ್ಟು ಅವರು ಮಾಡಿದ ಸಾಧನೆಯನ್ನು ಕುಬ್ಜಗೊಳಿಸುವ ಪ್ರಯತ್ನಗಳಾಗಬಾರದು ಎಂದು ವಕೀಲ ಎಂ.ಎ. ನಿರಂಜನ್ ಕಿವಿಮಾತು ಹೇಳಿದ್ದಾರೆ.

ಕೊಡಗು ಗೌಡ ಸಮಾಜಗಳ ಒಕ್ಕೂಟದ ವತಿಯಿಂದ ಎಲ್ಲಾ ಗೌಡ ಸಮಾಜಗಳ ಸಹಕಾರದೊಂದಿಗೆ ನಗರದ ಕೊಡಗು ಗೌಡ ಸಮಾಜದ ಸಭಾಂಗಣದಲ್ಲಿ ನಡೆದ ನಾಡಪ್ರಭು ಕೆಂಪೇಗೌಡರ ಜಯಂತಿಯಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಅವರು ಮಾತನಾಡಿದರು. ಮಹಾನ್ ವ್ಯಕ್ತಿಗಳ ಜಯಂತಿಗಳು ಒಂದು ಜಾತಿಗೆ ಸೀಮಿತವಾಗಬಾರದು. ಎಲ್ಲಾ ಜನಾಂಗದವರು, ಎಲ್ಲಾ ಧರ್ಮೀಯರು ಸೇರಿಕೊಂಡು ಜಿಲ್ಲಾ ಕೇಂದ್ರದ ಮೂಲಕ ನಡೆಯುವ ದೊಡ್ಡ ಕಾರ್ಯಕ್ರಮವಾಗಬೇಕು. ಆಗ ಮಾತ್ರ ಆ ವ್ಯಕ್ತಿಯನ್ನು ಸಮಾಜಕ್ಕೆ ಮಾದರಿ ಪ್ರತಿನಿಧಿಯನ್ನಾಗಿ ಪ್ರೇರೇಪಿಸಲು ಸಾಧ್ಯ ಎಂದರು.

ಯಾವುದೇ ಒಬ್ಬ ವ್ಯಕ್ತಿ ಒಂದು ಸಮುದಾಯದ ನಾಯಕನಾಗಿ ಕಾರ್ಯನಿರ್ವಹಿಸುವುದಿಲ್ಲ. ಅವರ ಕೆಲಸಗಳನ್ನು ನೋಡಿ ಸಮುದಾಯ ಅವರನ್ನು ನಾಯಕನನ್ನಾಗಿ ಮಾಡುತ್ತದೆ. ಈ ಸಾಲಿಗೆ ಕೆಂಪೇಗೌಡರು ಸೇರುತ್ತಾರೆ. ಇವರು ಎಲ್ಲಾ ಜಾತಿ, ಧರ್ಮದ ಜನರಿಗೆ ದಾರಿದೀಪವಾಗಿ ಕಾರ್ಯನಿರ್ವಹಿಸಿದ್ದಾರೆ. ಮುಂದಿನ ದಿನಗಳಲ್ಲಿ ಎಲ್ಲಾ ಜಾತಿ, ಜನಾಂಗ ಬಾಂಧವರು ಸೇರಿಕೊಂಡು ಇವರ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಿದರೆ ನಿಜವಾದ ಗೌರವ ನೀಡಿದಂತಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕೊಡಗು ಗೌಡ ಸಮಾಜಗಳ ಒಕ್ಕೂಟದ ಅಧ್ಯಕ್ಷ ಸೂರ್ತಲೆ ಸೋಮಣ್ಣ, 16ನೇ ಶತಮಾನದಲ್ಲಿ ಜನಿಸಿದ ನಾಡಪ್ರಭು ಕೆಂಪೇಗೌಡರು ಯಲಹಂಕ ಪ್ರಾಂತ್ಯದ ರಾಜನಾಗಿ ಕಾರ್ಯ ನಿರ್ವಹಿಸಿದ್ದರು. ತನ್ನ ಜನತೆಗೆ ಒಂದು ರಾಜಧಾನಿಯ ಅಗತ್ಯತೆಯನ್ನು ಕಂಡು ಅತ್ಯಂತ ದುರ್ಗಮ ಅರಣ್ಯದಿಂದ ಕೂಡಿದ ಪ್ರದೇಶವನ್ನು ರಾಜಧಾನಿಯಾಗಿ ಆಯ್ಕೆ ಮಾಡಿಕೊಂಡರು. ನಂತರ ಶತಶತಮಾನಗಳ ದೂರದೃಷ್ಟಿ ಇರಿಸಿ ಎಲ್ಲಾ ಜನಾಂಗಗಳಿಗೆ ಪ್ರಾತಿನಿಧ್ಯ ನೀಡಿದರು ಎಂದರು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಮಡಿಕೇರಿ ಗೌಡ ಸಮಾಜದ ಅಧ್ಯಕ್ಷ ಪೇರಿಯನ ಜಯಾನಂದ, ಪ್ರತಿಯೊಂದು ಜನಾಂಗಕ್ಕೂ ಸಮಾನ ಮಾನ್ಯತೆಯನ್ನು ನೀಡಿ ಎಲ್ಲರಿಗೂ ಸಹಾಯಹಸ್ತವನ್ನು ನೀಡಿದ ಕೆಂಪೇಗೌಡರು, ಬೆಂಗಳೂರನ್ನು ಜಗದ್ವಿಖ್ಯಾತಿಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕೊಡಗು ವಿದ್ಯಾ ಸಂಘದ ಅಧ್ಯಕ್ಷ ಕೊಡೂರು ರಮೇಶ್ ಜೋಯಪ್ಪ ಮಾತನಾಡಿ, ಒಕ್ಕಲಿಗರ ಹಿರಿಮೆಯನ್ನು ನಾಡಪ್ರಭು ಕೆಂಪೇಗೌಡರು ಎತ್ತಿ ಹಿಡಿದಿದ್ದಾರೆ. ಈ ಬಾರಿ ಸೋಮವಾರಪೇಟೆಯಲ್ಲಿ ಮಾತ್ರ ಜಿಲ್ಲಾಡಳಿತದಿಂದ ಕೆಂಪೇಗೌಡ ಜಯಂತಿಯನ್ನು ಆಚರಿಸಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ಜಿಲ್ಲಾ ಕೇಂದ್ರ ಮಡಿಕೇರಿಯಲ್ಲಿ ನಡೆಯುವಂತಾಗಬೇಕು. ಆ ನಿಟ್ಟಿನಲ್ಲಿ ಎಲ್ಲಾ ಗೌಡ ಸಮಾಜಗಳು ಸಹಕಾರ ನೀಡಬೇಕು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಎಲ್ಲಾ ಗೌಡ ಸಮಾಜಗಳ ಅಧ್ಯಕ್ಷರು, ಸದಸ್ಯರು, ಮಹಿಳಾ ಸದಸ್ಯರು ಉಪಸ್ಥಿತರಿದ್ದರು.

ಅಗ್ನಿಪಥ್ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ



ಮಡಿಕೇರಿ,ಜೂ.27–ಕೇಂದ್ರ ಸರಕಾರ ಜಾರಿಗೆ ತರಲು ಹೊರಟಿರುವ ಅಗ್ನಿಪಥ್ ಯೋಜನೆಯನ್ನು ತಕ್ಷಣ ಕೈಬಿಡುವಂತೆ ಒತ್ತಾಯಿಸಿ ಕೊಡಗು ಜಿಲ್ಲಾ ಯುವ ಕಾಂಗ್ರೆಸ್ ಹಾಗೂ ಎನ್‌ಎಸ್‌ಯುಐ ಮಡಿಕೇರಿಯಲ್ಲಿ ಪ್ರತಿಭಟನೆ ನಡೆಸಿತು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಎದುರು ಜಮಾಯಿಸಿದ ಕಾಂಗ್ರೆಸ್ ಪ್ರಮುಖರು ಹಾಗೂ ಕಾರ್ಯಕರ್ತರು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಅಸಮಾಧಾನ ವ್ಯಕ್ತಪಡಿಸಿದರು.

ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಮಿಥುನ್ ಗೌಡ ಮಾತನಾಡಿ, ಕೇಂದ್ರ ಸರಕಾರ 8 ವರ್ಷಗಳ ಹಿಂದೆ ಘೋಷಿಸಿದಂತೆ ವಾರ್ಷಿಕ 2 ಕೋಟಿ ಉದ್ಯೋಗ ಸೃಷ್ಟಿ ಮಾಡುವಲ್ಲಿ ವಿಫಲವಾಗಿದೆ. ಇದೀಗ ಮುಂದಿನ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಅಗ್ನಿಪಥ್ ಯೋಜನೆ ಘೋಷಿಸಿದ್ದು, ಈ ಯೋಜನೆಯಡಿ ಸೇನೆಗೆ ಸೇರುವ ಯುವಕರು ಕೇವಲ 4 ವರ್ಷ ಸೇವೆ ಸಲ್ಲಿಸಿ ಮರಳಬೇಕಾಗುತ್ತದೆ. ಬಳಿಕ ಅವರೆಲ್ಲರಿಗೂ ಉದ್ಯೋಗ ಇಲ್ಲದೆ, ಪಿಂಚಣಿಯೂ ಇಲ್ಲದೆ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಲಿದೆ ಎಂದು ಆರೋಪಿಸಿದರು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ತೀತಿರ ಧರ್ಮಜ ಉತ್ತಮ ಮಾತನಾಡಿ, ಅಗ್ನಿಪಥ್ ಯೋಜನೆಯನ್ನು ಘೋಷಿಸಿದ ಮರುದಿನವೇ ದೇಶದ ಅನೇಕ ಭಾಗಗಳಲ್ಲಿ ಸರಕಾರದ ವಿರುದ್ಧ ಪ್ರತಿಭಟನೆಗಳು ನಡೆದಿವೆ, ಆದರೂ ಸರಕಾರ ಎಚ್ಚೆತ್ತುಕೊಂಡಿಲ್ಲ. ಅಗ್ನಿಪಥ್ ಯೋಜನೆಯಿಂದ ಹೊರ ಬರುವ ಶೇ.75ರಷ್ಟು ಮಂದಿ ಶಿಕ್ಷಣ ಮತ್ತು ಉದ್ಯೋಗವನ್ನು ಕಳೆದುಕೊಳ್ಳಲಿದ್ದು, ನಂತರದ ಭವಿಷ್ಯವನ್ನು ಸರಕಾರ ಸ್ಪಷ್ಟವಾಗಿ ರೂಪಿಸಿಲ್ಲ. ಕೊಡಗಿನ ಯುವ ಸಮೂಹ ಈ ಬಗ್ಗೆ ಎಚ್ಚರಿಕೆಯಿಂದಿರಬೇಕೆಂದು ಕರೆ ನೀಡಿದರು.

ಕಾಂಗ್ರೆಸ್ ಯುವ ಮುಖಂಡ ಡಾ.ಮಂಥರ್‌ಗೌಡ ಮಾತನಾಡಿ, ಅಗ್ನಿಪಥ್ ಯೋಜನೆ ಯುವಕರಿಗೆ ಉದ್ಯೋಗ ನೀಡುವ ಸ್ಕೀಂ ಅಲ್ಲ, ಬದಲಾಗಿ ಸ್ಕ್ಯಾಮ್ ಎಂದು ಟೀಕಿಸಿದರು. ಅಗ್ನಿಪಥ್ ಯೋಜನೆಯಿಂದ ಉದ್ಯೋಗ ಗ್ಯಾರಂಟಿ ಇಲ್ಲ, ನಂತರ ದಿನಗಳಲ್ಲಿ ಕೆಲಸ ಇಲ್ಲ, ಜೊತೆಗೆ ಶಿಕ್ಷಣವೂ ಇಲ್ಲದಂತಾಗುತ್ತದೆ ಎಂದು ಆರೋಪಿಸಿದರು.

ಕೆಪಿಸಿಸಿಯ ಮಾಧ್ಯಮ ವಕ್ತಾರ ಟಿ.ಪಿ.ರಮೇಶ್, ಅಲ್ಪಸಂಖ್ಯಾತರ ಘಟಕದ ಜಿಲ್ಲಾಧ್ಯಕ್ಷ ಎಂ.ಎ.ಉಸ್ಮಾನ್, ಎನ್‌ಎಸ್‌ಯುಐ ಅಧ್ಯಕ್ಷ ರೋಶನ್ ಗಣಪತಿ, ಡಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್.ಐ.ಮುನೀರ್ ಅಹಮ್ಮದ್, ಗೌರವ ಕಾರ್ಯದರ್ಶಿ ವಿ.ಪಿ.ಸುರೇಶ್, ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಸುರಯ್ಯ ಅಬ್ರಾರ್, ನಗರಾಧ್ಯಕ್ಷೆ ಫ್ಯಾನ್ಸಿ ಪಾರ್ವತಿ, ವಕ್ಫ್ ಸಲಹಾ ಸಮಿತಿ ಮಾಜಿ ಅಧ್ಯಕ್ಷ ಕೆ.ಎ.ಯಾಕುಬ್, ವಕ್ತಾರ ತೆನ್ನೀರ ಮೈನಾ, ಸಮಾಜಿಕ ಜಾಲತಾಣದ ಜಿಲ್ಲಾಧ್ಯಕ್ಷ ಸೂರಜ್ ಹೊಸೂರು, ಉಪಾಧ್ಯಕ್ಷ ಚಂದ್ರಶೇಖರ್, ಎಸ್.ಸಿ.ಘಟಕದ ಅಧ್ಯಕ್ಷ ಮುದ್ದುರಾಜ್, ಪ್ರಮುಖರಾದ ನೆರವಂಡ ಉಮೇಶ್, ಅಬ್ದುಲ್ ರಜಾಕ್, ಪ್ರಕಾಶ್ ಆಚಾರ್ಯ, ಬ್ಲಾಕ್ ಅಧ್ಯಕ್ಷರುಗಳು, ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷರು, ಎನ್‌ಎಸ್‌ಯುಐ ಮತ್ತು ಡಿಸಿಸಿ ಪದಾಧಿಕಾರಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಕುಶಾಲನಗರ ಪಪಂ ಕಚೇರಿ ಕಟ್ಟಡ ಕಾಮಗಾರಿಗೆ ಚಾಲನೆ



ಕುಶಾಲನಗರ, ಜೂ.27– ಪಟ್ಟಣ ಪಂಚಾಯಿತಿ ವತಿಯಿಂದ 2.87 ಕೋಟಿ ರೂ. ವೆಚ್ಚದಲ್ಲಿ ಕೈಗೊಂಡಿರುವ ಪ.ಪಂ ಕಚೇರಿಯ ಮುಂದುವರಿದ ಕಟ್ಟಡ ಕಾಮಗಾರಿಗೆ ಶಾಸಕ ಎಂ.ಪಿ.ಅಪ್ಪಚ್ಚುರಂಜನ್ ಸೋಮವಾರ ಚಾಲನೆ ನೀಡಿದರು.

ಇಲ್ಲಿನ ಹಳೆಯ ಕಚೇರಿ ಜಾಗದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಹಾರಂಗಿಯಿಂದ ಕುಶಾಲನಗರ ಪಟ್ಟಣಕ್ಕೆ 38 ಕೋಟಿ ರೂ. ವೆಚ್ಚದ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸುವ ಯೋಜನೆಗೆ ಈಗಾಗಲೇ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಸಧ್ಯದಲ್ಲಿಯೇ ಅನುಮೋದನೆ ದೊರೆಯಲಿದೆ. ಪಟ್ಟಣದಲ್ಲಿ ಕೈಗೊಂಡಿರುವ ಒಳಚರಂಡಿ ಯೋಜನೆಯನ್ನು ಮುಂದಿನ ಆರು ತಿಂಗಳಲ್ಲಿ ಪೂರ್ಣಗೊಳಿಸುವಂತೆ ಜಲಮಂಡಳಿ ಅಧಿಕಾರಿಗಳ ಸಭೆ ನಡೆಸಿ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

ಕುಶಾಲನಗರ ಪುರಸಭೆ ರಚನೆಗೆ ಮುಳ್ಳುಸೋಗೆ ಗ್ರಾಮ ಪಂಚಾಯಿತಿ ಆಕ್ಷೇಪಣೆ ಸಲ್ಲಿಸಿದ ಹಿನ್ನೆಲೆಯಲ್ಲಿ ತಡವಾಗಿದೆ. ಆದ್ದರಿಂದ ಮುಳ್ಳುಸೋಗೆಯ ಜನತಾ ಕಾಲೋನಿಯನ್ನು ಮಾತ್ರ ಪುರಸಭೆ ವ್ಯಾಪ್ತಿಗೆ ಸೇರ್ಪಡೆಗೊಳಿಸಲು ಚಿಂತನೆ ನಡೆಸಲಾಗಿದೆ. ವಿದ್ಯಾರ್ಥಿಗಳು ಗ್ರಾಮೀಣ ಕೃಪಾಂಕದಿಂದ ವಂಚಿತರಾಗಬಾರದು ಎಂಬ ಉದ್ದೇಶದಿಂದ ಪುರಸಭೆ ವ್ಯಾಪ್ತಿಯಿಂದ ಪಾಲಿಟೆಕ್ನಿಕ್, ಎಂಜಿನಿಯರಿಂಗ್ ಕಾಲೇಜುಗಳನ್ನು ಕೈಬಿಡಲು ತೀರ್ಮಾನಿಸಲಾಗಿದೆ ಎಂದರು.

ಪಟ್ಟಣ ಪಂಚಾಯಿತಿ ಅಧ್ಯಕ್ಷ ಬಿ. ಜೈವರ್ಧನ್ ಮಾತನಾಡಿ, ಪ.ಪಂ. ಕಚೇರಿಯ ಮುಂದುವರೆದ ಕಟ್ಟಡ ಕಾಮಗಾರಿಗೆ ಇಂದು ಚಾಲನೆ ನೀಡಲಾಗಿದ್ದು, ಮುಂದಿನ ಆರು ತಿಂಗಳ ಒಳಗೆ ಕಾಮಗಾರಿ ಪೂರ್ಣಗೊಳಿಸಲು ಸೂಚನೆ ನೀಡಲಾಗಿದೆ ಎಂದರು.

ಈ ಸಂದರ್ಭ ಪಟ್ಟಣ ಪಂಚಾಯಿತಿ ಉಪಾಧ್ಯಕ್ಷೆ ಸುರೇಯಾಬಾನು, ಸದಸ್ಯರಾದ ಡಿ.ಕೆ. ತಿಮ್ಮಪ್ಪ, ಬಿ.ಅಮೃತ್ ರಾಜ್, ಸುರೇಶ್, ಜಗದೀಶ್, ಜಯಲಕ್ಷ್ಮಿ, ರೂಪ, ಪ್ರಮೋದ್ ಮುತ್ತಪ್ಪ, ಎಂ.ವಿ. ನಾರಾಯಣ ಮುಖಂಡರಾದ ಪುಂಡರೀಕಾಕ್ಷ, ಎಂ.ಎಸ್.ಕುಮಾರಪ್ಪ, ಪ್ರಭಾರ ಮುಖ್ಯಾಧಿಕಾರಿ ಉದಯಕುಮಾರ್, ಗುತ್ತಿಗೆದಾರ ಚಂದ್ರಶೇಖರ್ ಹಾಗೂ ಸಿಬ್ಬಂದಿ ಇದ್ದರು.

ಕೆಂಪೇಗೌಡರ ಹೆಸರಲ್ಲಿ ಪ್ರತಿ ಗ್ರಾಪಂನಲ್ಲೂ ಕೆರೆ ಅಭಿವೃದ್ಧಿ



ಯಳಂದೂರು, ಜೂ.27(ವಿ.ನಾಗರಾಜು)– ನಾಡಪ್ರಭು ಕೆಂಪೇಗೌಡರ ನೆನಪಿನಲ್ಲಿ ಅವರು ಹಾಕಿಕೊಟ್ಟ ಅಭಿವೃದ್ಧಿ ಹಾದಿಯಲ್ಲೇ ನಾವು ಕೂಡ ಸಾಗಬೇಕಿದ್ದು, ತಾಲೂಕಿನ 12 ಗ್ರಾಪಂಗಳಲ್ಲೂ ಒಂದೊಂದು ಕೆರೆ ನಿರ್ಮಾಣ ಅಥವಾ ಅಭಿವೃದ್ಧಿಪಡಿಸಿ ಅದಕ್ಕೆ ಕೆಂಪೇಗೌಡರ ಹೆಸರನ್ನಿಡುವ ಕೆಲಸಕ್ಕೆ ನನ್ನೊಂದಿಗೆ ಎಲ್ಲರೂ ಕೈಜೋಡಿಸಬೇಕು ಎಂದು ಶಾಸಕ ಎನ್.ಮಹೇಶ್ ಮನವಿ ನೀಡಿದರು.

ಪಟ್ಟಣದ ತಾಲೂಕು ಕಚೇರಿ ಮುಂಭಾಗ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಹಮ್ಮಿಕೊಂಡಿದ್ದ ನಾಡಪ್ರಭು ಕೆಂಪೇಗೌಡರ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಕೆಂಪೇಗೌಡರು ಬೆಂಗಳೂರು ನಗರದ ನಿರ್ಮಾತರಾಗಿದ್ದಾರೆ. ಇವರ ಕಾಲದಲ್ಲಿ ಬೆಂಗಳೂರಿನಲ್ಲಿ ಒಟ್ಟು 3 ಸಾವಿರ ಕೆರೆಗಳು ನಿರ್ಮಾಣಗೊಂಡಿದ್ದವು. ಆದರೆ ಇದನ್ನು ಇಂದು ನೋಡಲು ಸಾಧ್ಯವಾಗವುದಿಲ್ಲ ಎಂದು ವಿಷಾದಿಸಿದರಲ್ಲದೆ, ಕೆಂಪೇಗೌಡರ ಆದರ್ಶ ಪಾಲಿಸುವ ನಿಟ್ಟಿನಲ್ಲಿ ಯಳಂದೂರು ತಾಲೂಕಿನ 12 ಗ್ರಾಪಂಗಳಲ್ಲೂ ಒಂದೊಂದು ಕೆರೆ ನಿರ್ಮಿಸಲು ಹಾಗೂ ಅದಕ್ಕೆ ಕೆಂಪೇಗೌಡರ ಹೆಸರನ್ನಿಡಲು ಉತ್ಸುಕನಾಗಿದ್ದು, ಸಂಬಂಧಪಟ್ಟ ಅಧಿಕಾರಿಗಳು, ಸ್ಥಳೀಯರ ಸಹಕಾರ ನೀಡಬೇಕು ಎಂದು ಕೋರಿದರು.

ಮುಖ್ಯ ಭಾಷಣಕಾರ ಡಾ.ಬಿ.ಸಿ.ವಿಜಯ್ ಕುಮಾರ್, ಮುಖಂಡ ಬಿ.ವಿ.ರಾಜುಗೌಡ ತಹಸೀಲ್ದಾರ್ ಆನಂದಪ್ಪನಾಯಕ್ ಮಾತನಾಡಿದರು. ಪಪಂ ಅಧ್ಯಕ್ಷೆ ಆರ್. ಪ್ರಭಾವತಿ ರಾಜಶೇಖರ್, ಉಪಾಧ್ಯಕ್ಷೆ ಲಕ್ಷ್ಮಿ ಮಲ್ಲು ಸದಸ್ಯರಾದ ಮಹೇಶ್, ವೈ.ಜಿ.ರಂಗನಾಥ, ಮಂಜು, ಬಿ.ರವಿ, ಶಾಂತಮ್ಮ ನಾಮನಿರ್ದೇಶಿತ ಸದಸ್ಯರಾದ ರಘು, ಮಹೇಶ್, ನಿಂಗರಾಜು ಇಓ ಉಮೇಶ್, ಬಿಇಓ ಕೆ. ಕಾಂತರಾಜು, ಒಕ್ಕಲಿಗರ ಸಂಘದ ಅಧ್ಯಕ್ಷ ಕೆ.ರಾಜುಗೌಡ ಗ್ರಾಪಂ ಅಧ್ಯಕ್ಷ ರಘು, ಸದಸ್ಯ ಡಿ.ಸಿ.ಬಾಬು, ಎ.ಕುಮಾರ್, ಕೆ.ಪಿ.ಪ್ರಕಾಶ್. ಚಿಕ್ಕಲಿಂಗೇಗೌಡ, ಡೈರಿ ಬಸವರಾಜು ಅನೇಕರಿದ್ದರು.

ನಾಡಪ್ರಭು ಕೆಂಪೇಗೌಡರ ಕೊಡುಗೆ ಸ್ಮರಣೀಯ

ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ.ರಾಮಚಂದ್ರ

ಚಾಮರಾಜನಗರ, ಜೂ.27–ವಿಶ್ವ ಮಟ್ಟದಲ್ಲಿ ಗಮನ ಸೆಳೆದಿರುವ ರಾಜ್ಯದ ರಾಜಧಾನಿ ಬೆಂಗಳೂರನ್ನು ದೂರದೃಷ್ಟಿಯಿಂದ ಅತ್ಯಂತ ಸುವ್ಯವಸ್ಥಿತವಾಗಿ ನಿರ್ಮಿಸಿದ ನಾಡಪ್ರಭು ಕೆಂಪೇಗೌಡರ ಕೊಡುಗೆ ಸ್ಮರಣೀಯ ಎಂದು ಕೇಂದ್ರ ಪರಿಹಾರ ಸಮಿತಿಯ ಅಧ್ಯಕ್ಷ ಎಂ.ರಾಮಚಂದ್ರ ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದ ಜೆ.ಎಚ್. ಪಟೇಲ್ ಸಭಾಂಗಣದಲ್ಲಿಂದು ಜಿಲ್ಲಾಡಳಿತ, ಜಿಪಂ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಹಮ್ಮಿಕೊಂಡಿದ್ದ ನಾಡಪ್ರಭು ಕೆಂಪೇಗೌಡರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕೆಂಪೇಗೌಡರ ಹೆಸರು ಕೇಳದವರೇ ಇಲ್ಲ. ಬೆಂಗಳೂರು ಎಂದಾಕ್ಷಣ ಪ್ರತಿಯೊಬ್ಬರಿಗೂ ಕೆಂಪೇಗೌಡರ ಹೆಸರು ನೆನಪಾಗುತ್ತದೆ. ಜಾಗತಿಕ ಮಟ್ಟದಲ್ಲಿ ದೊಡ್ಡ ಸಾಧನೆ ಮಾಡಿರುವ ಬೆಂಗಳೂರನ್ನು ಅಂದೇ ತಮ್ಮ ದೂರ ದೃಷ್ಟಿಯಿಂದ ವೇಗವಾಗಿ ಅಭಿವೃದ್ಧಿ ಹೊಂದಿದ ನಗರವನ್ನಾಗಿ ಕಟ್ಟಿದ ಕೀರ್ತಿ ಕೆಂಪೇಗೌಡರದ್ದಾಗಿದೆ ಎಂದರು.



ಚಾ.ನಗರದ ಜಿಲ್ಲಾಡಳಿತ ಭವನದ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ನಾಡಪ್ರಭು ಕೆಂಪೇಗೌಡರ ಜಯಂತಿ ಕಾರ್ಯಕ್ರಮವನ್ನು ಕೇಂದ್ರ ಪರಿಹಾರ ಸಮಿತಿಯ ಅಧ್ಯಕ್ಷ ಎಂ.ರಾಮಚಂದ್ರ ಉದ್ಘಾಟಿಸಿದರು.

ಪ್ರಜೆಗಳ ಹಿತದೃಷ್ಟಿಯಿಂದ ಕೆಂಪೇಗೌಡರು ಮಾಡಿದ ಕಾರ್ಯಗಳು ಇಂದಿಗೂ ಬೆಂಗಳೂರಿನಲ್ಲಿ ಕಾಣಬಹುದಾಗಿದೆ. ಕೆರೆ–ಕಟ್ಟೆಗಳು, ದೇವಾಲಯಗಳು ಸೇರಿದಂತೆ ಹಲವಾರು ಪ್ರಗತಿ ಕೆಲಸಗಳು ಇಂದೂ ಸಹ ನಮ್ಮ ಕಣ್ಣ ಮುಂದಿದೆ ಇಂತಹ ಸ್ಮರಣೀಯ ಕಾರ್ಯಗಳನ್ನು ಮಾಡಿದ ಕೆಂಪೇಗೌಡರ ಜಯಂತಿಯನ್ನು ರಾಜ್ಯದೆಲ್ಲೆಡೆ ಆಚರಿಸಲಾಗುತ್ತಿದೆ. ಪ್ರತಿಯೊಬ್ಬರೂ ಸಾಧಕರ ಆದರ್ಶಗಳನ್ನು ಅಳವಡಿಸಿಕೊಂಡಾಗ ಜಯಂತಿ ಆಚರಣೆಗೆ ಅರ್ಥ ಬರುತ್ತದೆ ಎಂದು ರಾಮಚಂದ್ರ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಪಿ.ಶಿವಕುಮಾರ್ ಮಾತನಾಡಿ, ನಾಡಿನ ಬಗ್ಗೆ ಅಪಾರ ಕಾಳಜಿ ಹೊಂದಿದ್ದ ಕೆಂಪೇಗೌಡರು ಸಾರ್ವಕಾಲಿಕವಾಗಿ ಉಳಿಯುವಂತೆ ಬೆಂಗಳೂರು ನಗರವನ್ನು ಅಂದೇ ಅಚ್ಚುಕಟ್ಟಾಗಿ ರೂಪಿಸಿದರು. ನಾಡಿನ ಅಭಿವೃದ್ಧಿಗೆ ಪೂರಕ ಹಾಗೂ ಎಲ್ಲಾ ವರ್ಗದವರಿಗೆ ಅವಕಾಶ ನೀಡುವ ನಿಟ್ಟಿನಲ್ಲಿ ಬೆಂಗಳೂರು ನಿರ್ಮಿಸಿದರು ಎಂದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಮುಖ್ಯಸ್ಥೆ ಡಾ.ಆರ್.ಎಚ್.ಪವಿತ್ರಾ ಮುಖ್ಯ ಭಾಷಣ ಮಾಡಿದರು.

ನಗರಸಭಾ ಅಧ್ಯಕ್ಷೆ ಸಿ.ಎಂ.ಆಶಾ ನಟರಾಜು ಮಾತನಾಡಿದರು. ಎಡಿಸಿ ಎಸ್.ಕಾತ್ಯಾಯಿನಿದೇವಿ, ಎಎಸ್ಪಿ ಕೆ.ಎಸ್.ಸುಂದರ್ ರಾಜ್, ತಹಸೀಲ್ದಾರ್ ಬಸವರಾಜು, ಜಿಪಂ ಲೆಕ್ಕಾಧಿಕಾರಿ ಹೆಚ್.ಎಸ್. ಗಂಗಾಧರ್, ಮುಖಂಡರಾದ ಚಿನ್ನಿಮುತ್ತು, ರಾಜುಗೌಡ, ಚಾ.ರಂ.ಶ್ರೀನಿವಾಸಗೌಡ, ಮಣಿ, ರವಿಗೌಡ, ಮಹೇಶ್‌ಗೌಡ, ನಾಗೇಂದ್ರ ಮತ್ತಿತರರು ಕಾರ್ಯಕ್ರಮದಲ್ಲಿದ್ದರು.

ಮೆಗಾ ಲೋಕ್‌ಅದಾಲತ್‌ನಲ್ಲಿ 8,441 ಪ್ರಕರಣ ಇತ್ಯರ್ಥ

ಜಿಲ್ಲಾ ನ್ಯಾಯಾಧೀಶೆ ಬಿ.ಎಸ್.ಭಾರತಿ ಮಾಹಿತಿ



ಚಾಮರಾಜನಗರ, ಜೂ.27–ಸರ್ವರಿಗೂ ನ್ಯಾಯ ಎಂಬ ಪರಿಕಲ್ಪನೆಯಡಿ ಶೀಘ್ರ ಹಾಗೂ ತ್ವರಿತವಾಗಿ ಪ್ರಕರಣವನ್ನು ಇತ್ಯರ್ಥ ಪಡಿಸುವ ಉದ್ದೇಶದೊಂದಿಗೆ ಜೂ.25ರ ಶನಿವಾರದಂದು ನಡೆದ ಮೆಗಾ ಲೋಕ್ ಅದಾಲತ್‌ನಲ್ಲಿ ಒಟ್ಟು 8,441 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ.

ನಗರದ ಜಿಲ್ಲಾ ನ್ಯಾಯಾಲಯ ಆವರಣದಲ್ಲಿರುವ ವ್ಯಾಜ್ಯ ಪೂರ್ವ ಪರಿಹಾರ ಕೇಂದ್ರದಲ್ಲಿಂದು ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಪ್ರದಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಬಿ.ಎಸ್.ಭಾರತಿ ಮಾಹಿತಿ ನೀಡಿದರು.

ಮೆಗಾ ಲೋಕ್ ಅದಾಲತ್‌ನಲ್ಲಿ ಜಿಲ್ಲೆಯ ವಿವಿಧ ನ್ಯಾಯಾಲಯಗಳಲ್ಲಿದ್ದ 2,045 ಪ್ರಕರಣಗಳು ಇತ್ಯರ್ಥವಾಗಿವೆ. ಈ ಪೈಕಿ 160 ಸಿವಿಲ್ ಪ್ರಕರಣಗಳು, 1,885 ಕ್ರಿಮಿನಲ್ ಪ್ರಕರಣಗಳಾಗಿದ್ದು, 6,396 ವ್ಯಾಜ್ಯ ಪೂರ್ವ ಪ್ರಕರಣಗಳನ್ನು ಸಹ ಇತ್ಯರ್ಥ ಪಡಿಸಲಾಗಿದೆ. ಲೋಕ್ ಅದಾಲತ್ ನಲ್ಲಿ ಹೆಚ್ಚಿನ ಪ್ರಕರಣಗಳು ವಿಲೇವಾರಿಯಾಗಿರುವುದರಿಂದ ಜನ ಸಾಮಾನ್ಯರಿಗೆ ಅನುಕೂಲವಾಗಿದೆ. ಅಲ್ಲದೆ ನ್ಯಾಯಾಲಯಗಳ ಮೇಲಿನ ಪ್ರಕರಣದ ಹೊರೆ ತಗ್ಗಿದೆ ಎಂದು ಜಿಲ್ಲಾ ನ್ಯಾಯಾಧೀಶರು ತಿಳಿಸಿದರು.

ಮೋಟಾರ್ ಅಪಘಾತ ಪರಿಹಾರ, ವಿದ್ಯುತ್, ನೀರಿನ ಶುಲ್ಕ, ಭೂ ಸ್ವಾಧೀನ, ವೇತನ ಭತ್ಯೆ, ಪಿಂಚಣಿ, ಸಾರ್ವಜನಿಕ ಉಪಯುಕ್ತತೆ ಸೇವೆಗಳು, ರಾಜೀ ಯೋಗ್ಯ, ಸಿವಿಲ್ ಮತ್ತು ಇತರೆ ಪ್ರಕರಣಗಳು, ವಿವಾಹ ವಿಚ್ಛೇದನ ಹೊರತುಪಡಿಸಿದ ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥ ಪಡಿಸಲಾಗಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ.ಶ್ರೀಧರ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್, ಪ್ರಧಾನ ಕಾರ್ಯದರ್ಶಿ ವಿರೂಪಾಕ್ಷ ಸುದ್ದಿಗೋಷ್ಠಿಯಲ್ಲಿದ್ದರು.

ಅಗ್ನಿಪಥ್ ಯೋಜನೆ ವಿರೋಧಿಸಿ ಕಾಂಗ್ರೆಸ್ ಸತ್ಯಾಗ್ರಹ



ಗುಂಡ್ಲುಪೇಟೆ, ಜೂ.27(ಸೋಮ್.ಜಿ)– ಕೇಂದ್ರ ಸರ್ಕಾರದ ಅಗ್ನಿಪಥ್ ಯೋಜನೆ ವಿರೋಧಿಸಿ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಪಟ್ಟಣದ ತಾಲೂಕು ಕಚೇರಿ ಎದುರು ಸೋಮವಾರ ಶಾಂತಿಯುತ ಸತ್ಯಾಗ್ರಹ ನಡೆಸಿದರು.

ಕಾಂಗ್ರೆಸ್ ಕಚೇರಿಯಿಂದ ಮುಖಂಡ ಹೆಚ್.ಎಂ.ಗಣೇಶ್‌ಪ್ರಸಾದ್ ಮತ್ತು ಹೆಚ್.ಎಂ. ನಂಜುಂಡಪ್ರಸಾದ್ ನೇತೃತ್ವದಲ್ಲಿ ಪ್ರತಿಭಟನಾ ಮೆರವಣಿಗೆ ಹೊರಟ ಮುಖಂಡರು ಮತ್ತು ಕಾರ್ಯಕರ್ತರು, ತಾಲೂಕು ಕಚೇರಿ ಮುಂಭಾಗದಲ್ಲಿ ಸಮಾವೇಶಗೊಂಡು ಕೇಂದ್ರ ಸರ್ಕಾರದ ಅಗ್ನಿಪಥ್ ಯೋಜನೆ ಮತ್ತು ಬಿಜೆಪಿ ವಿರುದ್ಧ ಘೋಷಣೆ ಕೂಗಿದರು.

ಮುಖಂಡ ಹೆಚ್.ಎಂ.ಗಣೇಶ್ ಪ್ರಸಾದ್ ಮಾತನಾಡಿ, ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಅಗ್ನಿಪಥ್ ಎಂಬ ಸೇನೆಯ ನೇಮಕಾತಿ ವಿಧಾನವು ಅವೈಜ್ಞಾನಿಕವಾಗಿದ್ದು ಸೇನೆಯಲ್ಲಿ ಹಲವಾರು ವರ್ಷಗಳ ಸೇವೆ ಸಲ್ಲಿಸುತ್ತಿದ್ದ ಯುವಕರಿಗೆ ಕೇವಲ 4 ವರ್ಷಕ್ಕೆ ಸೀಮಿತಗೊಳಿಸಿ ಯಾವುದೇ ಭದ್ರತೆಯೂ ಇಲ್ಲದಂತೆ ಮಾಡಿರುವುದು ಸರಿಯಲ್ಲ ಹಾಗಾಗಿ ಈ ಹೊಸ ಯೋಜನೆಗೆ ಕಾಂಗ್ರೆಸ್‌ನಿಂದ ಸಂಪೂರ್ಣ ವಿರೋಧವಿದ್ದು, ಹಿಂದಿನಂತೆಯೇ ಸೇನಾ ನೇಮಕಾತಿ ಮುಂದುವರೆಸಬೇಕು. ತಪ್ಪಿದಲ್ಲಿ ಕಾಂಗ್ರೆಸ್ ನಿರಂತರವಾಗಿ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು.

ಬಳಿಕ ಕೇಂದ್ರ ಸರ್ಕಾರಕ್ಕೆ ತಹಸೀಲ್ದಾರ್ ಸಿ.ಜೆ.ರವಿಶಂಕರ್ ಮೂಲಕ ಮನವಿ ಪತ್ರ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಚಾಮುಲ್ ಮಾಜಿ ಅಧ್ಯಕ್ಷ ಹೆಚ್.ಎಸ್.ನಂಜುಂಡಪ್ರಸಾದ್, ಕಾಡಾ ಮಾಜಿ ಅಧ್ಯಕ್ಷ ಹೆಚ್.ಎಸ್.ನಂಜಪ್ಪ, ಟಿಎಪಿಸಿಎಂಎಸ್ ಅಧ್ಯಕ್ಷ ಜಯರಾಂ, ಮುಖಂಡರಾದ ಬಿ.ಎಂ.ಮುನಿರಾಜು, ಕಬ್ಬಳ್ಳಿ ಮಹೇಶ್, ಕೆಂಪರಾಜು, ಎಲ್.ಸುರೇಶ್, ಬಡಪ್ಪ ಸುರೇಶ್, ರಾಜಶೇಖರ್, ಅಣ್ಣಯ್ಯಸ್ವಾಮಿ, ಅಪ್ಸರ್ ಪಾಷಾ, ಮಹದೇವಸ್ವಾಮಿ, ಜಯಂತಿ ಸೇರಿದಂತೆ ವಿವಿಧ ಘಟಕಗಳ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

ಚಾ.ನಗರ ರೋಟರಿ ಸಿಲ್ಕ್ ಸಿಟಿ ಅಧ್ಯಕ್ಷರ ಪದಗ್ರಹಣ



ಚಾಮರಾಜನಗರ, ಜೂ.27(ಎಸ್‌ಎಸ್)– ರೋಟರಿ ಸಿಲ್ಕ್ ಸಿಟಿಯ 2022–23ನೇ ಸಾಲಿನ ಅಧ್ಯಕ್ಷರಾಗಿ ಎಂ.ಜಿ.ಮುರುಗೇಂದ್ರ ಸ್ವಾಮಿ, ಕಾರ್ಯದರ್ಶಿಯಾಗಿ ಆರ್.ಎಸ್. ಶ್ರೀಧರ್ ಅಧಿಕಾರ ಸ್ವೀಕರಿಸಿದರು.

ನಗರದ ವರ್ತಕರ ಬವನದಲ್ಲಿ ನಡೆದ 2022–23ನೇ ಸಾಲಿನ ಪದವಿ ಪದಗ್ರಹಣ ಸಮಾರಂಭದಲ್ಲಿ ಪದವಿ ಪ್ರದಾನ ಮಾಡಿದ ನಿಯೋಜಿತ ರೋಟರಿ ಜಿಲ್ಲಾ ಗವರ್ನರ್ ಪಿ.ಎಚ್.ಎಂ.ವಿಕ್ರಂ ದತ್ತ ಮಾತನಾಡಿ, ನಮ್ಮ ಜೀವನದಲ್ಲಿ ವಿದ್ಯೆ, ಶ್ರೀಮಂತಿಕೆ–ಬಡತನ, ಗೌರವ ಹಾಗೂ ಆರೋಗ್ಯ ಇವು ನಾಲ್ವರು ಗೆಳೆಯರಿದ್ದಂತೆ. ಈ ನಾಲ್ಕನ್ನು ಸಮನಾಗಿ ಸ್ವೀಕರಿಸಬೇಕು ಎಂದು ಕರೆ ನೀಡಿದರು.

ರೋಟರಿ ಸಿಲ್ಕ್ ಸಿಟಿ ನೂತನ ಅಧ್ಯಕ್ಷ ಎಂ.ಜಿ.ಮುರುಗೇಂದ್ರಸ್ವಾಮಿ ಮಾತನಾಡಿದರು. ವಲಯ–9ರ ಪ್ರತಿನಿಧಿ ಆರ್.ಎಂ. ಸ್ವಾಮಿ, ಸಹಾಯಕ ಗವರ್ನರ್ ಡಾ.ಉಮಾಶಂಕರ್, ನೂತನ ಕಾರ್ಯದರ್ಶಿ, ಆರ್.ಎಸ್. ಶ್ರೀಧರ್, ನಿಕಟಪೂರ್ವ ಅಧ್ಯಕ್ಷ ಎ.ಎಸ್.ರವಿ, ಕಾರ್ಯದರ್ಶಿ ಅಕ್ಷಯ್, ಮಾಜಿ ಅಧ್ಯಕ್ಷ ದೊಡ್ಡರಾಯಪೇಟೆ ಗಿರೀಶ್, ಸದಸ್ಯರಾದ ರವಿಶಂಕರ್, ಅಜಯ್ ಹೆಗ್ಗವಾಡಿಪುರ, ಆಲೂರು ಪ್ರದೀಪ್ ಸೇರಿದಂತೆ ಇತರರಿದ್ದರು.

ಇದೇ ಸಂದರ್ಭದಲ್ಲಿ ವನ್ಯಜೀವಿ ಮಂಡಳಿ ಸದಸ್ಯ ಜಿ.ಮಲ್ಲೇಶಪ್ಪ, ಪತ್ರಕರ್ತ ಬನಶಂಕರ ಆರಾಧ್ಯ, ನಾದಸ್ವರ ಕಲಾವಿದ ರಂಗಸ್ವಾಮಿ ಅವರನ್ನು ಸನ್ಮಾನಿಸಲಾಯಿತು.

ರೋಟರಿ ನೂತನ ಸದಸ್ಯರಾಗಿ ಸೇರ್ಪಡೆಗೊಂಡ ಶಮಿತ್‌ಕುಮಾರ್, ಬಸವರಾಜು, ರಾಜು ಅವರಿಗೆ ಪ್ರಮಾಣ ವಚನ ಬೋಧಿಸಲಾಯಿತು. ದ್ವಿತೀಯ ಪಿಯು ವಾರ್ಷಿಕ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ಸಂಸ್ಥೆ ಸದಸ್ಯರ ಮಕ್ಕಳಾದ ಅಮೋಘ್ ಹಾಗೂ ಅಂಜಲಿಯನ್ನು ಅಭಿನಂದಿಸಲಾಯಿತು.

ಮಾಳಿಗನತ್ತ ಬಸ್ ಅಪಘಾತ: ಮೃತರ ಕುಟುಂಬಕ್ಕೆ ಪರಿಹಾರ



ಕೊಳ್ಳೇಗಾಲ,ಜೂ.27(ನಾಗೇಂದ್ರಸ್ವಾಮಿ)–ಹನೂರು ತಾಲೂಕಿನ ಮಾಳಿಗನತ್ತ ಗ್ರಾಮದ ಸಮೀಪದ ಹಳ್ಳಕ್ಕೆ ಬಸ್ ಮಗುಚಿ ಮೃತಪಟ್ಟವರ ಪೈಕಿ 2 ಕುಟುಂಬಗಳ ಮುಖ್ಯಸ್ಥರಿಗೆ ಶಾಸಕ ಆರ್.ನರೇಂದ್ರ ತಲಾ 2.75 ಲಕ್ಷ ರೂ. ಪರಿಹಾರ ವಿತರಿಸಿದರು.

ಮೃತಪಟ್ಟ ಪಿಜಿ ಪಾಳ್ಯದ ರಮೇಶ್ ಅವರ ಪತ್ನಿ ಐಶ್ವರ್ಯ ಹಾಗೂ ಮಹದೇವಪ್ಪ ಅವರ ಪತ್ನಿ ಪದ್ಮಾಂಭ ಅವರಿಗೆ ಶಾಸಕ ನರೇಂದ್ರ ಪರಿಹಾರದ ಚೆಕ್ ವಿತರಿಸಿದರು. ಬಳಿಕ ಮಾತನಾಡಿದ ಅವರು, ಮಾ.14ರಂದು ಮಾಳಿಗನತ್ತ ಹಳ್ಳಕ್ಕೆ ಬಸ್ ಪಲ್ಟಿಯಾದ ಪ್ರಕರಣದಲ್ಲಿ ಮೃತಪಟ್ಟಿದ್ದ 4 ಮಂದಿಯ ಕುಟುಂಬಗಳಿಗೆ ತಾತ್ಕಾಲಿಕವಾಗಿ 25 ಸಾವಿರ ರೂ. ವಿತರಿಸಲಾಗಿದ್ದು, ಸದ್ಯ 2 ಕುಟುಂಬಗಳ ಸದಸ್ಯರಿಗೆ ಮಾತ್ರ ತಲಾ 2.75 ಲಕ್ಷ ರೂ. ಚೆಕ್ ಅನ್ನು ವಿತರಿಸಲಾಗಿದೆ. ಈಗಾಗಲೇ ಗಾಯಗೊಂಡ ಪ್ರಯಾಣಿಕರಿಗೆ ಸಾರಿಗೆ ನಿಗಮ ಸಹ 1 ಲಕ್ಷ ರೂ.ಗೂ ಅಧಿಕ ಪರಿಹಾರ ವಿತರಿಸಿದೆ. ಉಳಿದವರಿಗೆ ದಾಖಲೆ ಸಲ್ಲಿಸಲು ಸೂಚಿಸಿದ್ದು, ಬಳಿಕ ನಿಗಮ ಮುಂದಿನ ಕ್ರಮ ಕೈಗೊಳ್ಳಲಿದೆ ಎಂದು ಶಾಸಕರು ಮಾಹಿತಿ ನೀಡಿದರು.

ಒಂದನೇ ಪುಟದಿಂದ

ಲೋಪ ಸರಿಪಡಿಸಿ ಆದೇಶ

ಹೆಸರನ್ನೇ ಕೈಬಿಡಲಾಗಿತ್ತು. ಇದೀಗ ಡಾ.ಆರ್.ಎನ್. ಜಯಗೋಪಾಲ ಹೆಸರು ಕೈಬಿಟ್ಟು, ಜಿ.ಉದಯಶಂಕರ್ ಅವರ ಹೆಸರನ್ನು ಸೇರಿಸಲಾಗಿದೆ. 6ನೇ ತರಗತಿಯ ಸಮಾಜ ವಿಜ್ಞಾನ ಪಠ್ಯದಲ್ಲಿದ್ದ, ಸಿದ್ಧಗಂಗೆ, ಆದಿಚುಂಚನಗಿರಿ ಮಠದ ಸೇವೆ ಕೈಬಿಡಲಾಗಿತ್ತು, ಇದೀಗ ಮತ್ತೆ ಸೇರ್ಪಡೆಗೊಂಡಿದೆ. 7ನೇ ತರಗತಿಯ ಸಮಾಜ ವಿಜ್ಞಾನ ಭಾಗ 1ರಲ್ಲಿ ಮೈಸೂರು ಮತ್ತು ಇತರ ಸಂಸ್ಥಾನಗಳ ಪಾಠದಲ್ಲಿದ್ದ ಸುರಪುರ ನಾಯಕರ ಕುರಿತಾದ ವಿವರಗಳನ್ನು ಸೇರಿಸಲಾಗಿದೆ. ಅಲ್ಲದೆ, ಮೈಸೂರಿನ ಚಾಮುಂಡಿ ತಾಣ ಹಾಗೂ ಅಲ್ಲಿನ ಸಂಸ್ಥಾನದ ಒಡೆಯರುಗಳ ಮಾಹಿತಿಯನ್ನು ಸೇರಿಸಲಾಗಿದೆ.

ಇದೇ ತರಗತಿಯ ಸಮಾಜ ವಿಜ್ಞಾನ ಭಾಗ 2ರಲ್ಲಿ ಕರ್ನಾಟಕ ರಾಜ್ಯ ಏಕೀಕರಣ ಹಾಗೂ ಗಡಿ ವಿವಾದಗಳು ಎಂಬ ಪಾಠದಲ್ಲಿ ರಾಷ್ಟ್ರಕವಿ ಕುವೆಂಪು ಅವರ ಹಾಗೂ ಹುಯಿಲಗೋಳ ನಾರಾಯಣರಾವ್ ಅವರ ಭಾವ ಚಿತ್ರಗಳನ್ನು ಅಳವಡಿಸಲಾಗುವುದು. ನಾಲ್ಕನೇ ತರಗತಿಯ ಪರಿಸರ ಅಧ್ಯಯನ ಪ್ರತಿಯೊಬ್ಬರು ವಿಶಿಷ್ಟ ಎಂಬ ಪಾಠದಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಹೆಸರು ಮಾಡಿದ ಕುವೆಂಪು ಅವರಿಗೆ ಚಿಕ್ಕಂದಿನಿಂದಲೂ ಕಥೆ, ಕವನ, ಪುಸ್ತಕ ಓದುವ, ಬರೆಯುವ ಅಭ್ಯಾಸವಿತ್ತು ಎಂಬ ವಾಕ್ಯದ ನಂತರ 'ಅನೇಕರ ಪ್ರೋತ್ಸಾಹದಿಂದ ಇವರು ಮುಂದೆ ಪ್ರಖ್ಯಾತ ಕವಿ ಎನಿಸಿಕೊಂಡರು' ಎಂಬ ಸಾಲನ್ನು ಕೈಬಿಟ್ಟು ಆದೇಶ ಹೊರಡಿಸಲಾಗಿದೆ. ಮಠಾಧೀಶರು, ಸಾಹಿತಿಗಳು ಮತ್ತು ಸಾಮಾಜಿಕ ವಿವಿಧ ಸ್ತರಗಳಿಂದ ಎಲ್ಲಿ ಅಪಸ್ವರಗಳು ಕೇಳಿ ಬಂದಿತ್ತೋ, ಅಂತಹ ಲೋಪಗಳನ್ನು ಪಠ್ಯದಲ್ಲಿ ಪರಿಷ್ಕರಿಸಿ, ಗೊಂದಲಕ್ಕೆ ಇತಿಶ್ರೀ ಹಾಡಲು ಸರ್ಕಾರ ಮುಂದಾಗಿದೆ.

ಬೆಂಗಳೂರು ಮತ್ತಷ್ಟು ಬೆಳೆಯಲಿ

ಇನ್ಫೋಸಿಸ್ ಸಂಸ್ಥಾಪಕ ಎನ್.ಆರ್.ನಾರಾಯಣಮೂರ್ತಿ, ವಿಪ್ರೋ ಮುಖ್ಯಸ್ಥ ಅಜೀಂ ಪ್ರೇಂಜಿ ಸೇರಿದಂತೆ ಹಲವರು ಬೆಂಗಳೂರಿನ ಅಭಿವೃದ್ಧಿಗೆ ಕೊಡುಗೆ ನೀಡಿದ್ದಾರೆ. ಇದರ ಪರಿಣಾಮವಾಗಿ, ಭಾರತವನ್ನು ಬೆಂಗಳೂರಿನ ಮೂಲಕ ನೋಡಬೇಕು ಎಂದು ಹಿಂದಿನ ಪ್ರಧಾನಿ ಡಾ.ಮನಮೋಹನ್ ಸಿಂಗ್ ಹೇಳಿದ್ದರು' ಎಂದು ನೆನಪಿಸಿಕೊಂಡರು. ಬೆಂಗಳೂರು ಒಂದು ಸುಂದರ ಮತ್ತು ಸ್ವಚ್ಛವಾದ ನಗರ. ಕುವೆಂಪು ಹೇಳಿದಂತೆ ನಿಜವಾದ ಅರ್ಥದಲ್ಲಿ ಸರ್ವ ಜನಾಂಗದ ಶಾಂತಿಯ ತೋಟ. ಬೇರೆ ಬೇರೆ ರಾಜ್ಯಗಳ ಲಕ್ಷಾಂತರ ಜನರು ಸೌಹಾರ್ದದಿಂದ ಜೀವಿಸುತ್ತಿದ್ದಾರೆ. ಬೆಂಗಳೂರು ಕಟ್ಟಿದ ಕೆಂಪೇಗೌಡ ಯಾರೊಬ್ಬರ ಸ್ವತ್ತೂ ಅಲ್ಲ. ಬೆಂಗಳೂರು ನಗರದಲ್ಲಿ ವಾಸಿಸುತ್ತಿರುವ ಜನಾಂಗದ ಸ್ವತ್ತು ಎಂದರು.

ಟಿಕೆಟ್ ಕೈತಪ್ಪುವ ಸಾಧ್ಯತೆ

ಗೋವಿಂದ ಕಾರಜೋಳ, ಉಮೇಶ್ ಕತ್ತಿ ಸೇರಿದಂತೆ ಕೆಲವು ಸಚಿವರು ಮತ್ತು ಸದಸ್ಯರಿಗೆ ವಯೋಮಿತಿಯ ಕಾರಣಕ್ಕೆ ಟಿಕೆಟ್ ತಪ್ಪಲಿದೆ. ಶಾಸಕರಾದವರು, ಕ್ರಿಯಾಶೀಲರಾಗಿಲ್ಲದ, ಕ್ಷೇತ್ರದ ಜನತೆಯಿಂದ ತಿರಸ್ಕರಿಸಲ್ಪಟ್ಟವರಿಗೂ ಅವಕಾಶವಿಲ್ಲ. ಸಂಘಟನೆಯ ಬಗ್ಗೆ ಕಾಳಜಿ ಇಲ್ಲದ, ಸರ್ಕಾರ ಮತ್ತು ಪಕ್ಷದ ವಿರುದ್ಧ ಅಪಸ್ವರ ಎತ್ತಿದವರಿಗೂ ಅವಕಾಶ ಇರುವುದಿಲ್ಲ. ವಿಧಾನಸಭೆಯ 224 ಕ್ಷೇತ್ರಗಳ ಪೈಕಿ ಶೇಕಡ 50ರಷ್ಟು ಹೊಸ ಮುಖಗಳಿಗೆ ಅವಕಾಶ, ಅದರಲ್ಲೂ ಸ್ಥಳೀಯವಾಗಿ ವಿವಿಧ ಕ್ಷೇತ್ರಗಳಲ್ಲಿ ಜನಪ್ರಿಯತೆ ಪಡೆದವರನ್ನು ಗುರುತಿಸಿ, ಅಂತಹವರಿಗೆ ಟಿಕೆಟ್ ನೀಡಲು ಪಕ್ಷ ಮುಂದಾಗಿದೆ.

ಅದರಲ್ಲೂ ವೈದ್ಯಕೀಯ, ಇಂಜಿನಿಯರಿಂಗ್, ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡವರು, ನಿವೃತ್ತ ಅಧಿಕಾರಿಗಳು, ಶಿಕ್ಷಣ ತಜ್ಞರಿಗೂ ಟಿಕೆಟ್ ದೊರೆಯಲಿದೆ. ಉತ್ತರ ಪ್ರದೇಶದಲ್ಲಿ ಸಚಿವರು ಸೇರಿದಂತೆ 100 ಕ್ಕೂ ಹೆಚ್ಚು ಹಾಲಿ ಸದಸ್ಯರಿಗೆ ಟಿಕೆಟ್ ನಿರಾಕರಿಸಿ, ಹೊಸ ಮುಖಗಳಿಗೆ ಅವಕಾಶ ನೀಡಿದ್ದರಿಂದ ಯೋಗಿ ಆದಿತ್ಯನಾಥ್ ಸತತವಾಗಿ 2ನೇ ಬಾರಿಗೆ ಮುಖ್ಯಮಂತ್ರಿಯಾಗಿ ಆ ರಾಜ್ಯದಲ್ಲಿ ದಾಖಲೆ ನಿರ್ಮಿಸಿದರು. ಕರ್ನಾಟಕ ಬಿಜೆಪಿಯಲ್ಲಿ ಕೆಲವು ಗೊಂದಲಗಳಿವೆ. ನಾಯಕತ್ವದ ಕೊರತೆಯು ಇದೆ. ಇದನ್ನು ಬಿಜೆಪಿ ವರಿಷ್ಠರು ಸಂಘ ಪರಿವಾರದ ಸಹಕಾರ ಮತ್ತು ಕೆಲವು ಬದಲಾವಣೆಯ ಮೂಲಕ ಪಕ್ಷವನ್ನು ಅಧಿಕಾರಕ್ಕೆ ತರಲು ಮುಂದಾಗಿದ್ದಾರೆ.

ಒಂದೆಡೆ ಪ್ರಧಾನಿ ನರೇಂದ್ರ ಮೋದಿ ಅವರ ವರ್ಚಸ್ಸು ಬಳಸಿಕೊಳ್ಳುವುದರ ಜೊತೆಗೆ ರಾಜ್ಯದಲ್ಲೂ ಮಠಾಧೀಶರು ಮತ್ತು ಸಂಘ ಸಂಸ್ಥೆಗಳ ಸಹಕಾರ ಪಡೆದು, ದಕ್ಷಿಣ ಭಾರತದಲ್ಲಿ ತಮ್ಮ ನೆಲೆಯನ್ನು ಉಳಿಸಿಕೊಳ್ಳಲು ಯೋಜನೆಯನ್ನು ಬಿಜೆಪಿ ರೂಪಿಸಿದೆ.

ಸಿದ್ದರಾಮಯ್ಯ ಬಣ ಪಟ್ಟು

ಡಿ.ಕೆ.ಶಿವಕುಮಾರ್ ವಾದಿಸಿದ್ದಾರೆ. ಗಾಂಧಿ ಕುಟುಂಬ ಏನು ಸೂಚಿಸುತ್ತದೋ ಅದನ್ನೇ ಚಾಚೂ ತಪ್ಪದೇ ಪಾಲಿಸುತ್ತೇನೆ ಎಂದಿದ್ದಾರೆ. ಚುನಾವಣೆಗೆ 6 ತಿಂಗಳು ಮೊದಲೇ ನಾಯಕತ್ವ ಘೋಷಣೆ ಮಾಡುವಂತೆ ಕಾಂಗ್ರೆಸ್ ಹೈಕಮಾಂಡ್ ಮೇಲೆ ಸ್ಥಳೀಯ ನಾಯಕರು ತೀವ್ರ ಒತ್ತಡ ಹೇರಿದ್ದಾರೆ. ಹೀಗಾಗಿ ಈ ಎಲ್ಲಾ ವಿಚಾರಗಳ ಬಗ್ಗೆ ನಾಳೆ ರಾಜ್ಯ ನಾಯಕರ ಜೊತೆ ರಾಹುಲ್ ಗಾಂಧಿ ಮಾತುಕತೆ ನಡೆಸಲಿದ್ದಾರೆ.

ಸಿದ್ದು ಬಣದ ಒತ್ತಡ: ಕಳೆದ ಕೆಲ ದಿನಗಳ ಹಿಂದೆಯೇ ರಾಹುಲ್ ಗಾಂಧಿ ಭೇಟಿಗೆ ಸಿದ್ದರಾಮಯ್ಯ ಬಣ ಮುಂದಾಗಿತ್ತು. ಸಿದ್ದರಾಮಯ್ಯರನ್ನು ಸಿಎಂ ಅಭ್ಯರ್ಥಿ ಎಂದು ಘೋಷಿಸುವಂತೆ ಒತ್ತಡ ಹೇರಲು ನಿರ್ಧಾರ ಮಾಡಲಾಗಿತ್ತು. ಸಿದ್ದರಾಮಯ್ಯ ಸಿಎಂ ಅಭ್ಯರ್ಥಿ ಎಂದು ಘೋಷಣೆ ಮಾಡದೇ ಇದ್ದರೆ ಪಕ್ಷಕ್ಕೆ ಮತ ಬರುವುದಿಲ್ಲ. ಚುನಾವಣಾ ರಾಜಕೀಯದಿಂದ ಅವರು ಹಿಂದೆ ಸರಿದು ಪಕ್ಷಕ್ಕಾಗಿ ದುಡಿಯಲಿದ್ದಾರೆ. ಸಿದ್ದರಾಮಯ್ಯ ಪಕ್ಷ ಬಿಡುವುದಿಲ್ಲ. ಆದರೆ ಚುನಾವಣೆ ಎದುರಿಸುವುದಿಲ್ಲ. ಹೀಗೆ ಪರೋಕ್ಷವಾಗಿ ಹೈಕಮಾಂಡ್ ಮೇಲೆ ಒತ್ತಡ ಹೇರಲು ತಂತ್ರ ರೂಪಿಸಲಾಗಿದೆ.

ಸಿಎಂ ಅಭ್ಯರ್ಥಿ ಘೋಷಣೆ ಮಾಡಿದರೆ ಲಿಂಗಾಯಿತ, ಒಕ್ಕಲಿಗ ಮತಗಳು ಬರುವುದಿಲ್ಲ ಎಂಬುದು ಡಿ.ಕೆ.ಶಿವಕುಮಾರ್ ಹಾಗೂ ಮೂಲ ಕಾಂಗ್ರೆಸ್ಸಿಗರ ವಾದ. ದಲಿತ ನಾಯಕರು ಸಹ ಪಕ್ಷಕ್ಕಾಗಿ ಕೆಲಸ ಮಾಡುವುದಿಲ್ಲ. ಹೀಗಾಗಿ ಸಾಮೂಹಿಕ ನಾಯಕತ್ವಕ್ಕೆ ಮನ್ನಣೆ ನೀಡುವಂತೆ ಸಲಹೆ ನೀಡಿದ್ದಾರೆ. ಆದರೆ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಬಣವನ್ನು ಕೃಷ್ಣ ಭೈರೇಗೌಡ, ಚಲುವರಾಯಸ್ವಾಮಿ ಒಂದಾಗಿಸಿದ ಬಳಿಕ ತಿಕ್ಕಾಟ ತಣ್ಣಗಾಗಿತ್ತು. ಆದರೆ ಈಗ ಘರ್ಷಣೆ ಇಲ್ಲದೇ ಇದ್ದರೂ ಎಲ್ಲವನ್ನು ಮುಕ್ತವಾಗಿ ಚರ್ಚಿಸಲು ರಾಹುಲ್ ಗಾಂಧಿ ನಿರ್ಧಾರ ಮಾಡಿದ್ದಾರೆ. ಚುನಾವಣೆ ಸಮೀಪಿಸುವ ಮುನ್ನವೇ ಎಲ್ಲಾ ಗೊಂದಲ ನಿವಾರಿಸಲು ರಾಹುಲ್ ಮುಂದಾಗಿದ್ದು ಇದಕ್ಕಾಗಿ ಉಭಯ ನಾಯಕರ ಜೊತೆ ಮಾತುಕತೆ ನಡೆಸಲು ದೆಹಲಿಗೆ ಕರೆದಿದ್ದಾರೆ.

ವರ್ಧಂತ್ಯೋತ್ಸವಕ್ಕೆ ಸಿದ್ಧತೆ

ದೇವಾಲಯದ ನಿಧಿಯಿಂದ ಭರಿಸಲಾಗುವುದು. ಜೊತೆಗೆ ನಗರ ಬಸ್ ನಿಲ್ದಾಣ ಹಾಗೂ ಇತರೆ ಬಡಾವಣೆಗಳಿಂದಲೂ ಎಂದಿನಂತೆ ಬಸ್ ಸಂಚಾರವಿರಲಿದ್ದು, ಅಲ್ಲಿ ಪ್ರಯಾಣಿಕರೇ ಟಿಕೆಟ್ ದರ ಪಾವತಿಸ ಬೇಕಾಗುತ್ತದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಸಭೆ ಬಳಿಕ ಮಾಧ್ಯಮಗಳಿಗೆ ವಿವರಣೆ ನೀಡಿದರು.

ಲಸಿಕೆ; ನೆಗೆಟಿವ್ ವರದಿ: ಆಷಾಢ ಶುಕ್ರವಾರಗಳು ಹಾಗೂ ವರ್ಧಂತ್ಯೋತ್ಸವದಲ್ಲಿ ದೇವಾಲಯಕ್ಕೆ ಬರುವ ಭಕ್ತರು ಎರಡು ಡೋಸ್ ಕೋವಿಡ್ ಲಸಿಕೆ ಪಡೆದಿರುವ ದಾಖಲೆಯ್ನು ಹೊಂದಿರಬೇಕು. ಇಲ್ಲವೇ 72 ಗಂಟೆ ಮುಂಚಿನ ಕೋವಿಡ್ ನೆಗೆಟಿವ್ ವರದಿ ಪಡೆದಿರಬೇಕು. ಲಲಿತಮಹಲ್ ಬಳಿ, ನಗರ ಬಸ್ ನಿಲ್ದಾಣ ಹಾಗೂ ಇನ್ನಿತರ ಸ್ಥಳಗಳಲ್ಲಿ ಬಸ್ ಹತ್ತುವ ಸ್ಥಳ ಹಾಗೂ ಬೆಟ್ಟದ ಮೆಟ್ಟಿಲು ಮಾರ್ಗದಲ್ಲಿ ಈ ದಾಖಲೆಗಳನ್ನು(ಮೊಬೈಲ್‌ನಲ್ಲೂ ಪ್ರದರ್ಶಿಸಬಹುದು) ಪರಿಶೀಲಿಸಲಾಗುತ್ತದೆ. ಆರೋಗ್ಯ ಇಲಾಖೆಯ 20–30 ತಂಡಗಳು ಕಾರ್ಯ ನಿರ್ವಹಿಸಲಿದ್ದು, ಕೋವಿಡ್ ಪರೀಕ್ಷೆ ಪ್ರಮಾಣ ಹೆಚ್ಚಿಸುವ ಬಗ್ಗೆ ಇಲಾಖೆಯವರು ಕ್ರಮ ಕೈಗೊಳ್ಳಲಿದ್ದಾರೆ. ಮಾಸ್ಕ್ ಧಾರಣೆ ಕಡ್ಡಾಯಗೊಳಿಸುವ ಬಗ್ಗೆ ಇನ್ನೂ ತೀರ್ಮಾನಿಸಿಲ್ಲ ಎಂದರು.

ಪ್ರಸಾದ ವ್ಯವಸ್ಥೆ: ದಾನಿಗಳಿಂದ ಬಾಳೆ ಎಲೆ ಹಾಗೂ ದೊನ್ನೆ ಮೂಲಕ ಪ್ರಸಾದ ವಿನಿಯೋಗಕ್ಕೂ ಅನುಮತಿ ನೀಡಲಾಗಿದೆ. ಈ ಬಾರಿ ಮಹಿಷಾಸುರ ಪ್ರತಿಮೆ ಸಮೀಪದ ಬಸ್ ಶೆಲ್ಟರ್‌ನಲ್ಲಿ ಪ್ರಸಾದ ವಿತರಣೆಗೆ ಅವಕಾಶ ಕಲ್ಪಿಸಲಾಗುವುದು. ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಪ್ರತ್ಯೇಕ ಊಟದ ವ್ಯವಸ್ಥೆ ಇರುವುದಿಲ್ಲ. ಪ್ರಸಾದ ಸಾಗಿಸುವ ವಾಹನಗಳ ನೋಂದಣಿ ಮಾಡಿಕೊಂಡು ಸ್ವಯಂ ಸೇವಕರಿಗೆ ಪಾಸ್ ನೀಡಲಾಗುತ್ತದೆ. ತಾಸುಗಟ್ಟಲೆ ಸರತಿಯಲ್ಲಿ ನಿಲ್ಲುವ ಭಕ್ತರಿಗಾಗಿ ಬೃಹತ್ ಪರದೆಗಳಲ್ಲಿ ಚಾಮುಂಡೇಶ್ವರಿ ಕುರಿತ ಭಕ್ತಿಗೀತೆಗಳ ವಿಡಿಯೋ ಪ್ರಸಾರ ಮಾಡಲಾಗುವುದು ಎಂದರು.

ಸಿಸಿಟಿವಿ ಕಣ್ಗಾವಲು: ಲಕ್ಷಾಂತರ ಜನ ಆಗಮಿಸುವುದರಿಂದ ಪೊಲೀಸ್ ಭದ್ರತೆ ಜೊತೆಗೆ ಚಾಮುಂಡಿಬೆಟ್ಟದ ಎಲ್ಲಾ ಕಡೆ ಹಾಗೂ ಮೆಟ್ಟಿಲು ಮಾರ್ಗದಲ್ಲಿ ಸಿಸಿಟಿವಿ ಕ್ಯಾಮರಾ ಅಳವಡಿಸಲಾಗುವುದು. ಬೆಟ್ಟದ ನಿವಾಸಿಗಳು ಮತದಾನದ ಗುರುತಿನ ಚೀಟಿ ಹಾಗೂ ಆಧಾರ್ ಕಾರ್ಡ್ ನೀಡಿ ತಮ್ಮ ವಾಹನಗಳಿಗೆ ಪಾಸ್ ಪಡೆಯಬೇಕಾಗುತ್ತದೆ ಎಂದರು.

ಯಶಸ್ವಿಗೆ ಸಹಕರಿಸಿ: ಕೊರೊನಾದಿಂದ 2 ವರ್ಷಗಳ ಬಳಿಕ ಆಷಾಢದಲ್ಲಿ ಭಕ್ತರಿಗೆ ಅವಕಾಶ ಕಲ್ಪಿಸಲಾಗುತ್ತಿದ್ದು, ಚಾಮುಂಡಿ ಬೆಟ್ಟ ಹಾಗೂ ಉಚಿತ ಸೇವೆಯ ಬಸ್ ಹೊರಡುವ ಸ್ಥಳದಲ್ಲಿ ಎಲ್ಲಾ ರೀತಿಯ ವ್ಯವಸ್ಥೆ ಕಲ್ಪಿಸಲಾಗುವುದು. ತಾಯಿಯ ಕೈಂಕರ್ಯ ಯಶಸ್ವಿಯಾಗಿ ಸಂಪನ್ನವಾಗಲು ಭಕ್ತರ ಸಹಕಾರ ಬಹಳ ಮುಖ್ಯ. ಸ್ವಚ್ಛತೆ, ವಿದ್ಯುತ್ ದೀಪಾಲಂಕಾರ, ಬ್ಯಾರಿಕೇಡ್ ಅಳವಡಿಕೆ, ಮೊಬೈಲ್ ಟಾಯ್ಲೆಟ್, ವಾಟರ್ ಪ್ರೂಫ್ ಶೆಡ್ ಸೇರಿದಂತೆ ಎಲ್ಲಾ ಸಿದ್ಧತೆಗೆ ಕ್ರಮ ಕೈಗೊಳ್ಳಲಾಗಿದೆ. ಸಣ್ಣ ವೈಫಲ್ಯವೂ ಆಗದಂತೆ ನಿಗಾ ವಹಿಸಲು ಮುಡಾ, ಪೊಲೀಸ್, ಆರೋಗ್ಯ, ಅಗ್ನಿಶಾಮಕ, ಸೆಸ್ಕ್, ನಗರ ಪಾಲಿಕೆ, ಲೋಕೋಪಯೋಗಿ, ಅರಣ್ಯ ಇಲಾಖೆ ಹೀಗೆ ಹಲವು ಇಲಾಖೆಗಳಿಗೆ ಜವಾಬ್ದಾರಿ ವಹಿಸಲಾಗಿದೆ ಎಂದು ಸಚಿವ ಎಸ್.ಟಿ.ಸೋಮಶೇಖರ್ ವಿವರಿಸಿದರು.

ಸಭೆಯಲ್ಲಿ ಶಾಸಕರಾದ ಜಿ.ಟಿ.ದೇವೇಗೌಡ, ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಸಂಸದ ಪ್ರತಾಪ್ ಸಿಂಹ, ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಸಿದ್ಧತೆ ಸಂಬಂಧ ಸಲಹೆ–ಸೂಚನೆ ನೀಡಿದರು. ಮೇಯರ್ ಸುನಂದಾ ಪಾಲನೇತ್ರ, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಡಿಸಿ ಡಾ.ಬಗಾದಿ ಗೌತಮ್, ಎಡಿಸಿ ಮಂಜುನಾಥಸ್ವಾಮಿ, ಜಿಪಂ ಸಿಇಓ ಪೂರ್ಣಿಮಾ, ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ, ಡಿಸಿಪಿಗಳಾದ ಪ್ರದೀಪ್ ಗುಂಟಿ, ಗೀತಾ ಪ್ರಸನ್ನ, ಪಾಲಿಕೆ ಆಯುಕ್ತ ಲಕ್ಷ್ಮೀಕಾಂತ ರೆಡ್ಡಿ, ಮುಡಾ ಆಯುಕ್ತ ದಿನೇಶ್‌ಕುಮಾರ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಅಗ್ನಿಪಥ್ ವಿರುದ್ಧ ಮೈಸೂರಿನ ಮೂರು ಕಡೆ ಕಾಂಗ್ರೆಸ್ ಪ್ರತಿಭಟನೆ



ಡಾ.ಬಿ.ಆರ್.ಅಂಬೇಡ್ಕರ್(ಎಫ್‌ಟಿಎಸ್) ವೃತ್ತದಲ್ಲಿ ಶಾಸಕ ತನ್ವೀರ್ ಸೇಠ್ ನೇತೃತ್ವದಲ್ಲಿ ಎನ್.ಆರ್.ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.



ರಾಮಸ್ವಾಮಿ ವೃತ್ತದಲ್ಲಿ ಕೆ.ಆರ್.ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು.

ಮೈಸೂರು, ಜೂ.27(ಎಂಟಿವೈ)– ಸೇನಾ ನೇಮಕಾತಿಗಾಗಿ ಕೇಂದ್ರ ಸರ್ಕಾರ ನೂತನವಾಗಿ ಜಾರಿಗೆ ತಂದಿರುವ ಅಗ್ನಿಪಥ್ ಯೋಜನೆ ವಿರೋಧಿಸಿ ಕಾಂಗ್ರೆಸ್ ಕಾರ್ಯಕರ್ತರು ಮೈಸೂರಿನ ಮೂರು ಪ್ರತ್ಯೇಕ ಸ್ಥಳಗಳಲ್ಲಿ ಪ್ರತಿಭಟನೆ ನಡೆಸಿ, ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನೀಡಿದ ಕರೆ ಮೇರೆಗೆ ಇಂದು ರಾಜ್ಯಾದ್ಯಂತ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಕೆ.ಆರ್.ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನೇತೃತ್ವದಲ್ಲಿ ರಾಮಸ್ವಾಮಿ ವೃತ್ತದಲ್ಲಿ, ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ಮಾಜಿ ಶಾಸಕ ವಾಸು ನೇತೃತ್ವದಲ್ಲಿ ಮಹಾತ್ಮಗಾಂಧಿ ವೃತ್ತದಲ್ಲಿ ಹಾಗೂ ಶಾಸಕ ತನ್ವೀರ್ ಸೇಠ್ ನೇತೃತ್ವದಲ್ಲಿ ಎನ್.ಆರ್.ಕ್ಷೇತ್ರದ ಕಾರ್ಯಕರ್ತರು ಡಾ.ಅಂಬೇಡ್ಕರ್ ವೃತ್ತ(ಎಫ್‌ಟಿಎಸ್)ದಲ್ಲಿ ಪ್ರತಿಭಟನೆ ನಡೆಸಿ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಕೆ.ಆರ್.ಕ್ಷೇತ್ರ: ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ನೇತೃತ್ವದಲ್ಲಿ ರಾಮಸ್ವಾಮಿ ವೃತ್ತದಲ್ಲಿ ಕೆ.ಆರ್.ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ಮಾಡಿ, ಅಗ್ನಿಪಥ್ ಯೋಜನೆ ರದ್ದು ಮಾಡುವಂತೆ ಆಗ್ರಹಿಸಿದರು.

ಈ ವೇಳೆ ಮಾತನಾಡಿದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಅಧಿಕಾರಕ್ಕೆ ಬಂದಲ್ಲಿ ನಿರುದ್ಯೋಗ ಸಮಸ್ಯೆ ನಿವಾರಣೆ ಮಾಡುವುದಾಗಿ ಹೇಳಿದ್ದ ನರೇಂದ್ರ ಮೋದಿ ಅವರು ಇದೀಗ ಸೇನಾ ನೇಮಕಾತಿಯಲ್ಲಿ ನಿರುದ್ಯೋಗಿಗಳಿಗೆ ಅನ್ಯಾಯ ಮಾಡುತ್ತಿದ್ದಾರೆ. ಅಗ್ನಿಪಥ್ ಮೂಲಕ ಯುವಕರನ್ನು ಸೇನೆಗೆ ನೇಮಕ ಮಾಡಿಕೊಂಡಲ್ಲಿ ಅವರು ಅಭದ್ರತೆಯಲ್ಲಿಯೇ ಕೆಲಸ ಮಾಡಬೇಕಾಗುತ್ತದೆ ಎಂದರು. ಪ್ರತಿಭಟನೆಯಲ್ಲಿ ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷರಾದ ಜಿ.ಸೋಮಶೇಖರ್, ಶ್ರೀಧರ್, ಡೈರಿ ವೆಂಕಟೇಶ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ಮಹಾತ್ಮ ಗಾಂಧಿ ವೃತ್ತ: ಮೈಸೂರಿನ ಮಹಾತ್ಮ ಗಾಂಧಿವೃತ್ತದಲ್ಲಿ ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ನಡೆದ ಪ್ರತಿಭಟನೆಯಲ್ಲಿ ಮಾತನಾಡಿದ ಮಾಜಿ ಶಾಸಕ ವಾಸು, ಅಗ್ನಿಪಥ್ ಯೋಜನೆ ಮೂಲಕ ನಾಲ್ಕು ವರ್ಷ ಕೆಲಸ ಮಾಡುವ ಯುವಕರು ನಂತರ ಏನು ಮಾಡಬೇಕು ಎಂಬುದನ್ನು ಕೇಂದ್ರ ಸರ್ಕಾರವೇ ಹೇಳಬೇಕು. ಸರ್ಕಾರದ ಈ ನಿರ್ಧಾರದಿಂದ ನಿರುದ್ಯೋಗ ಮತ್ತಷ್ಟು ಹೆಚ್ಚುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಮಾಜಿ ಮೇಯರ್ ಬಿ.ಕೆ.ಪ್ರಕಾಶ್, ನಗರ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಲತಾ ಚಿಕ್ಕಣ್ಣ ಮಾತನಾಡಿದರು.

ಮಾಜಿ ಮೇಯರ್‌ಗಳಾದ ಟಿ.ಬಿ.ಚಿಕ್ಕಣ್ಣ, ಮೋದಾಮಣಿ, ನಗರಪಾಲಿಕೆ ಸದಸ್ಯ ಜೆ.ಗೋಪಿ, ಕೆ.ಹರೀಶ್‌ಗೌಡ, ಶ್ರೀನಾಥ್ ಬಾಬು, ಭಾಸ್ಕರ್ ಎಲ್.ಗೌಡ, ಸುಂದರ್ ಕುಮಾರ್, ಶಿವಮಾದು, ಶಿವಮಲ್ಲು, ವೀಣಾ, ಆರ್.ಪುಷ್ಪವಲ್ಲಿ, ಗುಣಶೇಖರ, ಬ್ರಾಡ್‌ವೇ ಕಿರಣ್, ಶೇಖರ್, ಮಂಜುನಾಥ್ ಮುಂತಾದವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಮಾನವ ಸರಪಳಿ: ಮೈಸೂರು–ಬೆಂಗಳೂರು ಮುಖ್ಯ ರಸ್ತೆಯ ಡಾ.ಬಿ.ಆರ್. ಅಂಬೇಡ್ಕರ್(ಎಫ್‌ಟಿಎಸ್) ವೃತ್ತದಲ್ಲಿ ಎನ್.ಆರ್.ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ನಡೆಸಿದ ಪ್ರತಿಭಟನೆಯ ವೇಳೆ ಮಾನವ ಸರಪಳಿ ರಚಿಸಿ ಕೇಂದ್ರ ಸರ್ಕಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು. ಇದರಿಂದ ಮೈಸೂರು–ಬೆಂಗಳೂರು ಸೇರಿದಂತೆ ವಿವಿಧೆಡೆ ಸಂಚರಿಸುತ್ತಿದ್ದ ವಾಹನಗಳ ಸಂಚಾರದಲ್ಲಿ ಕೆಲಕಾಲ ವ್ಯತ್ಯಯ ಉಂಟಾಗಿತ್ತು. ಈ ವೇಳೆ ಬಂದ ಆಂಬುಲೆನ್ಸ್‌ಗೆ ಪ್ರತಿಭಟನಾಕಾರರು ಸ್ಥಳಾವಕಾಶ ಮಾಡಿಕೊಟ್ಟು ಗಮನ ಸೆಳೆದರು.

ಈ ವೇಳೆ ಶಾಸಕ ತನ್ವೀರ್‌ಸೇಠ್ ಮಾತನಾಡಿ, ದೇಶದಲ್ಲಿ ನಿರುದ್ಯೋಗ ಸಮಸ್ಯೆ ತಾಂಡವವಾಡುತ್ತಿದೆ. ಎಲ್ಲೆಡೆ ಕೆಲಸ ಸಿಗದೆ ಯುವಕರು ಪರದಾಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಅಗ್ನಿಪಥ್ ಯೋಜನೆ ಜಾರಿಗೊಳಿಸುವ ಮೂಲಕ ನಿರುದ್ಯೋಗ ಸಮಸ್ಯೆಯನ್ನು ಇನ್ನಷ್ಟು ಹೆಚ್ಚಿಸುವ ಹುನ್ನಾರ ನಡೆಸುತ್ತಿದೆ. ಕೇಂದ್ರ ಸರ್ಕಾರ ಯುವಕರಿಗೆ ಅನ್ಯಾಯ ಮಾಡುತ್ತಿದೆ. ಕೇವಲ 4 ವರ್ಷ ಉದ್ಯೋಗ ನೀಡಿ ಬಳಿಕ ನಿರುದ್ಯೋಗಿಗಳನ್ನಾಗಿ ಮಾಡುತ್ತಿದೆ ಯೋಜನೆಗೆ ದೇಶಾದ್ಯಂತ ತೀವ್ರ ವಿರೋಧ ವ್ಯಕ್ತವಾಗುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರ ಕೂಡಲೇ ಯೋಜನೆ ಹಿಂಪಡೆಯಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಸೈಯದ್ ಇಕ್ಬಾಲ್, ಜಿ.ಎನ್.ಮಂಜುನಾಥ್, ಮಾಜಿ ಮೇಯರ್ ಅಯೂಬ್ ಖಾನ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ಈಡೇರಿದ ಬೇಡಿಕೆ: ಸ್ಥಳೀಯರಿಂದಲೇ ಎಟಿಎಂ ಉದ್ಘಾಟನೆ



ಮೈಸೂರು,ಜೂ.27(ಎಂಟಿವೈ)– ಮೂಲ ಸೌಲಭ್ಯದಿಂದ ವಂಚಿತವಾಗಿರುವ ಶ್ರೀನಗರ ಬಡಾವಣೆಯಲ್ಲಿ ಸ್ಥಳೀಯರ ಒತ್ತಾಯದ ಮೇರೆಗೆ ಭಾರತೀಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಸ್ಥಾಪಿಸಿದ್ದ ಎಟಿಎಂ ಕೇಂದ್ರವನ್ನು, ಸ್ಥಳೀಯರೇ ಉದ್ಘಾಟಿಸಿ, ತಮ್ಮ ಸೇವೆಗೆ ಸಮರ್ಪಿಸಿಕೊಂಡಿದ್ದಾರೆ.

ಹತ್ತಾರು ವರ್ಷದಿಂದ ಶ್ರೀನಗರ ಬಡಾವಣೆಯಲ್ಲಿ ಮೂಲ ಸೌಲಭ್ಯವಿಲ್ಲದೆ ಸ್ಥಳೀಯರು ಪರದಾಡುವಂತಾಗಿತ್ತು. ಈ ಹಿನ್ನೆಲೆಯಲ್ಲಿ ಇಲ್ಲಿನ ನಿವಾಸಿಗಳು ಹಾಗೂ ಶ್ರೀನಗರ ಕ್ಷೇಮಾಭಿವೃದ್ಧಿ ಸಂಘದ ಮನವಿ ಮೇರೆಗೆ ಎಸ್‌ಬಿಐ ವತಿಯಿಂದ ಎಟಿಎಂ ಕೇಂದ್ರವನ್ನು ಸ್ಥಾಪಿಸಲಾಗಿದೆ. ಸ್ಥಳೀಯರ ಮನವಿ ಮೇರೆಗೆ ನಿರ್ಮಿಸಲಾದ ಎಟಿಎಂ ಕೇಂದ್ರದ ಉದ್ಘಾಟನಾ ಕಾರ್ಯಕ್ರಮ ಆಯೋಜಿಸಿದ್ದರು.

ಶ್ರೀ 1008 ಶ್ರೀ ವಿದ್ಯಾ ಮನೋಹರ ತೀರ್ಥ ಶ್ರೀಪಾದಂ ಸ್ವಾಮೀಜಿ, ಶ್ರೀನಗರ ಕ್ಷೇಮಾಭಿವೃದ್ಧಿ ಸಂಘದ ಉಪಾಧ್ಯಕ್ಷ ಲವ ಕುಮಾರ್, ಕಾರ್ಯದರ್ಶಿ ನಿರ್ಮಲ ವಿಶ್ವೇಶ್ವರಯ್ಯ, ಸ್ಥಳೀಯರಾದ ಕೃಷ್ಣ ಶಾಸ್ತ್ರಿ, ಗೋಪಾಲಕೃಷ್ಣ, ವಿದ್ಯಾಮನೋಹರ ತೀರ್ಥಂಕರ, ವೆಂಕಟೇಶ ಅಯ್ಯಂಗಾರ್ ಹಾಗೂ ಇನ್ನಿತರರು ಟೇಪ್ ಕತ್ತರಿಸಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಎಸ್‌ಬಿಐ ರೀಜಿನಲ್ ಮ್ಯಾನೇಜರ್ ಸಿ.ವೆಂಕಟೇಶಲು, ಡೆಪ್ಯುಟಿ ಮ್ಯಾನೇಜರ್ ಮಹಾದೇವನಾಯಕ, ಬ್ಯಾಂಕಿನ ಅಧಿಕಾರಿಗಳಾದ ಕೆ.ಟಿ.ಪಂಪಾಪತಿ, ಜೆ.ಪಿ.ನಗರ ಶಾಖೆಯ ಮ್ಯಾನೇಜರ್ ಎಂ.ಭಾಗ್ಯ, ಅಕೌಂಟೆಂಟ್ ಬಿ.ಸೌಮ್ಯ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ದಾಖಲಾತಿ ಪರಿಶೀಲನೆಗೆ ವಾಹನ ತಡೆಯಬೇಡಿ

ಸಂಚಾರ ಪೋಲೀಸರಿಗೆ ಡಿಜಿಪಿ ಪ್ರವೀಣ್ ಸೂದ್ ಸೂಚನೆ

ಮೈಸೂರು, ಜೂ.27(ಆರ್‌ಕೆ)–ಕೇವಲ ದಾಖಲಾತಿ ಪರಿಶೀಲಿಸಲು



ವಾಹನಗಳನ್ನು ತಡೆದು ನಿಲ್ಲಿಸುವುದು ಬೇಡ ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಅವರು ಸಂಚಾರ ಪೊಲೀಸರಿಗೆ ಸೂಚನೆ ನೀಡಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, ಸಂಚಾರ ನಿಯಮಗಳನ್ನು ಪಾಲಿಸಿಕೊಂಡು ತನ್ನ ಪಾಡಿಗೆ ಶಿಸ್ತಿನಿಂದ ಹೋಗುವ ವ್ಯಕ್ತಿಯ ವಾಹನ ತಡೆದು ನಿಲ್ಲಿಸಿ ಆರ್‌ಸಿ, ಇನ್ಸೂರೆನ್ಸ್, ಮಾಲಿನ್ಯ ಸರ್ಟಿಫಿಕೇಟ್, ವಾಹನದ ಫಿಟ್‌ನೆಸ್ ಸರ್ಟಿಫಿಕೇಟ್, ಚಾಲನಾ ಪರವಾನಗಿ ಇತ್ಯಾದಿ ದಾಖಲಾತಿಗಳನ್ನು ಕೇಳಬೇಡಿ ಎಂದು ತಿಳಿಸಿದ್ದಾರೆ.

ದೂರವಾಣಿ ಮೂಲಕ ಸಂಪರ್ಕಿಸಿದಾಗ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಪ್ರವೀಣ್ ಸೂದ್ ಅವರು, ಸಂಚಾರ ನಿಯಮ ಉಲ್ಲಂಘಿಸುತ್ತಿರುವುದು ಕಂಡುಬಂದಲ್ಲಿ ಮಾತ್ರ ನೀವು ಅಂತಹವರನ್ನು ತಡೆದು ನಿಲ್ಲಿಸಿ ಪರಿಶೀಲಿಸಿ ಎಂದು ಸಂಚಾರ ಪೊಲೀಸರಿಗೆ ಸ್ಪಷ್ಟವಾಗಿ ಬರೆದಿದ್ದೇನೆ ಎಂದು ತಿಳಿಸಿದರು.

ಮೊಬೈಲ್‌ನಲ್ಲಿ ಮಾತನಾಡಿಕೊಂಡು ವಾಹನ ಚಾಲನೆ ಮಾಡುತ್ತಿರುವುದು, ಹೆಲ್ಮೆಟ್, ಸೀಟ್ ಬೆಲ್ಟ್ ಧರಿಸದೇ ಡ್ರೈವ್ ಮಾಡುವುದು, ಮದ್ಯಪಾನ ಮಾಡಿ ಚಾಲನೆ, ತ್ರಿಬಲ್ ರೈಡ್, ಸಿಗ್ನಲ್ ಜಂಪ್, ಅತೀ ವೇಗ ಮತ್ತು ನಿರ್ಲಕ್ಷ್ಯತೆಯಿಂದ ವಾಹನ ಚಾಲನೆ ಮಾಡುವಂತಹ ಸಂಚಾರ ನಿಯಮ ಉಲ್ಲಂಘಿಸುತ್ತಿರುವುದು ನಿಮ್ಮ ಕಣ್ಣಿಗೆ ಕಂಡಲ್ಲಿ ಮಾತ್ರ ಕಡ್ಡಾಯವಾಗಿ ಅಂತಹವರನ್ನು ತಡೆದು ಪ್ರಕರಣ ದಾಖಲಿಸಿ, ದಂಡ ವಸೂಲಿ ಮಾಡಲೇಬೇಕು ಎಂದು ಸೂಚನೆ ನೀಡಿದ್ದೇನೆ ಎಂದು ಅವರು ತಿಳಿಸಿದರು.

ಒಂದು ವೇಳೆ ಯಾವುದೇ ಸಂಚಾರ ನಿಯಮ ಉಲ್ಲಂಘಿಸದೇ ವಾಹನ ಚಾಲನೆ ಮಾಡುತ್ತಿರುವವರನ್ನು ತಡೆದು ನಿಲ್ಲಿಸಿ ದಾಖಲಾತಿಗಳನ್ನು ಪರಿಶೀಲಿಸಬೇಡಿ. ದಾಖಲಾತಿ ಪರಿಶೀಲಿಸುವ ಸಲುವಾಗಿಯೇ ವಾಹನ ತಡೆದು ನಿಲ್ಲಿಸಬೇಡಿ ಎಂದು ಸಲಹೆ ನೀಡಿದ್ದೇನೆ. ಆದರೆ ನಿಯಮ ಉಲ್ಲಂಘಿಸಿ ಸಿಕ್ಕಿಬಿದ್ದಾಗ ವಾಹನದ ದಾಖಲಾತಿಗಳನ್ನು ಪರಿಶೀಲಿಸಲೇಬೇಕು ಎಂದು ತಿಳಿಸಿದ್ದೇನೆ ಎಂದು ಡಿಜಿಪಿ ಅವರು ಮಾಹಿತಿ ನೀಡಿದ್ದಾರೆ. ಸಾರ್ವಜನಿಕರೂ ಸಹ ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಕೆಲವರು ನಿಯಮ ಉಲ್ಲಂಘಿಸಿದ್ದರೂ, ಪೊಲೀಸರೊಂದಿಗೆ ವಾಗ್ವಾದ ನಡೆಸುತ್ತಾರೆ. ನಿಯಮವನ್ನು ಪಾಲಿಸುವುದಿಲ್ಲ, ಪರಿಶೀಲನೆಯನ್ನೂ ಮಾಡಬಾರದು ಎಂದು ವಾದಿಸಿದರೆ, ಅರಾಜಕತೆ ಉಂಟಾಗುತ್ತದೆ ಯಾದ್ದರಿಂದ ಸಂಚಾರ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸಿದರೆ ಪೊಲೀಸರು ತೊಂದರೆ ಕೊಡುವುದಿಲ್ಲ ಎಂದು ಪ್ರವೀಣ್ ಸೂದ್ ಸಲಹೆ ನೀಡಿದ್ದಾರೆ.

ಮೈಸೂರು ವಿವಿಯ ಕೆರಿಯರ್ ಹಬ್‌ನೊಂದಿಗೆ ಹೊಸ ಆಲೋಚನೆಗಳನ್ನು ಹಂಚಿಕೊಳ್ಳಿ

ವಿದ್ಯಾರ್ಥಿಗಳಿಗೆ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಸಲಹೆ



ಮೈಸೂರು, ಜೂ.27(ಆರ್‌ಕೆಬಿ)– ವಿದ್ಯಾರ್ಥಿಗಳು ತಮ್ಮ ಹೊಸ ಆಲೋಚನೆ, ಕಲ್ಪನೆಗಳನ್ನು ವಿಶ್ವ ವಿದ್ಯಾನಿಲಯದ ಕೆರಿಯರ್ ಹಬ್‌ನೊಂದಿಗೆ ಹಂಚಿಕೊಳ್ಳುವಂತೆ ಮೈಸೂರು ವಿಶ್ವ ವಿದ್ಯಾನಿಲಯದ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ತಿಳಿಸಿದರು.

ಮೈಸೂರಿನ ಯುವರಾಜ ಕಾಲೇಜಿನ ಅಮೃತ ಮಹೋತ್ಸವ ಸಭಾಂಗಣದಲ್ಲಿ ಸೋಮವಾರ 'ಯುರೇಕಾ–2022' ವಿಜ್ಞಾನ ಹಬ್ಬ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಅಂಕದ ಜೊತೆ ವಿದ್ಯಾರ್ಥಿಗಳು ಹೊಸ ಹೊಸ ಆಲೋಚನೆ ಮಾಡಬೇಕು. ಮೈಸೂರು ವಿವಿಯ ಕೆರಿಯರ್ ಹಬ್ ಇದೆ. ನಿಮ್ಮ ಆಲೋಚನೆ ಏನೇ ಇದ್ದರೂ ಅಲ್ಲಿ ಹಂಚಿಕೊಳ್ಳಬಹುದು. ಪ್ರಕೃತಿಯಲ್ಲಿ ಇರುವುದನ್ನು ವಿಭಿನ್ನ ಆಲೋಚನೆಯಿಂದ ಸಂಶೋಧನೆ ಮಾಡಿ. ಹೇಗೆ ಸಂಶೋಧನೆ ಮಾಡಬಹುದು ಎಂಬುದನ್ನು ಅರ್ಥ ಮಾಡಿಕೊಳ್ಳಿ. ಪ್ರತಿ ವರ್ಷ ಯುವರಾಜ ಕಾಲೇಜಿನಿಂದ ಸಾವಿರ ಜನ ಹೊರಗೆ ಹೋಗುತ್ತಾರೆ. ಅವರೆಲ್ಲ ಉತ್ತಮ ಸಂಶೋಧಕರು ಹಾಗೂ ವಿಜ್ಞಾನಿಗಳು ಆಗಬೇಕು. ಸದ್ಯ ಎನ್‌ಇಪಿ ಶುರುವಾಗಿದೆ. ಅಂತರ ಶಿಸ್ತೀಯ ಕೋರ್ಸ್‌ಗಳು ಇರುವುದು ಒಳ್ಳೆಯ ಬೆಳವಣಿಗೆ ಎಂದು ಹೇಳಿದರು.

ಯುವರಾಜ ಕಾಲೇಜು ಸಾಕಷ್ಟು ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿದೆ. ಪ್ರೊ.ನಂಜುಂಡಯ್ಯ ಅವರು ಈ ವಿವಿಯ ಮೊದಲ ಕುಲಪತಿ ಆಗಿದ್ದರು. ಇವರು ಸರ್ ಎಂ.ವಿಶ್ವೇಶ್ವರಯ್ಯನವರಿಗೆ ಪಾಠ ಮಾಡಿದ ಶಿಕ್ಷಕರು ಈ ಕಾಲೇಜಿನಲ್ಲಿ ಬೋಧನೆ ಮಾಡಿದ್ದಾರೆ. ಆಗ ವಿಜ್ಞಾನ ಓದಲು ಈಗಿನಷ್ಟು ಕಾಲೇಜುಗಳಿರಲಿಲ್ಲ. ಕೇವಲ 4 ಕಾಲೇಜು ಮಾತ್ರ ಇತ್ತು. ಯುವರಾಜ, ಶಾರದವಿಲಾಸ, ಸೆಂಟ್ ಫಿಲೋಮಿನಾ ಹಾಗೂ ಜೆಎಸ್‌ಎಸ್. 2005ರಲ್ಲಿ ಈ ಕಾಲೇಜು ಸ್ವಾಯತ್ತತೆ ಪಡೆದುಕೊಂಡಿತು. ಪ್ರಸ್ತುತ 4 ಸಾವಿರ ವಿದ್ಯಾರ್ಥಿಗಳು ಇಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ ಎಂದು ವಿವರಿಸಿದರು.

ಕಾರ್ಯಕ್ರಮ ಸಂಯೋಜಕಿ ಡಾ.ರೂಬಿ ಸೆಲೆಸ್ಟಿನಾ ಮಾತನಾಡಿ, 2013ರಲ್ಲಿ ಮೊದಲ ಬಾರಿಗೆ ವಿಜ್ಞಾನ ಹಬ್ಬವಾದ ಯುರೇಕಾ ಶುರುವಾಯಿತು. ವಿದ್ಯಾರ್ಥಿಗಳೇ ಇಂತಹ ಕಾರ್ಯಕ್ರಮ ಹುಟ್ಟಲು ಕಾರಣ. ಇದು ಅವರದೇ ಆಲೋಚನೆ. ಸಣ್ಣ ಮಟ್ಟದಲ್ಲಿ ಶುರುವಾದ ಈ ಅಂತರ್ ಕಾಲೇಜು ಕಾರ್ಯಕ್ರಮ ಇದೀಗ ದೊಡ್ಡ ಮಟ್ಟದಲ್ಲಿ ಬೆಳೆದಿದೆ. ವಿಜ್ಞಾನ ನಾನಾ ಒಳಹುಗಳನ್ನು ಅರ್ಥ ಮಾಡಿಕೊಳ್ಳಲು ಯುರೇಕಾ ಸಹಕಾರಿಯಾಗಿದೆ. ವಿಜ್ಞಾನ–ಕಲೆ–ಸಾಂಸ್ಕೃತಿಕತೆಯ ಹೂರಣವೇ ಯುರೇಕಾ ಎಂದು ಹೇಳಿದರು.

ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಬಿ.ಎನ್. ಯಶೋಧಾ ಇನ್ನಿತರರು ಉಪಸ್ಥಿತರಿದ್ದರು.



ರೋಟರಿ ಮೈಸೂರು ಉತ್ತರ ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯದಲ್ಲಿ ನಿರ್ಮಿಸಿರುವ ಸೈಕಲ್ ಸ್ಟ್ಯಾಂಡ್ ಅನ್ನು ನಿಯೋಜಿತ ರೋಟರಿ ಜಿಲ್ಲಾ ಗವರ್ನರ್ ಹೆಚ್.ಆರ್.ಕೇಶವ್ ಉದ್ಘಾಟಿಸಿದರು. ರೋಟರಿ ಸಂಸ್ಥೆಯ ರವಿಶಂಕರ್, ರಾಮಾರಾಧ್ಯ, ರಾಜಶೇಖರ ಕದಂಬ, ಚನ್ನಬಸವರಾಜ್, ಜೆ.ಕೆ.ಜಗದೀಶ್, ಶಾರದಾ ಶಿವಲಿಂಗಸ್ವಾಮಿ, ಲೋಕನಾಥ್, ಪ್ರಭಾಕರ್, ಪ್ರಶಾಂತ್, ವೀರರಾಜೇಂದ್ರ ಶಿಕ್ಷಣ ಸಂಸ್ಥೆಯ ಗೀತಾಂಬ, ಪುರುಷೋತ್ತಮ್ ಮುಂತಾದವರು ಹಾಜರಿದ್ದರು

ಜು.1ರಿಂದ ನಡೆಸಲು ಉದ್ದೇಶಿಸಿರುವ ಪೌರಕಾರ್ಮಿಕರ ಮಹಾಸಂಘದ ಮುಷ್ಕರಕ್ಕೆ

ಮೈಸೂರು ಮಹಾನಗರ ಪಾಲಿಕೆ ಪೌರಕಾರ್ಮಿಕರ ಒಕ್ಕೂಟದ ಬೆಂಬಲವಿಲ್ಲ



ಮೈಸೂರು,ಜೂ.27(ಪಿಎಂ)– ಕರ್ನಾಟಕ ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕರ ಮಹಾಸಂಘ ಜು.1ರಿಂದ ರಾಜ್ಯಾದ್ಯಂತ ನಡೆಸಲು ಮುಂದಾಗಿರುವ ಪೌರಕಾರ್ಮಿಕರ ಮುಷ್ಕರಕ್ಕೆ ಮೈಸೂರು ಮಹಾನಗರ ಪಾಲಿಕೆಯ ಪೌರಕಾರ್ಮಿಕರ ಒಕ್ಕೂಟ ಬೆಂಬಲ ನೀಡದಿರಲು ನಿರ್ಧರಿಸಿದೆ.

ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ನೇರಪಾವತಿ ಪೌರಕಾರ್ಮಿಕರು, ಒಳಚರಂಡಿ ಸಹಾಯಕರು ಮತ್ತು ಕಸ ಸಾಗಾಣಿಕೆ ವಾಹನ ಚಾಲಕರನ್ನು ಖಾಯಂಗೊಳಿಸಲು ಆಗ್ರಹಿಸಿ ಮಹಾಸಂಘ ಬೇಡಿಕೆ ಈಡೇರುವವರೆಗೆ ಮುಷ್ಕರ ನಡೆಸಲು ಮುಂದಾಗಿದೆ. ಆದರೆ ಈ ಹೋರಾಟವನ್ನು ರಾಜಕೀಯ ಪ್ರೇರಿತ ಎಂದು ಖಂಡಿಸಿದ ಪೌರಕಾರ್ಮಿಕರ ಒಕ್ಕೂಟದ ಪದಾಧಿಕಾರಿಗಳು, ಈ ಮುಷ್ಕರಕ್ಕೆ ತಮ್ಮ ಸಂಘಟನೆ ಬೆಂಬಲ ನೀಡುತ್ತಿಲ್ಲ ಎಂದು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಅಧ್ಯಕ್ಷ ಎನ್.ರಾಜು, ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಕೋಟೆ ಶಿವಣ್ಣನವರು ಸಂಬಂಧಿಸಿದ ಅಧಿಕಾರಿಗಳೊಂದಿಗೆ ಜೂ.23ರಂದು ವಿಕಾಸಸೌಧದಲ್ಲಿ ಪೌರಕಾರ್ಮಿಕರ ಬೇಡಿಕೆಗಳ ಸಂಬಂಧ ಸಭೆ ನಡೆಸಿ, ಹಲವು ಬೇಡಿಕೆಗಳನ್ನು ಈಡೇರಿಸಲು ಸರ್ಕಾರಕ್ಕೆ ಆಯೋಗದಿಂದ ಶಿಫಾರಸ್ಸು ಮಾಡುವುದಾಗಿ ತಿಳಿಸಿದ್ದಾರೆ. ಅಲ್ಲದೆ, ಮುಖ್ಯಮಂತ್ರಿಗಳು ಇದಕ್ಕೆ ಸ್ಪಂದಿಸಲಿದ್ದಾರೆ ಎಂದು ಭರವಸೆ ನೀಡಿದ್ದಾರೆ. ಆ ಮೂಲಕ ಅನೇಕ ಬೇಡಿಕೆಗಳು ಈಡೇರುವ ಹಂತಕ್ಕೆ ತಲುಪಿದ್ದೇವೆ. ಹಾಗಾಗಿ ನಮ್ಮ ಒಕ್ಕೂಟ ಮುಷ್ಕರಕ್ಕೆ ಬೆಂಬಲ ನೀಡುತ್ತಿಲ್ಲ ಎಂದು ಹೇಳಿದರು.

ಸದ್ಯಕ್ಕೆ ಖಾಯಂ ಮಾಡದಿದ್ದರೂ ರಾಜ್ಯದ ಎಲ್ಲಾ ನೇರಪಾವತಿ ಹಾಗೂ ಹೆಚ್ಚುವರಿ ಪೌರಕಾರ್ಮಿಕರಿಗೆ 26,287 ರೂ. ಅಥವಾ 31,287 ರೂ.ನಷ್ಟು ವೇತನ ಹೆಚ್ಚಳಕ್ಕೆ ಆಯೋಗ ಶಿಫಾರಸ್ಸು ಮಾಡುತ್ತಿದೆ. ಅಲ್ಲದೆ, ಈ ಕಾರ್ಮಿಕರು ಮೃತಪಟ್ಟರೆ ಅವರ ಅವಲಂಬಿತರಿಗೆ ಉದ್ಯೋಗ ಹಾಗೂ 10 ಲಕ್ಷ ರೂ. ಪರಿಹಾರ ನೀಡಬೇಕು. ಜೊತೆಗೆ ಈ ಕಾರ್ಮಿಕರು 60 ವರ್ಷಗಳ ನಂತರ ನಿವೃತ್ತಿ ಹೊಂದಿದಾಗ, 10 ಲಕ್ಷ ರೂ. ನೆರವು ಹಾಗೂ 5 ಸಾವಿರ ರೂ. ಪಿಂಚಣಿ ನೀಡಬೇಕು ಎಂದು ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯೋಗ ತೀರ್ಮಾನ ಕೈಗೊಂಡಿದೆ ಎಂದರು.

ಅಲ್ಲದೆ, ರಾಜ್ಯದ ಎಲ್ಲಾ ಪೌರಕಾರ್ಮಿಕರಿಗೆ ಜುಲೈನಿಂದ 2 ಸಾವಿರ ರೂ. ಸಂಕಷ್ಟ ಭತ್ಯೆ ನೀಡಬೇಕು. ಇಡೀ ರಾಜ್ಯದ ಒಳಚರಂಡಿ ಸಹಾಯಕರನ್ನು ಖಾಯಂ ಮಾಡಬೇಕೆಂದು ಶಿಫಾರಸ್ಸು ಮಾಡಲು ಆಯೋಗ ನಿರ್ಧರಿಸಿದೆ ಎಂದು ಹೇಳಿದರು.

ಒಕ್ಕೂಟದ ಗೌರವಾಧ್ಯಕ್ಷ ಸಿ.ಎಂ.ರಾಮಯ್ಯ ಮಾತನಾಡಿ, ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಕೋಟೆ ಶಿವಣ್ಣ ನಮ್ಮ ಮನವಿಗೆ ಶೀಘ್ರವೇ ಸ್ಪಂದಿಸಿದ್ದಾರೆ. ಖಾಯಂ ಮಾಡದಿದ್ದರೂ ವೇತನ ಹೆಚ್ಚಳದ ಆಶ್ವಾಸನೆ ನೀಡಿದ್ದಾರೆ. ಇದರ ಮೇಲೆ ನಂಬಿಕೆ ಹೊಂದಿದ್ದೇವೆ ಎಂದರು. ಒಕ್ಕೂಟದ ಮತ್ತೊಬ್ಬ ಗೌರವಾಧ್ಯಕ್ಷ ರಾಮು, ಮಹಾಪ್ರಧಾನ ಕಾರ್ಯದರ್ಶಿ ಮಂಚಯ್ಯ, ಪ್ರಧಾನ ಕಾರ್ಯದರ್ಶಿ ರಾಮಾಂಜನೇಯ, ಖಜಾಂಚಿ ಜಯರಾಮ್ ಮತ್ತಿತರರು ಗೋಷ್ಠಿಯಲ್ಲಿದ್ದರು.

ನಾಡಪ್ರಭು ಕೆಂಪೇಗೌಡರ 513ನೇ ಜಯಂತಿ ಸಂಭ್ರಮ



ಸಮರ್ಥ ಆಡಳಿತಗಾರ, ಕೆರೆಕಟ್ಟೆಗಳ ಅಭಿವೃದ್ಧಿಯ ಹರಿಕಾರ, ಸರ್ವಜನಾಂಗಕ್ಕೂ ಆಶ್ರಯವನ್ನಿತ್ತ ಸುಂದರ ಬೆಂಗಳೂರಿನ ನಿರ್ಮಾತೃ ನಾಡಪ್ರಭು ಶ್ರೀಕೆಂಪೇಗೌಡ ಅವರ 513ನೇ ಜಯಂತಿಯನ್ನು ಸೋಮವಾರ ತಿ.ನರಸೀಪುರ, ನಂಜನಗೂಡು, ಹೆಚ್.ಡಿ.ಕೋಟೆ, ಹುಣಸೂರು, ಬನ್ನೂರು ಸೇರಿದಂತೆ ಮೈಸೂರು ಗ್ರಾಮಾಂತರದ ವಿವಿಧೆಡೆ ಅರ್ಥಪೂರ್ಣವಾಗಿ ಆಚರಿಸಲಾಯಿತು. ಎಲ್ಲೆಡೆ ಗಣ್ಯರು, ಸಾರ್ವಜನಿಕರು ಸೇರಿದಂತೆ ವಿವಿಧ ಸಂಘ– ಸಂಸ್ಥೆಗಳ ಪದಾಧಿಕಾರಿ ಗಳು ಕೆಂಪೇಗೌಡರ ಭಾವಚಿತ್ರ ಹಾಗೂ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿ, ಕೆಂಪೇಗೌಡರು ಆಡಳಿತಾವಧಿಯಲ್ಲಿ ಮಾಡಿದ ಸಾಧನೆಗಳನ್ನು ಸ್ಮರಿಸಿದರು.

ಕೆಂಪೇಗೌಡರ ಜನಪರ ಚಿಂತನೆ ಎಲ್ಲರಿಗೂ ಮಾದರಿ



ತಿ.ನರಸೀಪುರ, ಜೂ.27(ಎಸ್‌ಕೆ)– ನಾಡಪ್ರಭು ಕೆಂಪೇಗೌಡರ ಹೆಸರಿನ ಜೊತೆಗೆ ಅವರ ಸಾಧನೆಗೂ ಬಹಳ ಮಹತ್ವವಿದ್ದು, ಅವರ ದೂರದೃಷ್ಟಿ ಜನಪರ ಚಿಂತನೆ ಎಲ್ಲರಿಗೂ ಮಾದರಿಯಾಗಿದೆ. ಬೆಂಗಳೂರನ್ನು ವಾಣಿಜ್ಯ ಕೇಂದ್ರವನ್ನಾಗಿ ಪರಿವರ್ತಿಸಿದ ಕೆಂಪೇಗೌಡರು ಕರ್ನಾಟಕವನ್ನು ವಿಶ್ವದಾದ್ಯಂತ ಗುರುತಿಸುವಂತೆ ಮಾಡಿದ್ದಾರೆ ಎಂದು ಶಾಸಕ ಎಂ.ಅಶ್ವಿನ್‌ಕುಮಾರ್ ಹೇಳಿದರು.

ಪಟ್ಟಣದ ತಾಲೂಕು ಕಚೇರಿ ಸಭಾಂಗಣದಲ್ಲಿ ತಾಲೂಕು ಆಡಳಿತದಿಂದ ಆಯೋಜಿಸಲಾಗಿದ್ದ ನಾಡಪ್ರಭು ಕೆಂಪೇಗೌಡರ ಜಯಂತಿ ಕಾರ್ಯಕ್ರಮದಲ್ಲಿ ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಮಾತನಾಡಿದ ಅವರು, ಮಾಗಡಿಯಲ್ಲಿ ಜನಿಸಿದ ಕೆಂಪೇಗೌಡರು ಬೆಂಗಳೂರನ್ನು ನಿರ್ಮಾಣ ಮಾಡಿದರು ಎಂದು ತಿಳಿಸಿದರು.

ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಪಿ.ಸ್ವಾಮಿನಾಥಗೌಡ ಮಾತನಾಡಿ, ಕೆಂಪೇಗೌಡರ ಶಕ್ತಿ ಧ್ಯೇಯ ಉದ್ದೇಶಗಳನ್ನು ಸ್ಮರಿಸಿ ನಮ್ಮ ಜೀವನದಲ್ಲಿ ಅವರ ಆದರ್ಶಗಳನ್ನು ಅಳವಡಿಸಿಕೊಂಡು ಮುನ್ನಡೆದರೆ ಮಾನವ ಧರ್ಮಕ್ಕೆ ಏಳಿಗೆ ಪ್ರಾಪ್ತಿಯಾಗಿ ಸಮಾಜದ ಸುಧಾರಣೆ ತಾನಾಗಿಯೇ ಅಚ್ಚುಕಟ್ಟಾಗುತ್ತದೆ. ರಾಜ್ಯದ ಮೂಲೆ ಮೂಲೆಗಳಿಂದ ಜನರು ಬೆಂಗಳೂರಿಗೆ ಆಗಮಿಸಿ ಬದುಕನ್ನು ಕಟ್ಟಿಕೊಂಡಿದ್ದಾರೆ. ಅಲ್ಲದೇ ದೇಶ, ವಿದೇಶಗಳಿಂದ ಆಗಮಿಸಿ ಬೆಂಗಳೂರಲ್ಲಿ ನೆಲೆಯೂರಿದ್ದಾರೆ. ಈ ನಿಟ್ಟಿನಲ್ಲಿ ಕೆಂಪೇಗೌಡರ ಸೇವೆ ಸಾಧನೆ ಬರೀ ಬೆಂಗಳೂರಿಗೆ ಸೀಮಿತವಾಗಿಲ್ಲ. ಅವರು ನಾಡಿಗೆ ಕೊಡುಗೆ ನೀಡಿ ನಾಡ ಪ್ರಭುಗಳಾಗಿದ್ದಾರೆ ಎಂದರು.

ಚರಿತ್ರೆ ಓದಿದವರು ಚರಿತ್ರೆ ನಿರ್ಮಾಣ ಮಾಡಬೇಕು ಎಂಬ ಸಂದೇಶ ನೀಡುವ ಸಲುವಾಗಿ ಕೆಂಪೇಗೌಡ ಜಯಂತಿಯನ್ನು ಆಚರಿಸಲಾಗುತ್ತಿದೆ. 500 ವರ್ಷಗಳ ಹಿಂದೆ ದೂರದೃಷ್ಟಿಯನ್ನಿಟ್ಟುಕೊಂಡು ಬೆಂಗಳೂರಿಗೆ ಕಾಯಕಲ್ಪ ನೀಡಿರುವ ಕೆಂಪೇಗೌಡರ ಚಿಂತನೆ ಇಂದಿಗೂ ಪೂರಕವಾಗಿದೆ ಎಂದರು. ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ವಜ್ರೇಗೌಡ, ಮೈಮುಲ್ ನಿರ್ದೇಶಕ ಚೆಲುವರಾಜ್, ಖಾಸಗಿ ಬಸ್ ಏಜೆಂಟರ ಸಂಘದ ಅಧ್ಯಕ್ಷ ಪುಟ್ಟರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ. ಬಸವರಾಜು, ಡಿ.ಕೆ.ಶಿವಕುಮಾರ್ ಅಭಿಮಾನಿ ಬಳಗದ ಅಧ್ಯಕ್ಷ ಚೇತನ್, ಪ್ರಭುಸ್ವಾಮಿ, ತಾಲೂಕು ನಾಯಕ ಸಂಘದ ಅಧ್ಯಕ್ಷ ಚಿಕ್ಕಯ್ಯ, ಗ್ರಾಪಂ ಮಾಜಿ ಅಧ್ಯಕ್ಷ ಎ.ಜೆ.ವೆಂಕಟೇಶ್, ಚೆನ್ನೇಗೌಡ, ರಾಮಸ್ವಾಮಿ, ಸಂದೇಶ್, ದೀಪು, ಯುವ ಘಟಕದ ಅಧ್ಯಕ್ಷ ಟಿ.ಎಸ್.ಲೋಕೇಶ್, ಮರಿಗೌಡ, ಮಾದೇಗೌಡ, ಕುಮಾರ್, ಬಸ್ ಶ್ರೀನಿವಾಸ್, ಶಂಭು ದೇವನಪುರ ರಮೇಶ್, ತಿರುಮಕೂಡಲು ಲಕ್ಷ್ಮಣ, ತಹಸೀಲ್ದಾರ್ ಗಿರಿಜಾ, ಸಮಾಜ ಕಲ್ಯಾಣಾಧಿಕಾರಿ ರಾಮೇಗೌಡ ಮತ್ತಿತರರಿದ್ದರು.

> **ವಿಶ್ವ ಭೂಪಟದಲ್ಲಿ ಬೆಂಗಳೂರು ರಾರಾಜಿಸಲು ನಾಡಪ್ರಭು ಕೆಂಪೇಗೌಡರು ನೀಡಿದ ಕೊಡುಗೆಯೇ ಕಾರಣವಾಗಿದ್ದು, ಅವರ ಸಾಧನೆ ಮುಂದಿನ ಪೀಳಿಗೆಗೆ ತಿಳಿಸುವ ಉದ್ದೇಶದಿಂದ ರಾಜ್ಯ ಸರ್ಕಾರ ಕೆಂಪೇಗೌಡರ ಜಯಂತಿಯನ್ನು ಸರ್ಕಾರದ ಕಾರ್ಯಕ್ರಮವಾಗಿ ಆಚರಿಸುತ್ತಿರುವುದು ಸಂತಸದ ವಿಚಾರವಾಗಿದೆ.**
> – ಎಂ.ಅಶ್ವಿನ್‌ಕುಮಾರ್, ಶಾಸಕರು.



ಬನ್ನೂರಿನ ಅತಿಥಿ ಗೃಹದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ(ಮೂಲ ಸಂಘಟನೆ)ಯಿಂದ ಕೆಂಪೇಗೌಡರ ಜನ್ಮ ದಿನ ಆಚರಿಸಲಾಯಿತು. ಈ ವೇಳೆ ಜಿಲ್ಲಾಧ್ಯಕ್ಷ ನಾರಾಯಣ್, ಮುಖಂಡರಾದ ರಂಗಸ್ವಾಮಿ, ಶಾಂತರಾಜು, ಕೆಂಪರಾಜು, ಜಯರಾಮೇಗೌಡ ಇತರರಿದ್ದರು.



ಕಂಪಲಾಪುರದಲ್ಲಿ ನಾಡಪ್ರಭು ಕೆಂಪೇಗೌಡರ ಜಯಂತಿ ಆಚರಿಸಲಾಯಿತು. ಈ ವೇಳೆ ಗ್ರಾಪಂ ಉಪಾಧ್ಯಕ್ಷ ರಾಮಲಿಂಗಂ, ಸದಸ್ಯರಾದ ಶ್ರೀಪತಿ, ಮಂಜು, ಚಂದ್ರು, ಮುಖಂಡರಾದ ಕೆ.ಕುಮಾರ್, ಪ್ರಕಾಶ್‌ಗೌಡ, ಸ್ವಾಮಿಗೌಡ, ರಾಜೇಗೌಡ, ಮಹೇಶ್, ಸುರೇಶ್, ರವಿ, ತಮ್ಮಯ್ಯ ಇದ್ದರು. ಬಳಿಕ, ಸಾರ್ವಜನಿಕರಿಗೆ ಅನ್ನಸಂತರ್ಪಣೆ ನೆರವೇರಿತು.

ನಂ.ಗೂಡು ಸಾರಿಗೆ ಸಂಸ್ಥೆಯ ಘಟಕದಲ್ಲಿ ಕೆಂಪೇಗೌಡರ ಸ್ಮರಣೆ



ನಂಜನಗೂಡು, ಜೂ.27(ಸುದರ್ಶನ)– ಇಲ್ಲಿನ ಕೆಎಸ್‌ಆರ್‌ಟಿಸಿ ಘಟಕದಲ್ಲಿ ನಡೆದ ನಾಡಪ್ರಭು ಕೆಂಪೇಗೌಡರ ಜಯಂತಿ ಕಾರ್ಯಕ್ರಮವನ್ನು ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಿವಾಸ್ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಬೆಂಗಳೂರು ಮಹಾನಗರ ಏಷ್ಯ ಖಂಡದಲ್ಲಿಯೇ ಬೃಹತ್ ನಗರವಾಗಿ ಬೆಳೆಯಲು ಪ್ರಮುಖವಾಗಿ ನಾಡಪ್ರಭು ಕೆಂಪೇಗೌಡರ ಕೊಡುಗೆ ಕಾರಣ ಎಂದು ಹೇಳಿದರು. ಕಾರ್ಯಕ್ರಮದ ಅಂಗವಾಗಿ ಘಟಕದ ಕಾರ್ಯನಿರ್ವಹಿಸುವ ಸಿಬ್ಬಂದಿ ಮತ್ತು ಚಾಲಕ, ನಿರ್ವಾಹಕರಿಗೆ ಸಿಹಿ ಭೋಜನದ ವ್ಯವಸ್ಥೆ ಮಾಡಲಾಗಿತ್ತು. ಘಟಕದ ಸಂಚಾರಿ ಅಧಿಕಾರಿ ದಶರಥ, ಭದ್ರತಾಧಿಕಾರಿ ಶಿವರಾಜಗೌಡ, ಘಟಕ ವ್ಯವಸ್ಥಾಪಕ ಶಂಕರ್ ಸೇರಿದಂತೆ ಅಧಿಕಾರಿ ವರ್ಗ ಹಾಗೂ ಸಿಬ್ಬಂದಿ ಹಾಜರಿದ್ದರು.

ತಹಸೀಲ್ದಾರ್ ಕಚೇರಿ: ನಗರದ ತಹಶೀಲ್ದಾರ್ ಕಚೇರಿಯಲ್ಲಿ ನಾಡಪ್ರಭು ಕೆಂಪೇಗೌಡ ಜಯಂತಿ ಆಚರಿಸಲಾಯಿತು. ಕಾರ್ಯಕ್ರಮವನ್ನು ತಾಲೂಕು ಒಕ್ಕಲಿಗ ಸಂಘದ ಅಧ್ಯಕ್ಷ ಎನ್.ನರಸಿಂಹಸ್ವಾಮಿ ಉದ್ಘಾಟಿಸಿದರು.

ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷ ಎನ್.ಆರ್.ಕೃಷ್ಣಪ್ಪಗೌಡ, ತಹಸೀಲ್ದಾರ್ ಶಿವಮೂರ್ತಿ, ಮುಖಂಡರಾದ ಕಿಟ್ಟಪ್ಪ, ದೇವರಸನಹಳ್ಳಿ ಸಣ್ಣಪ್ಪಗೌಡ, ತಾಲೂಕು ಕೈಗಾರಿಕೆಗಳ ಸಂಘದ ಅಧ್ಯಕ್ಷ ರಾಮ್‌ಪ್ರಸಾದ್, ದೇವರಸನಹಳ್ಳಿ ಆನಂದ್, ಜಗದೀಶ್, ನಗರಸಭೆ ಸದಸ್ಯೆ ಶ್ವೇತಲಕ್ಷ್ಮೀ, ಅರುಣ್‌ಗೌಡ, ಸಂಜಯ್‌ಗೌಡ ಇದ್ದರು.

ಬೆಂಗಳೂರು ವಿಶ್ವದ ಗಮನ ಸೆಳೆಯಲು ಕೆಂಪೇಗೌಡರ ಕೊಡುಗೆ ಅಪಾರ



ಹೆಚ್.ಡಿ.ಕೋಟೆ, ಜೂ.27(ಮಂಜು)– ಬೆಂಗಳೂರು ವಿಶ್ವದ ಗಮನ ಸೆಳೆಯುತ್ತಿದೆ ಎಂದರೆ ಅದರ ಕೀರ್ತಿ ನಾಡಪ್ರಭು ಕೆಂಪೇಗೌಡರಿಗೆ ಸಲ್ಲುತ್ತದೆ ಎಂದು ಶಾಸಕ ಅನಿಲ್ ಚಿಕ್ಕಮಾದು ಹೇಳಿದರು.

ತಾಲೂಕು ಆಡಳಿತ ಸೌಧದಲ್ಲಿ ನಡೆದ ಕೆಂಪೇಗೌಡರ 513ನೇ ಜಯಂತಿ ಕಾರ್ಯಕ್ರಮದಲ್ಲಿ ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಅವರು, ಬೆಂಗಳೂರು ಸುಂದರ ನಗರವಾಗಿ ರೂಪುಗೊಂಡು ವಿಶ್ವದ ಗಮನ ಸೆಳೆಯ ಬೇಕಾದರೆ, ಕೆಂಪೇಗೌಡರ ಆಡಳಿತ ನೈಪುಣ್ಯತೆ ಮೆಚ್ಚಬೇಕು. ಆ ಕಾಲದಲ್ಲೇ 18 ಕಸುಬಗಳನ್ನು ಗುರುತಿಸಿ ಅಕ್ಕಿಪೇಟೆ, ಬಳೆಪೇಟೆ, ತಿಗಳರ ಪೇಟೆಗಳನ್ನು ನಿರ್ಮಿಸಿದರು. ಜನರ ಕುಡಿಯುವ ನೀರು ಮತ್ತು ಕೃಷಿಗಾಗಿ ಸಾವಿರಾರು ಕೆರೆಗಳನ್ನು ಕಟ್ಟಿಸಿದರು. ರಾಜ್ಯದ ಆಡಳಿತದಲ್ಲಿ ತಮ್ಮದೇ ಕೊಡುಗೆ ನೀಡಿದ್ದಾರೆ ಎಂದು ಬಣ್ಣಿಸಿದರು.

ತಾಲೂಕು ಒಕ್ಕಲಿಗ ಸಮಾಜದ ಅಧ್ಯಕ್ಷ ಟಿ.ವೆಂಕಟೇಶ್ ಮಾತನಾಡಿ, ಬೆಂಗಳೂರು ನಗರದ ಬೆಳವಣಿಗೆಯಲ್ಲಿ ಕೆಂಪೇಗೌಡರ ಪಾತ್ರ ಮಹತ್ವಾದಾಗಿದೆ. ಅವರ ಕೊಡುಗೆಯನ್ನು ಪ್ರತಿಯೊಬ್ಬರು ಸ್ಮರಿಸಬೇಕು. ಸರ್ಕಾರ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 108 ಅಡಿ ಎತ್ತರದ ಪ್ರತಿಮೆ ನಿರ್ಮಿಸುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ. ಸಮಾಜದ ವತಿಯಿಂದ ನಡೆಯುವ ಕೆಂಪೇಗೌಡರ ಜಯಂತಿ ಕಾರ್ಯಕ್ರಮದಲ್ಲಿ ಜಾತ್ಯಾತೀತವಾಗಿ ಎಲ್ಲರೂ ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ರತ್ನಾಂಬಿಕೆ, ಇಓ ಜೆರಾಲ್ಡ್ ರಾಜೇಶ್, ಪುರಸಭೆ ಸದಸ್ಯ ಹೆಚ್.ಸಿ.ನರಸಿಂಹಮೂರ್ತಿ, ತಾಲೂಕು ಒಕ್ಕಲಿಗ ಸಮಾಜದ ಅಧ್ಯಕ್ಷ ಟಿ.ವೆಂಕಟೇಶ್, ಜಯಪ್ರಕಾಶ್ ಚಿಕ್ಕಣ್ಣ, ತಾಲೂಕು ಜೆಡಿಎಸ್ ಅಧ್ಯಕ್ಷ ರಾಜೇಂದ್ರ ಮುಖಂಡರಾದ ನರಸಿಂಹೇಗೌಡ, ರಾಮು, ಕೃಷ್ಣೇಗೌಡ, ಎಂ.ಡಿ.ಮಂಚಯ್ಯ, ಸೋಮೇಶ್, ಪ್ರಕಾಶ್, ದಾಸೇಗೌಡ, ಹೆಚ್.ಸಿ. ಮಂಜುನಾಥ್, ಪ್ರದೀಪ್, ಹೊ.ಕೆ.ಮಹೇಂದ್ರ ಸುರೇಂದ್ರಗೌಡ, ಸತೀಶ್‌ಗೌಡ, ವೀರೇಂದ್ರ ಕುಮಾರ್, ಕಾಳಿಂಗೇಗೌಡ, ಚಲುವರಾಜು, ಪರಶಿವಮೂರ್ತಿ, ಮಹೇಶ್, ಸತೀಶ್, ಮುದ್ದುಮಲ್ಲಯ್ಯ, ಅಧಿಕಾರಿಗಳಾದ ಡಾ.ರವಿಕುಮಾರ್, ರಾಮಸ್ವಾಮಿ, ರಂಗಸ್ವಾಮಿ, ಮಹದೇವಯ್ಯ ಇದ್ದರು.

ಕೆಂಪೇಗೌಡರ ಬದಲಿಗೆ ಮದಕರಿನಾಯಕರ ಚಿತ್ರ

ತಾಲೂಕು ಆಡಳಿತದ ಎಡವಟ್ಟಿನಿಂದ ಗೊಂದಲದ ಗೂಡದ ಕಾರ್ಯಕ್ರಮ

ಹೆಚ್.ಡಿ.ಕೋಟೆ: ಇಲ್ಲಿನ ಆಡಳಿತ ಸೌಧದಲ್ಲಿ ನಡೆದ ಕೆಂಪೇಗೌಡರ ಜಯಂತಿ ಕಾರ್ಯಕ್ರಮ ತಾಲೂಕು ಆಡಳಿತದ ಎಡವಟ್ಟಿನಿಂದ ಗೊಂದಲದ ಗೂಡಾಯಿತು.



ಕಾರ್ಯಕ್ರಮದ ಹಿನ್ನೆಲೆಯಲ್ಲಿ ಅಳವಡಿಸಿದ ಫ್ಲೆಕ್ಸ್‌ನಲ್ಲಿ ನಾಡಪ್ರಭು ಕೆಂಪೇಗೌಡರ ಚಿತ್ರದ ಬದಲಿಗೆ ಮದಕರಿ ನಾಯಕರ ಚಿತ್ರವಿರುವುದನ್ನು ಕಂಡ ಮುಖಂಡರು ಬೇಸರ ವ್ಯಕ್ತಪಡಿಸಿದರು.

ತಾಲೂಕು ಆಡಳಿತದಿಂದ ಬೇಕಾಬಿಟ್ಟಿಯಾಗಿ ಕಾರ್ಯಕ್ರಮ ಆಯೋಜಿಸಲಾಗಿದೆ. 10 ಗಂಟೆಗೆ ನಡೆಯಬೇಕಿದ್ದ ಕಾರ್ಯಕ್ರಮವನ್ನು 11.30ಕ್ಕೆ ಆರಂಭಿಸಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಕೂಡಲೇ ತಹಸೀಲ್ದಾರ್ ರತ್ನಾಂಬಿಕೆ ತಾಲೂಕು ಆಡಳಿತದಿಂದ ಉಂಟಾದ ಎಡವಟ್ಟಿಗೆ ಕ್ಷಮೆ ಕೋರಿ ಮುಖಂಡರ ಮನವೊಲಿಸಲು ಪ್ರಯತ್ನಿಸಿದರು. ಆದರೆ, ಮುಖಂಡರು ಮಾತ್ರ ಮಾತಿನ ಚಕಮಕಿ ನಡೆಸಿ, ತಾಲೂಕು ಆಡಳಿತದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ತಹಸೀಲ್ದಾರ್ ರತ್ನಾಂಬಿಕೆ ಪ್ರಜ್ಞೆ ತಪ್ಪಿ ಬಿದ್ದಿದ್ದಾರೆ. ಬಳಿಕ, ಅವರಿಗೆ ಸ್ಥಳದಲ್ಲಿದ್ದವರು ನೀರು ಕುಡಿಸಿ, ಸಮಾಧಾನಪಡಿಸಿದ್ದಾರೆ. ನಂತರ ಅಧಿಕಾರಿಗಳು ಕೆಂಪೇಗೌಡರ ಚಿತ್ರವಿರುವ ಮತ್ತೊಂದು ಫ್ಲೆಕ್ಸ್ ತರಿಸಿ ಹಾಕಿ ಮುಖಂಡರ ಮನವೊಲಿಸುವಲ್ಲಿ ಯಶಸ್ವಿಯಾಗಿದರು. ಬಳಿಕ ಕಾರ್ಯಕ್ರಮ ನಡೆಯಿತು. ಈ ಸಂದರ್ಭದಲ್ಲಿ ಕಾರ್ಯಕ್ರಮಕ್ಕೆ ಬಂದ ಶಾಸಕ ಅನಿಲ್ ಚಿಕ್ಕಮಾದು ನಡೆದ ಘಟನೆಯ ಬಗ್ಗೆ ಮಾಹಿತಿ ಪಡೆದು, ಮಹಾನೀಯರ ಜಯಂತಿ ಆಚರಿಸುವಾಗ ತಾಲೂಕು ಆಡಳಿತ ಎಚ್ಚರಿಕೆ ವಹಿಸಬೇಕು ಎಂದು ತಾಕೀತು ಮಾಡಿದರು.

ನಗರೀಕರಣದ ಪಿತಾಮಹಾ ಕೆಂಪೇಗೌಡ



ಹುಣಸೂರು, ಜೂ.27(ಕೆಕೆ)– ವಿಜಯನಗರದ ಅರಸ ಕೃಷ್ಣದೇವರಾಯರ ಸಾಮಂತ ರಾಜರಾಗಿದ್ದ ನಾಡಪ್ರಭು ಕೆಂಪೇಗೌಡರು ತಮ್ಮ ಅದ್ಭುತ ಕಲ್ಪನೆಯ ಮೂಲಕ ಬೆಂಗಳೂರನ್ನು ಅಂದವಾಗಿ, ಅರ್ಥಪೂರ್ಣವಾಗಿ ನಿರ್ಮಿಸಿದ ನಗರೀಕರಣದ ಪಿತಾಮಹಾ ಎಂದು ನಿವೃತ್ತ ಪ್ರೊ.ಹೆಚ್.ಆರ್.ಸಿದ್ದೇಗೌಡ ಹೇಳಿದರು.

ನಗರದ ತಾಲೂಕು ಕಚೇರಿಯಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ನಡೆದ ನಾಡಪ್ರಭು ಕೆಂಪೇಗೌಡರ ಜಯಂತಿಯಲ್ಲಿ ಮಾತನಾಡಿದ ಅವರು, ಕೃಷ್ಣದೇವರಾಯರ ನೆರವಿನಿಂದ ಜಾತಿ, ಧರ್ಮ, ಪಂಥ ಎನ್ನದೆ ಎಲ್ಲಾ ಸಮುದಾಯಗಳಿಗೆ ಅನುಕೂಲವಾಗುವಂತೆ 20ವರ್ಷಗಳ ಅವಧಿಯಲ್ಲಿ ನೂರಾರು ಕೆರೆಗಳು, ದೇವಾಲಯ, ಅಗತ್ಯಕ್ಕೆ ತಕ್ಕಂತೆ ಪೇಟೆಗಳನ್ನು ನಿರ್ಮಿಸುವ ಮೂಲಕ ಅದ್ಭುತವಾಗಿ ಬೆಂಗಳೂರು ನಿರ್ಮಿಸಿದರು ಎಂದರು.

ಕಾರ್ಯಕ್ರಮದಲ್ಲಿ ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಗಣೇಶ್‌ಗೌಡ, ಜೆಡಿಎಸ್ ತಾಲೂಕು ಅಧ್ಯಕ್ಷ ದೇವರಹಳ್ಳಿ ಸೋಮಶೇಖರ್, ಮುಖಂಡರಾದ ಗೋವಿಂದೇಗೌಡ, ಗೋಪಿಗೌಡ, ತಹಸೀಲ್ದಾರ್ ಕರ್ನಲ್ ಲೋಕೇಶ್, ಉಪತಹಸೀಲ್ದಾರ್ ಶಕೀಲಾಬಾನು, ಸಿಡಿಪಿಓ ರಶ್ಮಿ, ಬಿ.ಓ. ರೇವಣ್ಣ, ನಾಗಣ್ಣ, ಪಾಂಡು ಇದ್ದರು.

ಶಾಸಕರ ವಿರುದ್ಧ ಆಕ್ರೋಶ

ಹುಣಸೂರು: ತಾಲೂಕು ಕಚೇರಿಯಲ್ಲಿ ನಡೆದ ಕೆಂಪೇಗೌಡರ ಜಯಂತಿ ಕಾರ್ಯಕ್ರಮದಲ್ಲಿ ನೆಪ ಮಾತ್ರಕ್ಕೆ ಪಾಲ್ಗೊಂಡಿದ್ದಾರೆ. ಎಂದು ಶಾಸಕ ಹೆಚ್.ಪಿ. ಮಂಜುನಾಥ್ ವಿರುದ್ಧ ತಾಲೂಕು ಒಕ್ಕಲಿಗರ ಸಂಘದ ಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಶಾಸಕರು ಕೆಂಪೇಗೌಡರ ವಿಚಾರಧಾರೆ ಗಳನಾಗಲಿ, ಸಮುದಾಯದ ಮುಖಂಡರನ್ನು ಸ್ವಾಗತಿಸುವುದಾಗಲಿ ಮಾಡಲಿಲ್ಲ. ನೆಪ ಮಾತ್ರಕ್ಕೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಅವರ ಉದಾಸೀನ ವರ್ತನೆಯಿಂದ ಬೇಸರವುಂಟಾಗಿದೆ ಎಂದು ಸುದ್ದಿಗೋಷ್ಠಿಯಲ್ಲಿ ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಗಣೇಶ್ ಹೇಳಿದರು. ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಗಣೇಶ್‌ಗೌಡ, ನಿರ್ದೇಶಕ ಬಿಳಿಕೆರೆ ಪ್ರಸನ್ನ, ಮುಖಂಡ ಬಸವರಾಜು ಮಾತನಾಡಿ, ಶಾಸಕರಾಗಿ ಇವರ ವರ್ತನೆ ಖಂಡನೀಯವಾಗಿದ್ದು, ಇವರು ಸಮಾಜದ ಜನತೆಯ ಕ್ಷಮೆಯಾಚಿಸಬೇಕು. ಇಲ್ಲದಿದ್ದಲ್ಲಿ ತಾಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ತುರ್ತಾಗಿ ಬೇರೆ ಕಾರ್ಯಕ್ರಮ ಭೇಟಿ ನೀಡುವ ಉದ್ದೇಶದಿಂದ ಬಂದೆ: ಶಾಸಕರು

ನಾಡಪ್ರಭು ಕೆಂಪೇಗೌಡರ ಜಯಂತಿ ಕಾರ್ಯಕ್ರಮದಲ್ಲಿ ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ತುರ್ತಾಗಿ ಬೇರೆ ಕಾರ್ಯಕ್ರಮಕ್ಕೆ ಹೋಗಬೇಕಿದ್ದ ಕಾರಣ ನಾನು ಹೊರ ಬಂದೆ ವಿನಃ ಬೇರೆ ಉದ್ದೇಶದಿಂದಲ್ಲ ಎಂದು ಶಾಸಕ ಹೆಚ್.ಪಿ. ಮಂಜುನಾಥ್ ಸ್ಪಷ್ಟನೆ ನೀಡಿದರು.

ನಗರದ ತಮ್ಮ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಕ್ಷದ ಕಾರ್ಯಕರ್ತರೊಬ್ಬರ ತಂದೆ ಮೃತಪಟ್ಟಿದ್ದರು. ಶವ ಸಂಸ್ಕಾರದ ಸ್ಥಳಕ್ಕೆ ತುರ್ತಾಗಿ ಭೇಟಿ ನೀಡುವ ಕಾರಣದಿಂದ ನಾನು ಹೊರಟು ಬಂದೆ. ಯಾವುದೇ ರೀತಿಯ ಅವಮಾನ ಮಾಡಬೇಕೆಂಬ ಉದ್ದೇಶವಿರಲಿಲ್ಲ. ಆದರೆ, ಕೆಲವರು ನನ್ನನ್ನು ತಪ್ಪಾಗಿ ಅರ್ಥ ಮಾಡಿಕೊಂಡಿದ್ದಾರೆ. ಕೆಂಪೇಗೌಡರ ಮೇಲೆ ನನಗೆ ಬಹಳ ಪ್ರೀತಿ–ಅಭಿಮಾನವಿದೆ. ಮುಂದಿನ ದಿನಗಳಲ್ಲಿ ಕೆಂಪೇಗೌಡರ ಜಯಂತಿ ಆಚರಿಸಿದರೆ ನನ್ನ ಸಂಪೂರ್ಣ ಸಹಕಾರ ನೀಡುತ್ತೇನೆ ಎಂದರು.

ಡಾ.ಯತೀಂದ್ರರ ಹುಟ್ಟುಹಬ್ಬಕ್ಕೆ ಶುಭಾಶಯ



ತಿ.ನರಸೀಪುರ ವರುಣಾ ವಿಧಾನಸಭಾ ಕ್ಷೇತ್ರದ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಅವರ ಹುಟ್ಟುಹಬ್ಬಕ್ಕೆ ಎಪಿಎಂಸಿ ಮಾಜಿ ಅಧ್ಯಕ್ಷ ಎನ್.ಅನಿಲ್‌ಕುಮಾರ್ ಶುಭಾಶಯ ಕೋರಿ ಅಭಿನಂದಿಸಿದರು. ಈ ವೇಳೆ ಅಮ್ಜದ್‌ಖಾನ್, ನಜರ್‌ಬಾದ್ ನಟರಾಜ್, ಮೆಲ್ಲಹಳ್ಳಿ ರವಿ, ಯೂಥ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ಮಹದೇವ್, ಕುಪ್ಪೇಗಾಲ ಬಾಬು, ಸುತ್ತೂರು ಗ್ರಾಪಂ ಮಾಜಿ ಅಧ್ಯಕ್ಷ ಜಗದೀಶ್, ಮಾಜಿ ಸದಸ್ಯ ಕುಮಾರ್, ಹನೂರು ಶಿವು ಮತ್ತಿತರ ಮುಖಂಡರು ಹಾಜರಿದ್ದರು.

ನಾಲೆಗೆ ಎತ್ತಿನಗಾಡಿ ಮಗುಚಿ ಬಿದ್ದು ರೈತ ಸಾವು

ಚುಂಚನಕಟ್ಟೆ, ಜೂ.27(ಮಧು)– ನಾಲೆಗೆ ಎತ್ತಿನಗಾಡಿ ಮಗುಚಿ ಬಿದ್ದ ಪರಿಣಾಮ ರೈತ ಸಾವನ್ನಪ್ಪಿರುವ ಘಟನೆ ಕೆ.ಆರ್.ನಗರ ತಾಲೂಕಿನ ಶ್ರೀರಾಮಪುರ ಗ್ರಾಮದ ಬಳಿ ನಡೆದಿದೆ.



ಕೆಸ್ತೂರು ಕೊಪ್ಪಲು ಗ್ರಾಮದ ಚಂದ್ರೇಗೌಡ(53) ಮೃತಪಟ್ಟವರು. ಇವರು ಶ್ರೀರಾಮಪುರ ಗ್ರಾಮದ ಮುರ್‌ಕಟ್ಟೆ ಬಳಿ ತಮ್ಮ ಜಮೀನಿನಲ್ಲಿ ಕೆಲಸ ಮುಗಿಸಿ ಬರುತ್ತಿದ್ದಾಗ ಆಕಸ್ಮಿಕವಾಗಿ ರಾಮಸಮುದ್ರ ಬಲದಂಡೆಗೆ ಎತ್ತಿನ ಗಾಡಿ ಮಗುಚಿ ಬಿದ್ದಿದೆ. ಪರಿಣಾಮ ತೀವ್ರವಾಗಿ ಗಾಯಗೊಂಡ ಚಂದ್ರೇಗೌಡ ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ. ಮೃತ ರೈತನಿಗೆ ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಇದ್ದಾರೆ. ಘಟನಾ ಸ್ಥಳಕ್ಕೆ ಚುಂಚನಕಟ್ಟೆ ಉಪ ಪೊಲೀಸ್ ಠಾಣೆಯ ಎಎಸ್ಐ ವಸಂತ್, ಸಿಬ್ಬಂದಿಗಳಾದ ದಯಾನಂದ್, ರಾಮೇನ ಹಳ್ಳಿ ಮಂಜು ಭೇಟಿ ನೀಡಿ ಪರಿಶೀಲನೆ ನಡೆಸಿ ದರು. ಈ ಸಂಬಂಧ ಕೆ.ಆರ್.ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿಯಂತ್ರಣ ತಪ್ಪಿ ನಾಲೆಗೆ ಬೈಕ್ ಬಿದ್ದು ಸವಾರ ಸಾವು

ಹಿರೀಕ್ಯಾತನಹಳ್ಳಿ, ಜೂ.27 (ಸ್ವಾಮಿಗೌಡ) – ನಿಯಂತ್ರಣ ತಪ್ಪಿ ನಾಲೆಯೊಳಗೆ ಬೈಕ್ ಬಿದ್ದು ಅದರ ಸವಾರ ಸಾವನ್ನಪ್ಪಿರುವ ಘಟನೆ ಹುಣಸೂರು ತಾಲೂಕಿನ ಗಾವಡಗೆರೆ ಹೋಬಳಿಯ ಮರೂರು ಕಾವಲ್ ಬಳಿ ನಡೆದಿದೆ.



ಚುಂಚನಕಟ್ಟೆ ಹೋಬಳಿ ಹಳೆಯೂರಿನ ಈರಯ್ಯರವರ ಪುತ್ರ ಮಹೇಶ್(47) ಮೃತ ವ್ಯಕ್ತಿ. ಇವರಿಗೆ ಪತ್ನಿ, ಇಬ್ಬರು ಮಕ್ಕಳಿದ್ದಾರೆ.

ಮೃತ ಮಹೇಶ್ ಹುಣಸೂರಿಗೆ ಬಂದು ಸ್ವಗ್ರಾಮಕ್ಕೆ ತನ್ನ ಬೈಕ್‌ನಲ್ಲಿ ತೆರಳುತ್ತಿದ್ದಾಗ ಮರೂರುಕಾವಲ್ ಬಳಿಯ ರಸ್ತೆ ಪಕ್ಕದಲ್ಲಿದ್ದ ನಾಲೆಗೆ ನಿಯಂತ್ರಣ ತಪ್ಪಿ ಬೈಕ್ ಸಮೇತ ನಾಲೆಗೆ ಬಿದ್ದಿದ್ದಾರೆ. ಪರಿಣಾಮ ತೀವ್ರವಾಗಿ ಗಾಯಗೊಂಡ ಮಹೇಶ್ ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ. ದಾರಿ ಹೋಕರು ಬೈಕ್ ನಂಬರ್ ಮೂಲಕ ಪತ್ತೆ ಮಾಡಿ ಪೋಷಕರಿಗೆ ಹಾಗೂ ಪೊಲೀಸರಿಗೆ ಮಾಹಿತಿ ನೀಡಿದ ಮೇರೆಗೆ ಶವವನ್ನು ಮೇಲೆತ್ತಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ಮಾಡಿದ ನಂತರ ಶವವನ್ನು ವಾರಸುದಾರರಿಗೆ ಒಪ್ಪಿಸಲಾಯಿತು.

ಕಾರುಗಳ ನಡುವೆ ಡಿಕ್ಕಿ: ಓರ್ವ ಸಾವು

ಹೆಚ್.ಡಿ.ಕೋಟೆ, ಜೂ.27(ಮಂಜು)– ಕಾರುಗಳ ನಡುವೆ ಮುಖಾಮುಖಿ ಡಿಕ್ಕಿ ಹೊಡೆದ ಪರಿಣಾಮ ಓರ್ವ ಸಾವನ್ನಪ್ಪಿ, ಐವರು ಗಾಯಗೊಂಡಿರುವ ಘಟನೆ ತಾಲೂಕಿನ ಮಾದಪುರ ಮತ್ತು ಹೈರಿಗೆ ಗ್ರಾಮದ ಬಳಿ ಸೋಮವಾರ ನಡೆದಿದೆ.



ಕೇರಳ ಮೂಲದ ಇಸ್ಮಾಯಿಲ್(22) ಮೃತಪಟ್ಟ ವ್ಯಕ್ತಿ. ಇಸ್ಮಾಯಿಲ್ ಹಾಗೂ ಸ್ನೇಹಿತರು ಕಾರಿನಲ್ಲಿ ಮೈಸೂರಿನಿಂದ ಮಾನಂದವಾಡಿಗೆ ತಾಲೂಕಿನ ಮಾದಪುರ ಗ್ರಾಮದ ಬಳಿ ಹೋಗುತ್ತಿದ್ದಾಗ ಮಾನಂದವಾಡಿಯಿಂದ ಮೈಸೂರಿಗೆ ತೆರಳುತ್ತಿದ್ದ ಮತ್ತೊಂದು ಕಾರು ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದೆ. ಪರಿಣಾಮ ಎರಡು ಕಾರಿನ ಮುಂಭಾಗ ನಜ್ಜುಗುಜ್ಜಾಗಿದ್ದು, ಕಾರಿನ ಮುಂಭಾಗದಲ್ಲಿ ಕುಳಿತ್ತಿದ್ದ ಇಸ್ಮಾಯಿಲ್ ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ. ಎರಡು ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಐವರಿಗೆ ಗಾಯವಾಗಿದ್ದು, ಅವರನ್ನು ಮೈಸೂರಿನ ಕೆಆರ್.ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಸಂಬಂಧ ಹೆಚ್.ಡಿ.ಕೋಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಉಡುಗೊರೆ ಬಂದಿದೆ ಎಂದು ನಂಬಿಸಿ ಹಣ ಪಡೆದು ವಂಚಿಸುತ್ತಿದ್ದಾರೆ ಎಚ್ಚರ!



ಡಾ.ಚಂದ್ರಗುಪ್ತ

ಮೈಸೂರು, ಜೂ.27 (ಆರ್‌ಕೆ)– ನಿಮಗೆ ಭಾರೀ ಮೊತ್ತದ ಉಡುಗೊರೆ (Gift) ಬಂದಿದೆ ಎಂದು ಹೇಳಿ ನಂಬಿಸಿ, ಹಣ ಪಡೆದು ವಂಚಿಸುತ್ತಿರುವ ಪ್ರಕರಣಗಳು ದಿನೇದಿನೆ ಮೈಸೂರಿನಲ್ಲಿ ಹೆಚ್ಚಾಗುತ್ತಿವೆ.

ಸಾಮಾಜಿಕ ಜಾಲ ತಾಣಗಳಲ್ಲಿ ಪರಿಚಯವಾಗುವ ವ್ಯಕ್ತಿಗಳು, ಮ್ಯಾಟ್ರಿಮೋನಿಯಲ್ ವೆಬ್‌ಸೈಟ್‌ನಲ್ಲಿ ನಕಲಿ ಮಾಹಿತಿ ಬಳಸಿ ನಕಲಿ ಪ್ರೊಫೈಲ್ ತೆರೆದು ಆಕರ್ಷಕ ವ್ಯಕ್ತಿಯ ಭಾವಚಿತ್ರ ಅಳವಡಿಸುತ್ತಾರೆ. ಬೆಲೆ ಬಾಳುವ ಉಡುಗೊರೆ ಬಂದಿದ್ದು, ಅದನ್ನು ಪಡೆದುಕೊಳ್ಳಲು ಹಣ ಪಾವತಿಸುವಂತೆ ಕೇಳುತ್ತಾರೆ. ಗಿಫ್ಟ್ ಆಸೆಗಾಗಿ ಹಿಂದು–ಮುಂದು ನೋಡದೆ ಹಣ ಕಳುಹಿಸಿದ್ದಲ್ಲಿ, ನಂತರ ಆ ವ್ಯಕ್ತಿಯು ನಿಮ್ಮ ಸಂಪರ್ಕಕ್ಕೆ ಸಿಗದೆ ವಂಚಿಸುತ್ತಾರೆ ಎಂದು ನಗರ ಪೊಲೀಸ್ ಕಮೀಷ್ನರ್ ಡಾ.ಚಂದ್ರಗುಪ್ತ ತಿಳಿಸಿದ್ದಾರೆ.

ನಕಲಿ ಖಾತೆಯಲ್ಲಿ ತಾನು ವಿದೇಶದಲ್ಲಿ ಪ್ರತಿಷ್ಠಿತ ಕಂಪನಿಯಲ್ಲಿ ಗರಿಷ್ಠ ಸಂಬಳ ಪಡೆಯುವ ಹುದ್ದೆಯಲ್ಲಿರುವುದಾಗಿ ನಮೂದಿಸಿ ವಧು–ವರರ ಅನ್ವೇಷಣೆಯಲ್ಲಿರುವವರನ್ನು ಸಂಪರ್ಕಿಸಿ ವಾಟ್ಸಾಪ್ ಮೂಲಕ ಚಾಟಿಂಗ್ ಮಾಡುತ್ತಾ ನಂಬಿಕೆ ಗಳಿಸುವ ವ್ಯಕ್ತಿಗಳು ಸಲಿಗೆ ಬೆಳೆಸಿ ಮದುವೆಯಾಗುವುದಾಗಿಯೂ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ ಎಂದು ತಿಳಿಸಿದ್ದಾರೆ.

ಪ್ರೀತಿಯ ಸಂಕೇತವಾಗಿ ದುಬಾರಿ ಉಡುಗೊರೆಯೊಂದಿಗೆ ಖುದ್ದಾಗಿ ಭೇಟಿ ಮಾಡಲು ಬರುತ್ತಿರುವುದಾಗಿ ಅಥವಾ ಉಡುಗೊರೆ ಕಳುಹಿಸುತ್ತಿರುವುದಾಗಿ ತಿಳಿಸುತ್ತಾರೆ. ಉಡುಗೊರೆ ಕಳುಹಿಸಿದ ಬಗ್ಗೆ ಇನ್ವಾಯ್ಸ್ ಅನ್ನು ಕೊರಿಯರ್ ರಶೀದಿ ಸೃಷ್ಟಿಸಿ ಆನ್‌ಲೈನ್ ಮೂಲಕ ಕಳುಹಿಸಿ ನಕಲಿಯಾಗಿ ಸೃಷ್ಟಿಸಿದ ಟ್ರ್ಯಾಕಿಂಗ್ ಐಡಿಯನ್ನು ಶೇರ್ ಮಾಡುತ್ತಾರೆ

> ಆನ್‌ಲೈನ್ ವಹಿವಾಟು ನಡೆಸುವವರ ಬಗ್ಗೆ ಎಚ್ಚರದಿಂದಿರಬೇಕು. ಒಂದು ವೇಳೆ ಈ ಮಾದರಿಯ ವಂಚನೆಗೊಳಗಾದಲ್ಲಿ 1930ಗೆ ಕರೆ ಮಾಡಿ ದೂರು ನೀಡಬಹುದು ಅಥವಾ ನ್ಯಾಷನಲ್ ಸೈಬರ್ ಕ್ರೈಂ ರಿಪೋರ್ಟಿಂಗ್ ಪೋರ್ಟಲ್ (NCCRP)ನಲ್ಲಿ ದೂರು ನೀಡಬಹುದು. ಹತ್ತಿರದ ಪೊಲೀಸ್ ಠಾಣೆ ಅಥವಾ ಸಿಇಎನ್ ಕ್ರೈಂ ಪೊಲೀಸ್ ಠಾಣೆಗೆ ದೂರು ಸಲ್ಲಿಸಬಹುದು ಹಾಗೂ ಸ್ಥಿರ ದೂ.ಸಂಖ್ಯೆ 0821–2418598 ಅಥವಾ ಮೊ. 9480802263ಗೆ ಕರೆ ಮಾಡಿ ಮಾಹಿತಿ ನೀಡಬೇಕು.
>
> –ಡಾ. ಚಂದ್ರಗುಪ್ತ, ನಗರ ಪೊಲೀಸ್ ಆಯುಕ್ತ


ಎಂದು ಕಮೀಷ್ನರ್ ಎಚ್ಚರಿಸಿದ್ದಾರೆ.

ನಂತರ ಕರೆ ಮಾಡುವ ಗಂಡಸು ಅಥವಾ ಹೆಂಗಸರು, ಹಿಂದಿ ಅಥವಾ ಇಂಗ್ಲಿಷ್‌ನಲ್ಲಿ ಮಾತನಾಡುತ್ತಾ, ವಿಮಾನ ನಿಲ್ದಾಣದ ಅಧಿಕಾರಿಗಳು, ಕಸ್ಟಮ್, ಏರ್‌ಪೋರ್ಟ್, ಸೆಕ್ಯೂರಿಟಿ, ಐಟಿ, ಆರ್‌ಬಿಐ, ಕ್ಲಿಯರೆನ್ಸ್, ಆಂಟಿ ಟೆರರಿಸ್ಟ್ ಸೆಲ್ ಎಂಬಿತ್ಯಾದಿ ಅಧಿಕಾರಿಗಳೆಂದು ಪರಿಚಯ ಮಾಡಿಕೊಂಡು ಬೇರೆ ಬೇರೆ ಕಾರಣ ನೀಡಿ ವಿವಿಧ ಬ್ಯಾಂಕ್ ಖಾತೆಗಳಿಗೆ ಹಣ ಜಮೆ ಮಾಡುವಂತೆ ತಿಳಿಸಿ ಹಣ ವರ್ಗಾವಣೆ ಮಾಡುತ್ತಿದ್ದಂತೆಯೇ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ವಂಚಿಸುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿವೆ ಎಂದು ಡಾ.ಚಂದ್ರಗುಪ್ತ ತಿಳಿಸಿದ್ದಾರೆ.

ಕೆಲ ಪ್ರಕರಣಗಳಲ್ಲಿ ಹಣ ಹಿಂದಿರುಗಿಸುವಂತೆ ಕೇಳಿದಾಗ, ರೀಫಂಡ್ ಪ್ರೊಸೆಸಿಂಗ್ ಚಾರ್ಜ್, ಜಿಎಸ್‌ಟಿ, ಅಡಿಷನಲ್ ಬೆನಿಫಿಟ್ ಚಾರ್ಜಸ್, ಕರೆನ್ಸಿ ಕನ್‌ವರ್ಷನ್ ಚಾರ್ಜಸ್, ಫೈನಲ್ ಸೆಟಲ್ಮೆಂಟ್ ಚಾರ್ಜಸ್, ಡಾಕ್ಯುಮೆಂಟ್ ಕನ್‌ವರ್ಷನ್ ಚಾರ್ಜಸ್ ಎಂದು ಹೇಳಿ ಮತ್ತಷ್ಟು ಹಣ ಕೀಳುವ ಪ್ರಯತ್ನಗಳು ನಡೆಯುತ್ತಿರುವ ಬಗ್ಗೆ ಸಿಇಎನ್ ಪೊಲೀಸ್ ಠಾಣೆಯಲ್ಲಿ ಪ್ರಕರಣಗಳು ದಾಖಲಾಗುತ್ತಿವೆ ಎಂದು ತಿಳಿಸಿದ್ದಾರೆ.

ಡಿಎಫ್‌ಆರ್‌ಎಲ್‌ನಿಂದ ಪರಿಸರ ಸ್ನೇಹಿ ಬ್ಯಾಗ್ ತಯಾರಿಕೆ

ಶ್ರೀಚಾಮುಂಡೇಶ್ವರಿ ದೇವಸ್ಥಾನಕ್ಕೆ 5,000 ಬಯೋಡಿಗ್ರೇಡಬಲ್ ಬ್ಯಾಗ್ ಹಸ್ತಾಂತರ



> ಡಿಎಫ್‌ಆರ್‌ಎಲ್ ಸಂಸ್ಥೆಯ ಪರಿಸರ ಸ್ನೇಹಿ ಬಯೋಡಿಗ್ರೇಡಬಲ್ ಬ್ಯಾಗ್‌ನ ದರವೂ ಕಡಿಮೆ ಇದ್ದು, ಗುಣಮಟ್ಟವೂ ಉತ್ಕೃಷ್ಟವಾಗಿದೆ. ಬೇಡಿಕೆ ಬಂದರೆ ನಂಜನಗೂಡಿನ ಶ್ರೀ ನಂಜುಂಡೇಶ್ವರ ದೇವಸ್ಥಾನ ಸೇರಿದಂತೆ ಎಲ್ಲಾ ಮುಜರಾಯಿ ದೇವಸ್ಥಾನಗಳಿಗೂ ತಾವು ತಯಾರಿಸಿರುವ ಬ್ಯಾಗ್‌ಗಳನ್ನು ಪೂರೈಸುವುದಾಗಿ ಡಿಎಫ್‌ಆರ್‌ಎಲ್ ಅಧಿಕಾರಿಗಳು ತಿಳಿಸಿದ್ದಾರೆ.
>
> –ಯತಿರಾಜ್ ಸಂಪತ್‌ಕುಮಾರನ್

ಮೈಸೂರು, ಜೂ.27(ಆರ್‌ಕೆ)–ಪ್ಲಾಸ್ಟಿಕ್ ಬ್ಯಾಗ್ ನಿರ್ಮೂಲನೆ ಮಾಡುವ ಸಲುವಾಗಿ ಮೈಸೂರಿನ ಡಿಎಫ್‌ಆರ್‌ಎಲ್ ಸಂಸ್ಥೆಯು ಪರಿಸರ ಸ್ನೇಹಿ ಬಯೋಡಿಗ್ರೇಡಬಲ್ ಬ್ಯಾಗ್‌ಗಳನ್ನು ತಯಾರಿಸಿದೆ.

ಸಾರ್ವಜನಿಕರಲ್ಲಿ ಪ್ಲಾಸ್ಟಿಕ್ ಬ್ಯಾಗ್ ಬಳಸದಂತೆ ಜಾಗೃತಿ ಮೂಡಿಸುವ ಸಲುವಾಗಿ ಸಂಸ್ಥೆಯು ಮೈಸೂರಿನ ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಜೂನ್ 19ರಂದು 5,000 ಬ್ಯಾಗ್‌ಗಳನ್ನು ಕೊಡುಗೆಯಾಗಿ ನೀಡಿದೆ. ಮಣ್ಣಿನಲ್ಲಿ ಸುಲಭವಾಗಿ ಕರಗುವ ಈ ಪರಿಸರ ಸ್ನೇಹಿ ಬ್ಯಾಗ್ ಅನ್ನು ಒಂದೇ ಬಾರಿ ಬಳಸಿಯೂ ಬಿಸಾಡಬಹುದು ಅಥವಾ ಎರಡು–ಮೂರು ಸಲವೂ ಉಪಯೋಗಿಸಬಹುದಾಗಿದೆ ಎಂದು ಡಿಎಫ್‌ಆರ್‌ಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಭಕ್ತರಿಗೆ ಪ್ರಸಾದ ನೀಡಲು ಬಳಸುತ್ತಿದ್ದ ಪ್ಲಾಸ್ಟಿಕ್ ಬ್ಯಾಗ್‌ಗಳಿಗೆ ಪರ್ಯಾಯವಾಗಿ ಬಯೋಡಿಗ್ರೇಡಬಲ್ ಮತ್ತು ಡಿಸ್ಪೋಸಬಲ್ ಬ್ಯಾಗ್ ನೀಡುವಂತೆ ಸಲಹೆ ನೀಡಿರುವ ಡಿಎಫ್‌ಆರ್‌ಎಲ್ ಅಧಿಕಾರಿಗಳು, ಮೊದಲ ಹಂತದಲ್ಲಿ 5,000 ಬ್ಯಾಗ್‌ಗಳನ್ನು ಸಂಸದ ಪ್ರತಾಪ್ ಸಿಂಹ ಮತ್ತು ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಎನ್.ಎಸ್. ಯತಿರಾಜ್ ಸಂಪತ್‌ಕುಮಾರನ್ ಅವರಿಗೆ ಹಸ್ತಾಂತರಿಸಿದ್ದಾರೆ.

ಆಧುನಿಕ ತಂತ್ರಜ್ಞಾನ ಬಳಸಿ ತಯಾರಿಸಿರುವ ಬ್ಯಾಗ್ ಮಣ್ಣಿನಲ್ಲಿ ಕರಗಿ ಕಾಂಪೋಸ್ ಅಗಿ ಪರಿವರ್ತನೆಯಾಗಲಿದ್ದು, ಪರಿಸರದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವುದಿಲ್ಲ. ಗರಿಷ್ಠ 5 ಕೆ.ಜಿ. ತೂಕದವರೆಗೆ ಪ್ರಸಾದವನ್ನು ಸಂರಕ್ಷಿಸುವ ಸಾಮರ್ಥ್ಯ ಹೊಂದಿರುವ ಈ ಬ್ಯಾಗ್‌ಗಳನ್ನು ಸುಲಭವಾಗಿ ಕ್ಯಾರಿ ಮಾಡಬಹುದಾಗಿದೆ.

ಸಾಂಪ್ರದಾಯಿಕ ಪಾಲಿಥೀನ್ ಬ್ಯಾಗ್‌ಗಳನ್ನು ಪೆಟ್ರೋಕೆಮಿಕಲ್‌ನಿಂದ ತಯಾರಿಸುವುದರಿಂದ ಅವು ಪರಿಸರದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದ್ದು, ಸುರಕ್ಷತೆ ದೃಷ್ಟಿಯಿಂದಲೂ ಹಾನಿಕಾರಕವಾಗಿರುವುದರಿಂದ ತಮ್ಮ ಸಂಸ್ಥೆ ತಯಾರಿಸಿರುವ ಡಿಸ್ಪೋಸಬಲ್ ಬ್ಯಾಗ್‌ಗಳು ಮಾಲಿನ್ಯ ರಹಿತವಾಗಿವೆ ಎಂದು ಡಿಎಫ್‌ಆರ್‌ಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಜಾನ್ನಿಜಾರ್ಜ್, ಡಾ.ಎಂ.ಪಾಲ್ ಮುರುಗನ್ ಮತ್ತು ಡಾ.ವಾಸು ದೇವನ್ ನೇತೃತ್ವದ 15 ಮಂದಿ ವಿಜ್ಞಾನಿಗಳು ಕಳೆದ 5 ವರ್ಷಗಳಿಂದ ಸಂಶೋಧನೆ ನಡೆಸಿ ಪರಿಸರ ಸ್ನೇಹಿ ಬ್ಯಾಗ್‌ಗಳನ್ನು ತಯಾರಿಸಿದ್ದು, ಪ್ಲಾಸ್ಟಿಕ್ ಬ್ಯಾಗ್‌ಗಳಿಗೆ ಪರ್ಯಾಯವಾಗಿ ಇವುಗಳನ್ನು ಬಳಸಬಹುದಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇದೀಗ ಹಸ್ತಾಂತರಿಸಿರುವ ಬ್ಯಾಗ್ ಮೇಲೆ 'ಡಿಎಫ್‌ಆರ್‌ಎಲ್' ಮತ್ತು 'ಶ್ರೀ ಚಾಮುಂಡೇಶ್ವರಿ ದೇವಸ್ಥಾನ' ಎಂದು ಮುದ್ರಿಸಲಾಗಿದೆ. ಪ್ರಸಾದ ತುಂಬಿ ಕೊಡಲು ಸೂಕ್ತ ಎನಿಸಿದಲ್ಲಿ ಮುಂದೆ ನಿರಂತರವಾಗಿ ಡಿಎಫ್ ಆರ್‌ಎಲ್‌ನ ಬಯೋಡಿಗ್ರೇಡಬಲ್ ಬ್ಯಾಗ್‌ಗಳನ್ನು ಖರೀದಿಸಲಾಗುವುದು ಎಂದು ಚಾಮುಂಡೇಶ್ವರಿ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಯತಿರಾಜ್ ಸಂಪತ್ ಕುಮಾರನ್ ತಿಳಿಸಿದ್ದಾರೆ.



ಮೈಸೂರಿನ ಕಾಡಾ ಕಚೇರಿ ಆವರಣದಲ್ಲಿ ವಿಧಾನಪರಿಷತ್ ಸದಸ್ಯ ಎ.ಹೆಚ್. ವಿಶ್ವನಾಥ್ ಅವರ ನೂತನ ಕಚೇರಿ ಉದ್ಘಾಟನೆಯಲ್ಲಿ ಶಾಸಕ ಎಲ್.ನಾಗೇಂದ್ರ ಭಾಗವಹಿಸಿ, ಶುಭ ಕೋರಿದರು. ಈ ವೇಳೆ ಚಾಮರಾಜ ಕ್ಷೇತ್ರದ ಬಿಜೆಪಿ ಪ್ರಧಾನ ಕಾರ್ಯದರ್ಶಿ ಪುನೀತ್ ಮತ್ತಿತರರು ಹಾಜರಿದ್ದರು.

ಇಂದು ಸ್ಫೂರ್ತಿಯ ನಡೆ ಕಾರ್ಯಕ್ರಮ

ಮೈಸೂರು, ಜೂ.27– ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ಸ್ಪೋಕನ್ ಇಂಗ್ಲೀಷ್ ಮತ್ತು ವ್ಯಕ್ತಿತ್ವ ವಿಕಸನ ತರಬೇತಿ ನೀಡುವ ಸ್ಫೂರ್ತಿಯ ನಡೆ ಯೋಜನೆಯನ್ನು 2022ರ ಜೂನ್ 28ರಂದು ಬೆಳಗ್ಗೆ 10 ಗಂಟೆಗೆ ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ ಆದಿಚುಂಚನಗಿರಿ ರಸ್ತೆ ಕುವೆಂಪು ನಗರದಲ್ಲಿ ಹಮ್ಮಿಕೊಳ್ಳಲಾಗಿದೆ.

ಯೋಜನೆಯ ಉದ್ಘಾಟನೆಯನ್ನು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪೂರ್ಣಿಮಾ ನೆರವೇರಿಸುವರು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

50ನೇ ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು



ಶ್ರೀಮತಿ ಜಯಮ್ಮ ಮತ್ತು ವೈ.ಎಸ್.ಈಶ್ವರ್
ಶುಭಕೋರುವವರು: ಮಕ್ಕಳು ಮತ್ತು ಸೊಸೆಯಂದಿರು, ಅಳಿಯ & ಮಗಳು ಮತ್ತು ಮೊಮ್ಮಕ್ಕಳು, ಇಲವಾಲ

4ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ 4 ವರ್ಷ ಕಳೆದರೂ ಸದಾ ನಿಮ್ಮ ನೆನೆಪಿನಲ್ಲಿರುವ
ದುಃಖತಪ್ತರು:
ಮಕ್ಕಳು , ಮನೋಜ್, ಮೌಲ್ಯ, ಅಕ್ಕ, ಭಾವ ತಮ್ಮ : ರಾಮಕೃಷ್ಣ, ಸುನೀತ, ಸ್ವರೂಪ್, ಶ್ವೇತ ಕುಟುಂಬದವರು
ಶ್ರೀಮತಿ ಯಶೋಧ

ಮೈಸೂರು ವಿಶ್ವವಿದ್ಯಾನಿಲಯ
(ESTD-1916)
(Re-accredited by NAAC with CGPA 3.47 on four point scale with A grade)
ಕುಲಸಚಿವ (ಪರೀಕ್ಷಾಂಗ)ರವರ ಕಛೇರಿ,
ವಿಶ್ವವಿದ್ಯಾನಿಲಯ ಕಾರ್ಯಸೌಧ,ಕ್ರಾಫರ್ಡ್ ಭವನ, ಮೈಸೂರು–570 005.

ಸಂಖ್ಯೆ: No.Ex.1.7/Stationary/2013-14 ದಿನಾಂಕ 17–06–2022

ಟೆಂಡರ್ ಪ್ರಕಟಣೆ E-Procurement Portal ಮುಖಾಂತರ ಮಾತ್ರ.

ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗಕ್ಕೆ ಅವಶ್ಯಕವಾಗಿರುವ ಓ.ಎಂ.ಆರ್. ಹಾಗೂ ಬಾರ್‌ಕೋಡೆಡ್ ಉತ್ತರ ಪತ್ರಿಕೆಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಸರಬರಾಜು ಮಾಡಲು ಟೆಂಡರನ್ನು ಕರೆಯಲಾಗಿದೆ. ಟೆಂಡರನ್ನು ಸಲ್ಲಿಸಲು ಕೊನೆಯ **ದಿನಾಂಕ:08–07–2022 ಸಂಜೆ 5.30 ಗಂಟೆಯವರೆಗೆ,** ಮತ್ತು ಸ್ವೀಕರಿಸಲಾದ ಟೆಂಡರ್‌ಗಳನ್ನು ತೆರೆಯುವ **ದಿನಾಂಕ: 11–07–2022 ರಂದು ಬೆಳಗ್ಗೆ 11.00 ಗಂಟೆಗೆ (ರಜಾ ದಿನಗಳನ್ನು ಹೊರತುಪಡಿಸಿ) ವಿಶ್ವವಿದ್ಯಾನಿಲಯದ ಕುಲಸಚಿವ(ಪರೀಕ್ಷಾಂಗ), ಪರೀಕ್ಷಾ ವಿಭಾಗದ ಕ್ರಾಫರ್ಡ್‌ಭವನ ಇವರ ಸಮಕ್ಷಮದಲ್ಲಿ ಟೆಂಡರ್‌ನ್ನು ತೆರೆಯಲಾಗುವುದು.**
Tender Indent Number UOM/EB/Answer Booklet/2022-23

ಹೆಚ್ಚಿನ ವಿವರಗಳಿಗೆ **Web site: https://eproc.karnataka.govt.in** ನ್ನು ವೀಕ್ಷಿಸುವುದು ಅಥವಾ ದೂರವಾಣಿ ಸಂಖ್ಯೆ: 0821–2419214, 2419204, ಅನ್ನು ಸಂಪರ್ಕಿಸುವುದು.

ಸಹಿ/–
ಕುಲಸಚಿವರು (ಪರೀಕ್ಷಾಂಗ)

ಮೊದಲನೇ ವರ್ಷದ ಪುಣ್ಯತಿಥಿ



ಲೇಟ್ ಶ್ರೀ ಬೆಟ್ಟೇಗೌಡ ರವರು

ಮಾಲೀಕರು, ಸಂಗಮ್ ವೈನ್ಸ್, ಬಾಬುರಾಯನಕೊಪ್ಪಲು

ಇವರ ಮೊದಲನೇ ವರ್ಷದ ಪುಣ್ಯತಿಥಿಯನ್ನು ದಿನಾಂಕ: 28.06.2022ನೇ ಮಂಗಳವಾರ ನಮ್ಮ ಸ್ವಗೃಹದಲ್ಲಿ ನೆರವೇರಿಸಲಾಗುವುದರಿಂದ ಈ ಕಾರ್ಯಕ್ಕೆ ಆಗಮಿಸಬೇಕಾಗಿ ಕೋರುತ್ತೇವೆ.

ದುಃಖತಪ್ತರು:
ಶ್ರೀಮತಿ ಅರುಣಜ್ಯೋತಿ, ಶ್ರೀಮತಿ ಸುಕನ್ಯ ಮತ್ತು ಶ್ರೀ ಕೃಷ್ಣೇಗೌಡರು ಮತ್ತು ಮಕ್ಕಳು ಶ್ರೀಮತಿ ರಂಜಿತ ಮತ್ತು ಶ್ರೀ ಬಿ.ಸಾಗರ್ ಮತ್ತು ಮಕ್ಕಳು, ಶ್ರೀಮತಿ ತೇಜಸ್ವಿನಿ ಮತ್ತು ಶ್ರೀ ಬಿ.ಸುಂದರ್ ಮತ್ತು ಮಕ್ಕಳು, ಅಕ್ಕ-ತಂಗಿಯರು, ಭಾವಂದಿರು ಮತ್ತು ಕುಟುಂಬ, ಬಾಬುರಾಯನಕೊಪ್ಪಲು ಗ್ರಾಮಸ್ಥರು.

ಭೋಜನ: ಮಧ್ಯಾಹ್ನ 12.30ಗಂಟೆಗೆ ಸ್ಥಳ: ಭಾರತಿ ಕಲ್ಯಾಣ ಮಂಟಪ